# ಹೊಸ ಮನುಷ್ಯ

**ಸಮಾಜವಾದಿ ಮಾಸಿಕ**

**ಮೇ, ೨೦೧೮** **ಸಂಪಾದಕ : ಡಿ.ಎಸ್.ನಾಗಭೂಷಣ** **ಸಂಪುಟ: ೭ ಸಂಚಿಕೆ: ೪**

**ಚಂದಾ ರೂ. ೧೫೦/-(ಮಾರ್ಚ್‌ನಿಂದ ಸೆಪ್ಟಂಬರ್, ೨೦೧೮ರ ಸಂಚಿಕೆಯವರೆಗೆ ಮಾತ್ರ ) ಬೆಲೆ:** ಬಿಡಿ ಪ್ರತಿ: ರೂ. ೨೦/- ಪುಟ: ೨೦



**ವಿಳಾಸ:** ಎಚ್.ಐ.ಜಿ-೫, 'ನುಡಿ', ಕಲ್ಲಳ್ಳಿ ಬಡಾವಣೆ, ವಿನೋಬ ನಗರ, ಶಿವಮೊಗ್ಗ-೫೭೭ ೨೦೪

**ದೂ:** ೦೮೧೮೨-೨೪೮೫೭೪ **ಸಂಚಾರಿ:** ೯೪೪೯೭ ೪೨೨೮೪ ***ಈ ಮೇಲ್:*** dsnagabhushana@gmail.com


## ಸಂಪಾದಕರ ಟಿಪ್ಪಣಿಗಳು

ಪ್ರಿಯ ಓದುಗರೇ,

ರಾಜ್ಯ ವಿಧಾನಸಭಾ ಚುನಾವಣೆಗಳಿಗೆ ಮತದಾನದ ದಿನ ತೀರಾ ಹತ್ತಿರ ಬಂದಿರುವ ಸಂದರ್ಭದಲ್ಲಿ ಬಿಡುಗಡೆಯಾಗುತ್ತಿರುವ ನಮ್ಮ ಪತ್ರಿಕೆಯ ಈ ಸಂಚಿಕೆಗೆ ಸಂಪಾದಕನಾಗಿ ನಿರ್ದಿಷ್ಟವಾಗಿ ಏನು ಟಿಪ್ಪಣಿಗಳನ್ನು ಬರೆಯಬೇಕೋ ತೋಚದೆ ಕೂತಿದ್ದೇನೆ. ಪರಿಸ್ಥಿತಿ ಅಷ್ಟು ಜಿಗುಪ್ಸೆಕರವೂ ಗೊಂದಲಕಾರಿಯೂ ಆಗಿದೆ. ಇತ್ತೀಚೆಗೆ, ಕೊಳಕಾದ ಈ ರಾಜಕಾರಣಕ್ಕೆ ಪರ್ಯಾಯ ಒದಗಿಸುವುದಾಗಿ ಹೇಳಿಕೊಂಡು ಸ್ಥಾಪಿತವಾದ 'ಸ್ವರಾಜ್ ಇಂಡಿಯಾ'ಕ್ಕೂ ಕುಟುಂಬ ರಾಜಕಾರಣದ ರೋಗ ಹತ್ತಿಕೊಂಡಿರುವ ಬಗ್ಗೆ ವಿಷಾದಿಸಿ ನಾನು 'ಪ್ರಜಾವಾಣಿ'ಗೆ ಬರೆದ ಪತ್ರ ಓದಿದ ಮೈಸೂರಿನ ಗೆಳೆಯರೊಬ್ಬರು ನನಗೆ ದೂರವಾಣಿ ಕರೆ ಮಾಡಿದರು. 'ಯಾರಿಂದಲೋ ಏನೋ ಆಗುವುದೆಂಬ ಭ್ರಾಂತಿ ನಿಮ್ಮದು!' ಎಂದು ಮಾತು ಆರಂಭಿಸಿದ ಅವರು ಒಟ್ಟು ಹೇಳಿದ್ದಿಷ್ಟು: ಶೇ. ೯೦ರಷ್ಟು ಜನರೇ/ಮತದಾರರೇ ದುಷ್ಟರೂ ಭ್ರಷ್ಟರೂ ಆಗಿರುವಾಗ ಇಲ್ಲಿ ಪರಿಶುದ್ಧವಾದುದೇನನ್ನೂ, ಪ್ರಜಾತಾಂತ್ರಿಕ ರಾಜಕಾರಣಕ್ಕೆ ಪೂರಕವಾದುದೇನನ್ನೂ ಸದ್ಯಕ್ಕೆ ನಿರೀಕ್ಷಿಸಲಾಗದು. ಈಗ ಕಾಣುತ್ತಿರುವ ಅವನತಿ ಸಂಪೂರ್ಣವಾಗಿ, ನಮ್ಮ ಈ ವ್ಯವಸ್ಥೆ ಸಂಪೂರ್ಣ ಕುಸಿದು ಹೊಸ ವ್ಯವಸ್ಥೆ ಅನಿವಾರ್ಯವಾಗಿ ಉದಯವಾಗುವವರೆಗೆ ನಾವು ಈಗ ಇರುವ ಕೊಳಕಿನಲ್ಲೇ ಕಡಿಮೆ ಕೊಳಕಿನೊಂದಿಗೆ ಬದುಕುವುದನ್ನು ಕಲಿಯುವುದೊಂದೇ ದಾರಿ. ಅದಕ್ಕೆ ನಾನು ಕೇಳಿದೆ : ಯಾವುದು ಹೆಚ್ಚು ಕೊಳಕು ಎಂಬುದಕ್ಕೆ ಮಾನದಂಡಗಳೇನಾದರೂ ನಿಮ್ಮ ಬಳಿ ಇವೆಯಾ? ಅದಕ್ಕವರು ಹೇಳಿದರು : ಎಲ್ಲರಿಗೂ, ಎಲ್ಲ ಕಡೆಗೂ ಸಾಮಾನ್ಯವಾದವು ಇರಲಾರವು. ಆದರೆ ಅವನ್ನು ನಾವು ನಮ್ಮ ಜಾಗದಲ್ಲಿ ಸಮಯ ಸಂದರ್ಭಕ್ಕೆ ತಕ್ಕಂತೆ ನಾವೇ ರೂಪಿಸಿಕೊಳ್ಳಬೇಕು. ಉದಾಹರಣೆಗೆ ನೋಡಿ, ನನ್ನ ಕ್ಷೇತ್ರದಲ್ಲಿ ಮುಖ್ಯಮಂತ್ರಿ ಸಿದ್ಧರಾಮಯ್ಯ ಓರ್ವ ಅಭ್ಯರ್ಥಿ. ಅವರ ಐದು ವರ್ಷಗಳ ಆಡಳಿತ ನೋಡಿದರೆ ಅವರಿಗೆ ಮತ ಹಾಕುವ ಮನಸ್ಸು ಖಂಡಿತ ಬರದು. ಆದರೆ ಅವರ ಎದುರಿಗೆ ನಿಂತಿರುವ ಆಸಾಮಿಯನ್ನು ನೋಡಿದರೆ ಭಯವೇ ಆಗುತ್ತದೆ!

ಅದೇ ದಿನ ನನ್ನ ಇನ್ನೋರ್ವ ಗೆಳೆಯರು ಬೆಂಗಳೂರಿನಿಂದ ಕರೆ ಮಾಡಿದರು. ಅವರದೂ ಅದೇ ವಾದ. ನಂನಮ್ಮ ಕ್ಷೇತ್ರಗಳಲ್ಲಿ ಯಾರು ಕಡಿಮೆ ಅಪಾಯಕಾರಿ ಅನ್ನಿಸುವರೋ ಅವರಿಗೆ ಮತ ಹಾಕಬೇಕಾಗಿದೆ. ನಾನು ಕೇಳಿದೆ: ಪಕ್ಷ, ಅದರ ಧೋರಣೆ ನೋಡಬೇಡವೆ? ಉದಾಹರಣೆಗೆ, ಕೋಮುವಾದಿ ಮತ್ತು ಜಾತಿವಾದಿ ರಾಜಕಾರಣ ಮಾಡುವ ಪಕ್ಷಗಳನ್ನು ದೂರ ಇಡಬೇಡವೇ? ಅವರು ಒಂದು ಕಾಲದಲ್ಲಿ 'ಪ್ರಗತಿಪರ'ರೆಂದು ಕರೆಯಲ್ಪಡುತ್ತಿದ್ದ ವಿಶ್ವವಿದ್ಯಾನಿಲಯದ ನಿವೃತ್ತ ಪ್ರಾಧ್ಯಾಪಕರು. ಅವರು ಹೇಳಿದರು: 'ಥೂಥೂಥೂ! ಇಂತಹ ಮಾತುಗಳೆಲ್ಲ ಬೆಲೆ ಕಳೆದುಕೊಂಡು ಬಹಳ ಕಾಲವಾಯಿತು. ಚುನಾವಣೆಗೆ ಟಿಕೆಟ್ ಹಂಚುವ ಕಾಲ ಬರಲಿ, ನೀವೇ ನೋಡುವಿರಂತೆ ತತ್ವದ ಮಾತು ಏನಾಗುವುದೆಂದು? ಎಲ್ಲ ಪಕ್ಷಗಳದ್ದೂ ಒಂದೇ ಕಥೆ! ಅದೇ ಆರ್ಥಿಕ ನೀತಿ. ಅದು ಅಂತಾರಾಷ್ಟ್ರೀಯ ಕಾರ್ಪೋರೇಟ್‌ಶಾಹಿ ಆರ್ಥಿಕ ನೀತಿ. ಯಾರೇ ಅಧಿಕಾರಕ್ಕೆ ಬಂದರೂ ಅದರ ಬಲೆಯಿಂದ ಬಿಡಿಸಿಕೊಳ್ಳಲಾಗದಷ್ಟು ಅಂತಾರಾಷ್ಟ್ರೀಯ ಹಣಕಾಸು ಸಂಸ್ಥೆಗಳೊಡನೆಯ ಸಾಲ ಒಪ್ಪಂದಗಳಿಂದ ದೇಶ ಬಂಧಿತವಾಗಿದೆ. ತಮ್ಮ ರಾಜಕಾರಣದ ಈ ಅನಿವಾರ್ಯ ದುರ್ಲಕ್ಷಣವನ್ನು ಮುಚ್ಚಿಕೊಳ್ಳಲು ಈ ಪಕ್ಷಗಳು ತಮ್ಮ ಸರ್ಕಾರಗಳ ವತಿಯಿಂದ 'ಮುದ್ರಾ', 'ಜನಧನ್' 'ಆರೋಗ್ಯ ವಿಮೆ' ಅಥವಾ 'ಮನ್ರೇಗಾ', 'ಅನ್ನಭಾಗ್ಯ,' 'ಇಂದಿರಾ ಕ್ಯಾಂಟೀನ್' ಮುಂತಾದ ತತ್ಕಾಲೀನ ಜನಪ್ರಿಯ ಕಾರ್ಯಕ್ರಮಗಳನ್ನು ಹರಿಬಿಡುತ್ತವೆ. ಈಗಂತೂ ನಮ್ಮ ರಾಜ್ಯದ ಮೂರೂ ಪ್ರಮುಖ ಪಕ್ಷಗಳ ನಡುವೆ ಸ್ಪರ್ಧಾತ್ಮಕ ಕೋಮುವಾದ ಮತ್ತು ಜಾತೀಯತೆಯ ನಿರ್ಲಜ್ಜ ಪ್ರದರ್ಶನ ನಡೆದಿದೆ.' ನಾನೂ ವಾದ ಮಂಡಿಸಿದೆ: 'ನಮ್ಮ ದೇಶವನ್ನು ಹಿಂದೂ ರಾಷ್ಟ್ರ ಮಾಡುವ ಗುಪ್ತ ಕಾರ್ಯಕ್ರಮದ ಅಪಾಯ ಇದ್ದೇ ಇದೆಯಲ್ಲ? ಗುಜರಾತ್ ನರಮೇಧ ಮರೆತಿರಾ?' ಅದಕ್ಕವರ ಉತ್ತರ: 'ಸಿಖ್ ನರಮೇಧವನ್ನೇಕೆ ಮರೆತಿರಿ? ಇರಲಿ, ಆ ಭಯಗಳೆಲ್ಲ ಮೋದಿಯನ್ನು ಇನ್ನು ಹತ್ತು ವರ್ಷ ಅಲ್ಲಾಡಿಸಲಾಗುವುದಿಲ್ಲ ಎಂಬ ಆತಂಕವಿದ್ದಾಗ ನಿಜವೆಂದು ತೋರುತ್ತಿತ್ತು. ಆದರೆ ಈಗ ನನಗೆ ಹಾಗೆನಿಸುವುದಿಲ್ಲ. ಮೋದಿಗೆ ಸದ್ಯಕ್ಕೆ ಆಡಳಿತ ಸುಧಾರಿಸಿ ಮುಂದಿನ ಚುನಾವಣೆಯಲ್ಲಿ ಅಧಿಕಾರ ಉಳಿಸಿಕೊಂಡು ಮುಖಭಂಗವಾಗದಂತೆ ನೋಡಿಕೊಂಡರೆ ಸಾಕಾಗಿದೆ! ಹಾಗಾಗಿಯೇ ತೊಗಾಡಿಯಾರ 'ಹಿಂದೂ ಪರಿವಾರ' ಈಗ ಮೋದಿ ವಿರುದ್ಧ ಹಾರಾಡತೊಡಗಿರುವುದು.'

ಗೆಳೆಯರ ಈ ಮಾತುಗಳನ್ನು ಸಂಪೂರ್ಣ ಒಪ್ಪಲು ನನ್ನ ಒಳಮನಸ್ಸು ಏಕೋ ಒಪ್ಪಲಿಲ್ಲ. ನಮ್ಮ ನ್ಯಾಯಾಂಗದಲ್ಲಿನ ಇತ್ತೀಚಿನ ಕೆಲ ತಳಮಳಗಳು ನಿಜವಾಗಿಯೂ ಆತಂಕ ಹುಟ್ಟಿಸುವಂತಿವೆ. ಆದರೆ ಭ್ರಷ್ಟಾಚಾರ, ಅದಕ್ಷತೆ, ಜಾತಿವಾದ, ಸ್ವಜನಪಕ್ಷಪಾತ ಅತ್ತಿರಲಿ, ಮೊದಲು ಕೋಮುವಾದವನ್ನು ಎದುರಿಸೋಣ ಎಂಬ ನನ್ನ ಇತರ ಗೆಳೆಯರ ತರ್ಕವೂ ನನಗೆ ಸಮ್ಮತವೆನಿಸುತ್ತಿಲ್ಲ. ನಾವು ಕೋಮುವಾದ ವಿರೋಧಿ ಒಂದಂಶ ಕಾರ್ಯಕ್ರಮದ ಕುರುಡಿನಲ್ಲಿ 'ಪ್ರಗತಿಪರ'ರೆನಿಸಿಕೊಂಡವರು ನಮ್ಮನಮ್ಮನ್ನೇ ಮೆಚ್ಚಿಸಲು ಮಾತಾಡಿಕೊಳ್ಳುತ್ತಲೋ, ಘೋಷಣೆ ಕೂಗುತ್ತಲೋ ಇದ್ದೇವೆಯೇ ಹೊರತು, ನಮ್ಮಾಚೆಯ ಸಾಮಾನ್ಯ ಜನತೆ ಏಕೆ ನಮ್ಮಂತೆ ಯೋಚಿಸುತ್ತಿಲ್ಲ ಎಂಬುದರ ಬಗ್ಗೆ ತಲೆ ಕೆಡಿಸಿಕೊಂಡಂತೆಯೇ ಇಲ್ಲ. ಈ ಜನರೇನೂ ಕೆಟ್ಟವರಲ್ಲ. ಆದರೆ ಇವರು ಕೋಮುವಾದಿ ರಾಜಕೀಯ ಪಕ್ಷವನ್ನೋ ಅಪ್ಪ-ಮಕ್ಕಳ ಪಕ್ಷವನ್ನೋ ಏಕೆ ಬೆಂಬಲಿಸುತ್ತಾರೆ ಎಂಬುದರ ಬಗ್ಗೆ ಇವರು ಯೋಚಿಸಿಯೇ ಇಲ್ಲ. ಇವರು ಈ ಸಂಕೀರ್ಣತೆಯಲ್ಲಿ ಯೋಚಿಸಿದ್ದರೆ ಇವರ ಆಯ್ಕೆ ಇಷ್ಟು ಸರಳವಾಗುತ್ತಿರಲಿಲ್ಲ. ಇವರು ಸತತವಾಗಿ ಬೆಂಬಲಿಸುತ್ತಿರುವ ಪಕ್ಷ ಸರ್ವನಾಶದ ಭೀತಿಯನ್ನು ಎದುರಿಸುತ್ತಿರಲಿಲ್ಲ.

ಈ ಭೀತಿಯನ್ನು ಹುಟ್ಟಿಸಿದ ಕಳೆದ ಲೋಕಸಭಾ ಚುನಾವಣಾ ಫಲಿತಾಂಶಗಳು ಆ ಪಕ್ಷದ ಅಂತರಾಳವನ್ನು ಬುಡಸಮೇತ ಅಲುಗಾಡಿಸಬೇಕಿತ್ತು. ಅದು ಒಂದು ಪುನರ್ಜನ್ಮಕ್ಕೆ ಸಿದ್ಧವಾಗಬೇಕಿತ್ತು. ಆದರೆ ಅದು ಇತ್ತೀಚೆಗೆ ನೆಹರೂ ವಂಶದ ಮತ್ತೊಂದು ಕುಡಿಯನ್ನೇ ತನ್ನ ನಾಯಕನೆಂದು ಆರಿಸಿಕೊಂಡು ತಾನು ಮೂಲಭೂತವಾಗಿ ಬದಲಾಗಲು ಸಿದ್ಧವಿಲ್ಲ ಎಂದು ಘೋಷಿಸಿಕೊಂಡಿದೆ. ಈ ರಾಷ್ಟ್ರ ಇದಕ್ಕಿಂತ ಹೆಚ್ಚಿನ ಗುಣಮಟ್ಟದ ನಾಯಕತ್ವಕ್ಕೆ ಅರ್ಹವಿಲ್ಲವೆ? ಶತಮಾನಕ್ಕೂ ಹೆಚ್ಚು ಕಾಲ ಬಾಳಿ ಬದುಕಿರುವ ಈ ಪಕ್ಷ, ಇತ್ತೀಚೆಗೆ ಕಲಿತಂತಿರುವ ಆಕ್ರಮಣಕಾರಿ ಮಾತುಗಾರಿಕೆಯ ಹೊರತಾಗಿ ರಾಷ್ಟ್ರವನ್ನು ಮುನ್ನೆಡಸಬಲ್ಲ ವಿವೇಕ, ವಿಚಾರ, ಪ್ರಬುದ್ಧತೆಗಳನ್ನು ಯಾವ ರೀತಿಯಲ್ಲೂ ಪ್ರದರ್ಶಿಸದ ಕುಟುಂಬ ರಾಜಕಾರಣದ ಈ ಕುಡಿಯ ಹೊರತಾಗಿ ಬೇರಾವ ನಾಯಕನನ್ನೂ ನಿರ್ಮಿಸಿಕೊಳ್ಳಲಾಗದಷ್ಟು ದದ್ದು ಬಿದ್ದು ಹೋಗಿರುವಾಗ ಅದು ಇಂದಿನ ಜಾಗತಿಕ ಸವಾಲುಗಳೆದುರು ದೇಶವನ್ನು ಮುನ್ನಡೆಸಬಲ್ಲುದೆ? ಎಂಬ ಪ್ರಶ್ನೆಯನ್ನು. ಈ ಪ್ರಗತಿಪರ ಗೆಳೆಯರು ಕೇಳುವ ಸ್ಥಿತಿಯಲ್ಲಿ ಇಲ್ಲದಿದ್ದರೆ ಜನಗಳಾದರೂ ಅದನ್ನು ಕೇಳಬಾರದೆಂದು ನಿರೀಕ್ಷಿಸುವುದು ಶುದ್ಧ ರಾಜಕೀಯ ಅವಿವೇಕವೆನ್ನಿಸಿಕೊಳ್ಳುತ್ತದೆ. ಆದರೆ ಇಷ್ಟೆಲ್ಲ ಗೊಂದಲ-ಹತಾಶೆಗಳ ನಡುವೆಯೂ ಜನ ಈ ಬಾರಿ ಎಂತಹ ವಿವೇಕವನ್ನು ಪ್ರದರ್ಶಿಸುತ್ತಾರೋ ಕಾದು ನೋಡಬೇಕು! ಎಷ್ಟಾದರೂ ಆ ತೀರ್ಮಾನವೇ ಲೆಕ್ಕಕ್ಕೆ ಬರುವುದು ತಾನೇ?

**-ಸಂಪಾದಕ**

## ಚಿತ್ರದುರ್ಗದಲ್ಲೊಂದು ‘ಮಂತ್ರ ಮಾಂಗಲ್ಯ’ ವಿವಾಹ



**ಭಾ**ರತೀಯ ವಿಜ್ಞಾನ ಸಂಸ್ಥೆಯಲ್ಲಿ ಸಹಾಯಕ ಸಂಶೋಧಕರಾಗಿರುವ ಡಾ. ನಾಗಭೂಷಣ ಪಟೇಲ್ ಮತ್ತು ಡಾ. ಎಂ.ಕಾವ್ಯ ಅವರ ವಿವಾಹ ಕುವೆಂಪು ಪ್ರಣೀತ ‘ಮಂತ್ರ ಮಾಂಗಲ್ಯ’ದ ಪ್ರಕಾರ ಏಪ್ರಿಲ್ ೨೩ರಂದು ಚಿತ್ರದುರ್ಗದ ಶ್ರೀರಾಮ ಕಲ್ಯಾಣ ಮಂದಿರದಲ್ಲಿ ನಡೆಯಿತು. ಶಿವಮೊಗ್ಗದ ಲೋಹಿಯಾ ಜನ್ಮಶತಾಬ್ಧಿ ಪ್ರತಿಷ್ಠಾನದ ಅಧ್ಯಕ್ಷ ಡಿ.ಎಸ್. ನಾಗಭೂಷಣ ಅವರು ವಧು–ವರರಿಗೆ ‘ಮಂತ್ರ ಮಾಂಗಲ್ಯ’ದ ಪ್ರತಿಜ್ಞಾ ವಿಧಿಗಳನ್ನು ಬೋಧಿಸಿ ಅವರನ್ನು ದಂಪತಿಗಳೆಂದು ಘೋಷಿಸಿದರು. ಸವಿತಾ ನಾಗಭೂಷಣ ಅವರು ‘ಮಂತ್ರ ಮಾಂಗಲ್ಯ’ ವಿವಾಹವಾದ ದಂಪತಿಗಳು ಪಾಲಿಸಬೇಕಾದ ನೀತಿ ಸಂಹಿತೆಯನ್ನು ಓದಿ ಹೇಳಿದರು. ನವ ವಧೂವರಲ್ಲದೆ ಅವರ ತಂದೆ ತಾಯಿಗಳು ಮತ್ತು ಭಾರತೀಯ ವಿಜ್ಞಾನ ಸಂಸ್ಥೆಯ ಪ್ರಾಧ್ಯಾಪಕರಾದ ಪ್ರೊ. ಎಸ್.ಬಿ. ಕೃಪಾನಿಧಿ ಮತ್ತು ಅವರ ಶ್ರೀಮತಿ ಭಾರತಿ ಅವರು ವೇದಿಕೆಯಲ್ಲಿದ್ದರು.

ಜಿಲ್ಲೆಯ ವಿವಿಧ ಭಾಗಗಳಿಂದ ಬಂದಿದ್ದ ನಾಗಭೂಷಣ ಪಟೇಲ್ ಅವರ ಸಾವಿರಾರು ಬಂಧುಬಾಂಧವರು ಮತ್ತು ಗೆಳೆಯ–ಗೆಳತಿಯರ ಸಮೂಹ ಈ ಮದುವೆಗೆ ಸಾಕ್ಷಿಯಾಯಿತು. ನಂತರ ಮಾತನಾಡಿದ ಡಿ.ಎಸ್. ನಾಗಭೂಷಣ ಅವರು ‘ಮಂತ್ರ ಮಾಂಗಲ್ಯವು ಜಾತಿ–ಅಂತಸ್ತು–ಅಧಿಕಾರ ಸಂಪತ್ತುಗಳ ಆಧಾರದ ಮತ್ತು ಅರ್ಥವಾಗದ ಮಂತ್ರಗಳನ್ನು ಹೇಳುವ ಪುರೋಹಿತರ ಅರ್ಥಹೀನ ಮಧ್ಯಪ್ರವೇಶದ ಸಾಂಪ್ರದಾಯಿಕ ಮದುವೆಯನ್ನು ಗಂಡು–ಹೆಣ್ಣು ಮತ್ತು ಅವರ ಕುಟುಂಬಗಳ ನಡುವಣ ಪರಸ್ಪರ ಸ್ನೇಹ–ಪ್ರೇಮಗಳ ಬಾಂಧವ್ಯದ ಪ್ರತೀಕವನ್ನಾಗಿ ಮಾರ್ಪಡಿಸುವ ಸದುದ್ದೇಶವನ್ನು ಹೊಂದಿದೆ ಎಂದರು. ಅಲ್ಲದೆ, ನಾಗಭೂಷಣ ಪಟೇಲ್ ಅವರು ಈ ಸಂದೇಶವನ್ನು ಕುವೆಂಪು, ಗಾಂಧಿ ಮತ್ತು ಲೋಹಿಯಾ ಅವರ ವಿಚಾರಗಳೊಂದಿಗೆ ತಮ್ಮ ಬಂಧು ಬಾಂಧವರೆಲ್ಲರಿಗೂ ತಲುಪಿಸಬೇಕೆಂಬ ಹಂಬಲದಿಂದ ಈ ಬೃಹತ್ ಪ್ರಮಾಣದಲ್ಲಿ ಜನಸೇರಿಸುವ ಪ್ರಯತ್ನ ಮಾಡಿದ್ದು, ಇದು ಆಕ್ಷೇಪಾರ್ಹವಾಗಿರದೆ ಸ್ತುತ್ಯಾರ್ಹವಾಗಿದೆ ಎಂದರು. ಇದೇ ಸಂರ್ಭದಲ್ಲಿ ಲೋಹಿಯಾ ಜನ್ಮಶತಾಬ್ಧಿ ಪ್ರತಿಷ್ಠಾನವು ‘ಮಂತ್ರ ಮಾಂಗಲ್ಯ’ದ ಪ್ರತಿಜ್ಞಾ ವಿಧಿ ಮತ್ತು ನೀತಿ ಸಂಹಿತೆಯನ್ನೊಳಗೊಂಡ ಕರಪತ್ರವೊಂದನ್ನು ವಿವಾಹಕ್ಕೆ ಬಂದವರೆಲ್ಲರಿಗೂ ಹಂಚಿತು. ತುಮಕೂರು ವಿಶ್ವವಿದ್ಯಾಲಯದ ಕನ್ನಡ ಪ್ರಾಧ್ಯಾಪಕ ಡಾ. ನಿತ್ಯಾನಂದ ಬಿ. ಶೆಟ್ಟಿ ಸಮಾರಂಭದ ನಿರೂಪಣೆ ಮಾಡಿದರು.

ಆಹ್ವಾನಿತರೆಲ್ಲರಿಗೂ ಊಟದ ನಂತರ ತಾಂಬೂಲ ರೂಪದಲ್ಲಿ ಗಾಂಧೀಜಿಯ ‘ಹಿಂದ್ ಸ್ವರಾಜ್’ ಮತ್ತು ಡಿ.ಎಸ್. ನಾಗಭೂಷಣ ಅವರ ‘ಇಂದಿಗೆ ಬೇಕಾದ ಗಾಂಧಿ’ ಕೃತಿಗಳನ್ನು ನೀಡಲಾಯಿತು.

(ವರದಿ : **ಸವಿತಾ ನಾಗಭೂಷಣ**)

## ನಿಮ್ಮ ಪತ್ರ

ಪ್ರಿಯ ಸಂಪಾದಕರೇ,

ಏಪ್ರಿಲ್ ಸಂಚಿಕೆ ತಲುಪಿದೆ. ಲೋಹಿಯಾ–ಅಂಬೇಡ್ಕರ್–ಗಾಂಧಿ ಕುರಿತ ವಿವಿಧ ನೋಟಗಳ ಬರಹಗಳು ‘ಹೊಸ ಮನುಷ್ಯ’ದಲ್ಲಿ ಬರುತ್ತಲೇ ಇದೆ. ಇದು ಎಷ್ಟು ಅಗತ್ಯ ಅಂದರೆ ನಮ್ಮ ಇವತ್ತಿನ ಹಲವಾರು ಕಾಯಿಲೆಗಳಿಗೆ ಇಂಥ ಇವರೆಲ್ಲರ ವ್ಯಕ್ತಿತ್ವಸಾಮ್ಯತೆ, ಭಿನ್ನತೆ, ಚಿಂತನೆಗಳೆ ಔಷಧಿ. ಸಂಪಾದಕರ ಟಿಪ್ಪಣಿಯಿಂದ ಹಿಡಿದು ಕೊನೆಯ ಪುಟದವರೆಗೂ ಪತ್ರಿಕೆ ಕಾಪಾಡಿಕೊಂಡು ಬರುತ್ತಿರುವ ವಿಚಾರವಂತಿಕೆ ಮತ್ತು ಗಾಂಭೀರ್ಯ ನಿಜಕ್ಕೂ ಮನಸ್ಸಿಗೆ ಧೈರ್ಯ ನೀಡುತ್ತದೆ.

**–ವೈದೇಹಿ,** ಮಣಿಪಾಲ

ಮುಖ್ಯ ವಾಹಿನಿ ಮಾಧ್ಯಮಗಳು ವಾಣಿಜ್ಯ ಹಿತಾಸಕ್ತಿಯಲ್ಲಿ ಕಂಠಮಟ್ಟ ಹೂತುಹೋಗಿ ವಾಸ್ತವವನ್ನು ಮರೆಮಾಚುವುದು ಇಲ್ಲವೇ ತಾವೇ ನಿಜಗಳನ್ನು ನಿರ್ಮಿಸುತ್ತಿರುವಾಗ ‘ಹೊಸ ಮನುಷ್ಯ’ದಂಥ ಮಾಸಿಕಗಳು ನಿಜಕ್ಕೂ ಚಿಂತನಶೀಲತೆಯನ್ನು ಮೂಡಿಸುತ್ತಿವೆ. ತಮ್ಮ ನಿರ್ಣಯಗಳನ್ನು ಎಲ್ಲರ ಮೇಲೆ ಹೇರದೆ ಅದನ್ನು ಬಿಟ್ಟರೆ ಬೇರೆ ಬದಲಿಗಳೇ ಇಲ್ಲ ಎನ್ನುವ ವಿಚಾರದ ಠೇಂಕಾರದ ನಡುವೆ ಮೆಲುದನಿ, ಸ್ವಗತದಂಥ ಮಾತುಗಳು ’ಹೊಸ ಮನುಷ್ಯ’ದಲ್ಲಿ ಸಿಗುತ್ತವೆ.

ನಮ್ಮ ನಡುವಿನ ಧೀಮಂತ ಚಿಂತಕ ಜಿ. ರಾಜಶೇಖರ ಬರೆದ ‘ಅಡಿಗರ ಕಾವ್ಯ ಮತ್ತು ಹಿಂದುತ್ವ: ಕುದುರದ ಸಂಬಂಧ’ ಬರಹ, ಅಡಿಗರ ಕುರಿತ ಮೂಲಭೂತ ನಂಬಿಕೆಗಳನ್ನೇ ಪಲ್ಲಟಗೊಳಿಸುತ್ತದೆ; ಮರು ಮತ್ತು ತಾಜಾ ಓದಿನ ತುರ್ತನ್ನು ಒತ್ತಿ ಹೇಳುತ್ತದೆ. ‘ಅಡಿಗರ ಯಾವ ಒಳ್ಳೆಯ ಕವನವೂ ಹಿಂದುತ್ವವನ್ನು ಪ್ರತಿಪಾದಿಸುವುದಿಲ್ಲ, ಬದಲಿಗೆ, ಬಿಜೆಪಿಯ ಹಿಂದುತ್ವವನ್ನು ಅಲ್ಲಗೆಳೆಯುವ ಅವರ ಶ್ರೇಷ್ಠ ಕವಿತೆಗಳನ್ನು ಹಲವಿವೆ ಎಂದು ವಿಷದೀಕರಿಸುವ ಅವರು ಅಡಿಗರ ಕವಿತೆಗಳಲ್ಲಿ ರಾಮ, ಸಿದ್ಧ ಪುರುಷನಾಗದೆ ಸಾಧಕನಾಗುವ ಬಗೆಯನ್ನು ಸಮರ್ಥವಾಗಿ ಕಟ್ಟಿಕೊಟ್ಟಿದ್ದಾರೆ.

ಸಾಹಿತ್ಯ ವಿಮರ್ಶೆಯನ್ನು ಪ್ರಚಲಿತ, ಜನಪ್ರಿಯ ಸಾಮಾಜಿಕ, ತಾತ್ವಿಕ ವಿಚಾರಗಳ ಗೂಟಕ್ಕೆ ನೇತು ಹಾಕುವ ಪರಿಕರವೆಂಬಂತೆ ಪರಿಗಣಿಸುತ್ತಾ, ಸಾಹಿತ್ಯ ಪಠ್ಯಗಳನ್ನು ಸಮಾಜಶಾಸ್ತ್ರೀಯ ಕೃತಿಗಳಾಗಿ ನೋಡಲಾಗುತ್ತಿರುವ ಇಂದಿನ ಸಂದರ್ಭದಲ್ಲಿ ಕೃತಿಯನ್ನು ಅರಿಯುವ ಮಾಪುಗೋಲುಗಳನ್ನು ಆ ಕೃತಿಯೇ ನೀಡುತ್ತದೆ ಎಂಬ ಅರಿವಿನೊಂದಿಗೆ ಸಾಹಿತ್ಯ ಕೃತಿಯ ಅನನ್ಯತೆಯನ್ನು ಗೌರವಿಸುವ ವಿಮರ್ಶಾ ವಿವೇಕವನ್ನು ರಾಜಶೇಖರರಿಂದ ಕಲಿಯಬೇಕಿದೆ.

**–ಕೆ.ವೆಂಕಟೇಶ,** ದೊಡ್ಡಬಳ್ಳಾಪುರ

‘ಹೊಸ ಮನುಷ್ಯ’ ನಮ್ಮಲ್ಲಿನ ವಿಚಾರಗಳಿಗೆ ಸರಿಯಾಗಿ ಸಾಣೆ ಹಿಡಿಯುತ್ತಿದೆ. ನಮಗೆ ಮನುಷ್ಯತ್ವದ ದಾರಿ ತೋರಿಸುತ್ತಿದೆ ಎಂದು ನಂಬಿದ್ದೇನೆ. ಅದಕ್ಕಾಗಿ ಸಂಪಾದಕರು ಅಭಿನಂದನಾರ್ಹರು. ಏಪ್ರಿಲ್ ಮಾಸಿಕದಲ್ಲಿ ಪ್ರಕಟವಾಗಿರುವ ಪ್ರಕಾಶರ ‘ರಕ್ತ ರುಚಿಯಾಗಿದೆ? ಕವನ ಚಿಂತನೆಗೆ ಹಚ್ಚಿ, ಮತ್ತೆ ಮತ್ತೆ ಓದಿಸಿಕೊಂಡಿತು. ಅದರಲ್ಲಿರುವ ಅನುವಾದಿತ ಸೂಫಿ ಕಥೆಗಳು ಮಾನವತೆಯ ಮಾತ್ರೆಗಳು. ಚುನಾವಣೆಯ ವೇಳೆ ಪ್ರಜೆಗಳ ಪ್ರಜ್ಞೆಯನ್ನು ಎಚ್ಚರಗೊಳಿಸುವ ಪ್ರಯತ್ನ ಮಾಡಿದೆ ಸಂಚಿಕೆ. ಹೊಸ ಮನುಷ್ಯನ ಎಲ್ಲಾ ಲೇಖನ,ವಿಷಯಗಳು ಒಂದಕ್ಕಿಂತ ಒಂದು ಭಿನ್ನ;ಅಂತೂ ಎಲ್ಲವೂ ಚೆನ್ನ.

**–ರಹಮತ್ ಉಲ್ಲಾ,** ಪಾವಗಡ

ಪ್ರಸಕ್ತ ರಾಜಕೀಯ ವಿದ್ಯಮಾನಗಳ ವಸ್ತುನಿಷ್ಠ ವಿಶ್ಲೇಷಣೆಯಾಗಿ, ಈಗಿನ ಚುನಾವಣಾ ಸಮಯದಲ್ಲಿ ಮತದಾರರನ್ನು ಹೆಚ್ಚು ಪ್ರಜ್ಞಾವಂತರನ್ನಾಗಿಸುವಂತಹ ಏಪ್ರಿಲ್ ಸಂಚಿಕೆಯ ಸಂಪಾದಕೀಯ ನನಗೆ ತುಂಬ ಇಷ್ಟವಾಯಿತು. ಜೊತೆಗೆ ಓದುಗರನ್ನು ಹೊಸ ನಿಟ್ಟಿನಲ್ಲಿ ಆಲೋಚಿಸುವಂತೆ ಮಾಡುವ ಅಂಬೇಡ್ಕರ್–ಗಾಂಧಿ ಸಮೀಪೀಕರಣದ ಸಾಧ್ಯತೆಗಳನ್ನು ತೆರೆದಿಟ್ಟ ‘ಸಮಾಸ’ ಲೇಖನ ಪ್ರಸ್ತುತ ಸಂದರ್ಭದಲ್ಲಿ ಸಮಂಜಸವಾಗಿದೆ.

ಹೊಸ ಮನುಷ್ಯ ಬಂತೆಂದರೆ ಏನಾದರೂ ಕುತೂಹಲಕಾರಿ ಹೊಸ ವಿಷಯಗಳು ಇದ್ದೆ ಇರುತ್ತವೆ ಎಂಬ ಓದುಗರ ನಿರೀಕ್ಷೆ ಇದುವರೆವಿಗೂ ಹುಸಿಯಾಗಿಲ್ಲ.

**–ಎಸ್. ಆರ್.ಬಾಲಸುಬ್ರಮಣ್ಯ,** ಬೆಂಗಳೂರು

ಕಾಲದ ನಿರಂತರತೆಯಲ್ಲಿ ಮಾನವ ಬದುಕಿನ ಸ್ಥಿತ್ಯಂತರಗಳನ್ನು ಸಾಮಾಜಿಕ–ರಾಜಕೀಯ ನೆಲೆಗಳಲ್ಲಿ ವಿಮರ್ಶೆಗೊಳಪಡಿಸುವ ಲೇಖನಗಳು ‘ಹೊಸ ಮನುಷ್ಯದ ವೈಶಿಷ್ಟ್ಯವಾಗಿದೆ. ಯೋಗೇಶ್. ಎಸ್ ಅವರ ಅಂಬೇಡ್ಕರ್–ಗಾಂಧಿ ಸಮೀಪೀಕರಣದ ಸಾಧ್ಯತೆಗಳನ್ನು ತರೆದಿಟ್ಟ ಸಮಾಸ್ ಸಮಾವೇಶ ಕುರಿತ ಲೇಖನ ಇದಕ್ಕೊಂದು ಉಜ್ವಲ ಉದಾಹರಣೆಯಾಗಿದೆ.

**–ಎಂ.ಎಂ. ಪುರದನ ಗೌಡರ,** ಕಲಘಟಗಿ

### ರವಿ ಕೃಷ್ಣಾರೆಡ್ಡಿಯವರನ್ನು ಬೆಂಬಲಿಸಿ, ಗೆಲ್ಲಿಸಿ



**ಪರ್ಯಾಯ, ಸ್ವಚ್ಛ ರಾಜಕಾರಣಕ್ಕಾಗಿ ನಿಜವಾಗಿ ತುಡಿದು, ನಿರಂತರವಾಗಿ ದುಡಿದು. ಹೋರಾಟ ಮಾಡಿ ಈಗ ಬೆಂಗಳೂರಿನ ಜಯನಗರ ವಿಧಾನ ಸಭಾ ಕ್ಷೇತ್ರದಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿರುವ ರವಿ ಕೃಷ್ಣಾರೆಡ್ಡಿಯವರನ್ನು ‘ಹೊಸ ಮನುಷ್ಯ’ ಬೆಂಬಲಿಸುತ್ತದೆ. ನೀವೂ ಬೆಂಬಲಿಸಿ ಎಂದು ಕೋರುತ್ತದೆ.**–ಸಂಪಾದಕ

‘ಅಭಿವೃದ್ಧಿ’ ಎಂಬುದು ಜನಾಂದೋಲನವಾದಾಗ....

# ಹಾಸನ ಜಿಲ್ಲೆಯಲ್ಲಿ ಜಲಸಂವರ್ಧನ ಆಂದೋಲನ : ‘ಮನಸ್ಸಿದ್ದರೆ ನೀರ ಮಾರ್ಗ’

–ರೂಪ ಹಾಸನ



**ಕ**ಳೆದ ವರ್ಷದ ಮೇ ತಿಂಗಳಲ್ಲಿ ಹಾಸನದ ಬಳಿಯ ದೊಡ್ಡಕೊಂಡಗೊಳ ಗ್ರಾಮವನ್ನು ನಮ್ಮ ಕೆರೆ ಪುನಶ್ಚೇತನದ ಕಾರ್ಯಕ್ಕೆ ವೈಜ್ಞಾನಿಕ ಅಧ್ಯಯನದ ಮೂಲಕ ಆರಿಸಿಕೊಂಡು ಯಂತ್ರಗಳಿಂದ ಕೆಲಸ ಪ್ರಾರಂಭಿಸಿ ೭–೮ ದಿನಗಳಾಗಿತ್ತಷ್ಟೇ. ಒಂದು ಮುಸ್ಸಂಜೆ ಅಲ್ಲಿಯ ಗ್ರಾಮಪಂಚಾಯಿತಿ ಸದಸ್ಯ, ಕೆರೆ ಕೆಲಸದ ಮೇಲ್ವಿಚಾರಣೆ ಹೊತ್ತಿದ್ದ ಯುವಕ ವಾಸು ವಾಟ್ಸ್‌ಆಪ್ ಮೂಲಕ ಪುಟ್ಟದೊಂದು ವಿಡಿಯೋ ಕಳಿಸಿದರು. ಅದನ್ನು ನೋಡಿ ನಮಗೆ ಸಂಭ್ರಮಾಶ್ಚರ್ಯ. ಕಳೆದ ಹದಿನೈದು ವರ್ಷಗಳಿಂದ ಒಣಗಿ ನಿಂತಿದ್ದ ಕೆರೆಯ ಮಧ್ಯಭಾಗದಲ್ಲಿ ವೃತ್ತಾಕಾರವಾಗಿ ನೀರು ಉಕ್ಕುತ್ತಿರುವ ದೃಶ್ಯ! ಅದು ಸುತ್ತ ತೆರೆಗಳನ್ನೆಬ್ಬಿಸಿ ಹರಡುತ್ತಿತ್ತು. ‘ಹೀಗೇ ಕೆರೆಯಿಂದ ನೀರು ಉಕ್ತಾನೇ ಇದೆ ಮೇಡಂ. ಇನ್ನೂ ೩–೪ ಅಡಿ ಬಗ್ದಿದ್ದೀವಷ್ಟೆ.’ ಅಂದಾಗ ನಮ್ಮ ಕನಸು ಇಷ್ಟು ಬೇಗ ಸಾಕಾರವಾಗಿದ್ದನ್ನು ನೋಡಿ ಸಂತೋಷ ಇಮ್ಮಡಿಸಿತು.

ಹಾಸನದಂತಹಾ ಅರೆಮಲೆನಾಡಿನಲ್ಲೂ ಕಳೆದೆರಡು ಮೂರು ವರ್ಷಗಳಿಂದ ಬರ ಆವರಿಸಿ ಕುಡಿಯುವ ನೀರಿಗೂ ತತ್ವಾರವಾಗಿರುವಾಗ, ೨೦೧೭ರ ಜನವರಿಯಲ್ಲಿ ಕೇಂದ್ರ ಬರ ಅಧ್ಯಯನ ತಂಡ ರಾಜ್ಯದ ೧೬ ಜಿಲ್ಲೆಗಳನ್ನು ಶಾಶ್ವತ ಬರಪೀಡಿತ ಜಿಲ್ಲೆಗಳೆಂದು ಘೋಷಿಸಿದ ಪಟ್ಟಿಯಲ್ಲಿ ಹಾಸನ ಜಿಲ್ಲೆಯೂ ಸೇರ್ಪಡೆಗೊಂಡಿದ್ದನ್ನು ಕಂಡಾಗ, ಈ ಜಲಕ್ಷಾಮವನ್ನು ಎದುರಿಸುವುದು ಹೇಗೆಂದು ತಳಮಳಿಸಿದ ನಾವೊಂದಿಷ್ಟು ಪರಿಸರ ಕಾಳಜಿಯುಳ್ಳ ಸಮಾನಮನಸ್ಕರು, ನಿರಂತರವಾಗಿ ಚರ್ಚಿಸಲಾರಂಭಿಸಿದ್ದೆವು. ಹಾಗೆ ಪರಿಸರ ಸಂಬಂಧಿತ ಕೆಲಸ, ಚಟುವಟಿಕೆ, ಬರವಣಿಗೆ, ನ್ಯಾಯಾಲಯ ಹೋರಾಟಗಳಲ್ಲಿ ನಮ್ಮಲ್ಲನೇಕರು ವೈಯಕ್ತಿಕ ನೆಲೆಯಲ್ಲಿ, ಸಂಸ್ಥೆಗಳ ಮೂಲಕ ಅಲ್ಲಲ್ಲಿ ತೊಡಗಿಸಿಕೊಂಡಿದ್ದೆವು. ಆದರೆ ಸಮುದಾಯವನ್ನು ಒಟ್ಟು ಸೇರಿಸಿ ಕೆಲಸ ಮಾಡಲು ಅನೇಕ ಬಾರಿ ಪ್ರಯತ್ನಿಸಿ ವಿಫಲರಾಗಿದ್ದೆವು. ಬರದ ಬೇಗೆ ತಾಳದೇ, ಕೃಷಿಸಾಲ ತೀರಿಸಲಾಗದೇ, ತೆಂಗಿನ ಮರಗಳು ಬಿಸಿಲಿಗೆ ಸುಟ್ಟು ಕರಕಲಾದಾಗ, ರೈತರು ನಿತ್ಯ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದನ್ನು ಕಾಣುವಾಗ, ನಾವೆಲ್ಲಾ ಅವರ ಬೆಂಬಲಕ್ಕೆ ಏನೂ ಮಾಡಲಾಗುತ್ತಿಲ್ಲ ಎಂಬ ಅಪರಾಧಿ ಭಾವದ ಒಳಒತ್ತಡ ರಚನಾತ್ಮಕ ಕೆಲಸಕ್ಕೆ ನಮ್ಮನ್ನು ಒಗ್ಗೂಡಿಸಿತು.

ಕೊಂಚ ಶ್ರಮವಾದರೂ ಕೆರೆ, ಕಲ್ಯಾಣಿಗಳ ಪುನಶ್ಚೇತನ, ಮಳೆ ನೀರಿನ ಸಮರ್ಪಕ ಸಂಗ್ರಹಣೆಗೆ ಅಣಿಯಾಗುವ ಶಾಶ್ವತವಾದ ಕೆಲಸಗಳೇ ಮುಖ್ಯವೆಂದು ಪರಿಸರವಿಜ್ಞಾನ ಲೇಖಕರಾದ ನಾಗೇಶ್ ಹೆಗಡೆ, ಕೆರೆ ಪುನಶ್ಚೇತನ ತಜ್ಞರಾದ ಶಿವಾನಂದ ಕಳವೆ, ಜಲತಜ್ಞ ಶ್ರೀಪಡ್ರೆ, ಹಿರಿಯ ಭೂ ಮತ್ತು ಅಂತರ್ಜಲ ವಿಜ್ಞಾನಿ ಎಸ್. ಜಿತೇಂದ್ರಕುಮಾರ್ ಮುಂತಾದವರೊಂದಿಗಿನ ನಿರಂತರ ಚರ್ಚೆಯಿಂದ ಮನದಟ್ಟಾಗಿತ್ತು. ಅಧ್ಯಯನದೊಂದಿಗೇ ನಮ್ಮ ಸುತ್ತಮುತ್ತಲ ಕೆರೆ, ಕಟ್ಟೆ, ಕಲ್ಯಾಣಿಗಳ ಕ್ಷೇತ್ರಾಧ್ಯಯನವೂ ಸಾಗಿತ್ತು. ಹಾಸನ ಜಿಲ್ಲೆಯಾದ್ಯಂತ ಹೊಯ್ಸಳರ ಕಾಲದ ಪಾಳು ಬಿದ್ದ, ಒಣಗಿದ ಅನೇಕ ಕಲ್ಯಾಣಿಗಳಿರುವುದು, ಅವು ಹೂಳು ತುಂಬಿ ತಿಪ್ಪೆಗುಂಡಿಗಳಾಗಿರುವುದು ತಿಳಿದು ಬಂತು. ಆದರೆ ಕೆಲಸ ಪ್ರಾರಂಭಿಸಲು ಬೇಕಾದ ಸಾರ್ವಜನಿಕ ಒತ್ತಡವನ್ನು ನಿರ್ಮಾಣ ಮಾಡಿದ್ದು ಮಾತ್ರ ಮಹಾರಾಷ್ಟ್ರದಲ್ಲಿ ಅಮೀರ್‌ಖಾನ್ ನೇತೃತ್ವದ *ಪಾನಿ ಫೌಂಡೇಶನ್* ಕೆಲಸಗಳ ‘ದಿ ಬ್ಯಾಟಲ್ ಎಗೆನೆಸ್ಟ್ ಡ್ರಾಟ್’ ಸಾಕ್ಷ್ಯಚಿತ್ರ. ಅದನ್ನು ಆಸಕ್ತರೆಲ್ಲಾ ಒಗ್ಗೂಡಿ ೨೦೧೭ರ ಏಪ್ರಿಲ್ ೧೯ರಂದು ವೀಕ್ಷಿಸಿದ ನಂತರ, ಅನೇಕ ಸಾಧ್ಯತೆಗಳನ್ನು ಅದು ನಮ್ಮ ಮುಂದೆ ತೆರೆಯಿತು.

ಎಲ್ಲರೂ ಸೇರಿ ಮುಂದೇನು ಮಾಡಬಹುದೆಂಬ ಹಲವು ಸುತ್ತಿನ ಚರ್ಚೆಗಳಾದವು. ಕೆರೆ, ಕಲ್ಯಾಣಿಗಳ ಪುನಶ್ಚೇತನ, ಅರಣ್ಯೀಕರಣ ಪ್ರಮುಖವಾಗಿಟ್ಟುಕೊಂಡು ಪರಿಸರ ಸಂಬಂಧಿತ ಚಟುವಟಿಕೆಯಲ್ಲಿ ನಿರಂತರ ಸಂಘಟಿತವಾಗಿ ತೊಡಗಿಕೊಳ್ಳಲು ‘ಹಸಿರುಭೂಮಿ ಪ್ರತಿಷ್ಠಾನ’ ಸ್ಥಾಪನೆಯಾಯ್ತು. ಮೇ ೧ರಿಂದ ನೀರಿನ ಕೆಲಸಕ್ಕೆ ಸಂಕಲ್ಪ ತೊಟ್ಟು ನಮ್ಮ ನಮ್ಮಲ್ಲೇ ನಮಗೆ ಸಾಧ್ಯವಿರುವ ಕೆಲಸಗಳನ್ನು ಹಂಚಿಕೊಂಡು, ಸಲಹಾ ಸಮಿತಿ, ತರಬೇತಿ ಸಮಿತಿ, ತಾಂತ್ರಿಕ ಸಮಿತಿ, ಸಾಂಸ್ಕೃತಿಕ ಸಮಿತಿ, ಹಣಕಾಸು ಸಮಿತಿ.....ಇತ್ಯಾದಿ ವಿಭಾಗಿಸಿಕೊಂಡು ಹೆಜ್ಜೆ ಮುಂದಿಟ್ಟೆವು. ಹಾಸನದ ಕ್ರಿಯಾಶೀಲ ಉಪವಿಭಾಗಾಧಿಕಾರಿಗಳಾದ ಡಾ.ಎಚ್.ಎಲ್.ನಾಗರಾಜ್ ಅವರು ವಿಶೇಷ ಆಸಕ್ತಿಯಿಂದ ಈ ಕೆಲಸದ ನೇತೃತ್ವ ವಹಿಸಿದ್ದರಿಂದಾಗಿ ಇದೊಂದು ಸರ್ಕಾರಿ ಹಾಗೂ ಸಾರ್ವಜನಿಕ ಸಹಭಾಗಿತ್ವದ ಚಟುವಟಿಕೆಯಾಗಿ ಮುಂದುವರೆಯಿತು. ಶ್ರಮದಾನ ಹಾಗೂ ಯಂತ್ರಗಳ ನೆರವು, ಎರಡೂ ರೀತಿಯಲ್ಲೂ ಕೆಲಸಗಳು ನಿರಂತರ ಸಾಗಿವೆ.

ಈಗ ನೀರಿನ ಕೆಲಸಗಳು ಹಾಸನದಲ್ಲಿ ಪ್ರಾರಂಭವಾಗಿ ಒಂದು ವರ್ಷವಾಯ್ತು. ಹಿಂದೆ ತಿರುಗಿ ನೋಡಿದರೆ ನಿಜಕ್ಕೂ ಜನರ ಸಂಘಟಿತ ಪ್ರಯತ್ನಕ್ಕೆ ಎಷ್ಟೆಲ್ಲಾ ಶಕ್ತಿಯಿದೆ ಎಂಬುದಕ್ಕೆ ಉದಾಹರಣೆಯಾಗಿ ಜಿಲ್ಲೆಯ ನಾಲ್ಕು ಕೆರೆ, ೨೯ ಕಲ್ಯಾಣಿಗಳು ಪುನಶ್ಚೇತನಗೊಂಡು ನೀರಿನಿಂದ ನಳನಳಿಸುತ್ತಿವೆ. ನಾವು ಮೊದಲ ದಿನ ಪುನಶ್ಚೇತನಕ್ಕೆ ಕೈಗೆತ್ತಿಕೊಂಡ ದೊಡ್ಡಕೊಂಡಗೊಳದ ಒಣಗಿದ್ದ ಮೂರು ಕಲ್ಯಾಣಿಗಳಲ್ಲೂ ಮೊದಲ ದಿನವೇ ನೀರು ಕಾಣಿಸಿಕೊಂಡಿತ್ತು. ಅದೇ ಊರಿನ ಒಣಗಿದ ಒಂದು ಕೆರೆ, ತಿರುಪತಿಹಳ್ಳಿಯ ಒಂದು ಕೆರೆ, ಒಂದು ಗೋಕಟ್ಟೆಗಳನ್ನು ನಾವೊಂದಿಷ್ಟು ದುಡ್ಡು ಹಾಕಿ, ಸಾರ್ವಜನಿಕರಿಂದ ದೇಣಿಗೆ ಪಡೆದು ಸುಮಾರು ಎಂಟು ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ ಪುನಶ್ಚೇತನ ಮಾಡಿದ್ದು, ಈ ವರ್ಷದ ಬಿರುಬೇಸಗೆಯಲ್ಲೂ ಅದರಲ್ಲಿ ತುಂಬಿರುವ ನೀರು, ನಾವು ಮಾಡಿದ ಕೆಲಸಕ್ಕೆ ಜೀವಂತ ಸಾಕ್ಷಿಯಾಗಿದೆ. ಅವುಗಳ ಸುತ್ತಮುತ್ತಲ ಐದು ಕಿಲೋ ಮೀಟರ್ ವ್ಯಾಪ್ತಿಯ ಒಣಗಿ ನಿಂತಿದ್ದ ಕೊಳವೆ ಬಾವಿಗಳು ತಾವಾಗಿಯೇ ಪುನಶ್ಚೇತನಗೊಂಡಿವೆ! ಕೆರೆ ಕಲ್ಯಾಣಿಗಳಲ್ಲಿ ದಿನವೊಂದಕ್ಕೆ ಸುಮಾರು ೪೦೦–೫೦೦ ಜಾನುವಾರುಗಳು ನೀರು ಕುಡಿಯುತ್ತಿವೆ. ವಿವಿಧ ಪಕ್ಷಿಗಳೂ ಅಲ್ಲಿ ಸಂಸಾರ ಹೂಡಿವೆ. ಗ್ರಾಮಸ್ಥರು ೧೫ ಸಾವಿರ ಮೀನಿನ ಮರಿಗಳನ್ನು ಕೆರೆಗೆ ಬಿಟ್ಟು ಮೀನುಸಾಕಣೆ ಪ್ರಾರಂಭಿಸಿದ್ದಾರೆ. ಸತ್ತು ಹೋಗಿದ್ದ ಇಡೀ ಪರಿಸರ ವ್ಯವಸ್ಥೆ ನಿಧಾನಕ್ಕೆ ಸಮಸ್ಥಿತಿಗೆ ವಾಪಸಾಗಿರುವುದನ್ನು ಕಾಣುವಾಗ ನಿಜಕ್ಕೂ ನಮ್ಮ ಶ್ರಮ ಸಾರ್ಥಕ ಎಂದೆನಿಸುತ್ತದೆ. ಗ್ರಾಮಸ್ಥರ ಸಂಭ್ರಮವನ್ನಂತೂ ಅಳತೆ ಮಾಡಲು ಸಾಧ್ಯವೇಯಿಲ್ಲ. ಅದೇ ಹೂಳೆತ್ತಿಲ್ಲದ ಕೆರೆ, ಕಲ್ಯಾಣಿಗಳಲ್ಲಿ ಮಳೆ ಬಂದ ನಂತರ ಒಂದೆರಡು ತಿಂಗಳು ನೀರು ನಿಂತಿದ್ದು, ಈಗ ಮತ್ತೆ ಒಣಗಿ ಬರಗುಟ್ಟುತ್ತಿದೆ. ಹೂಳೆತ್ತಿ ಪುನಶ್ಚೇತನಗೊಳಿಸಿದವುಗಳಲಿ ಅಂತರ್ಜಲ ಉತ್ಪತ್ತಿಯಾಗಿ, ಮೇಲಿನ ನೀರೂ ಆರದೆ ಜೀವಜಲ ಚಿಮ್ಮುತ್ತಿರುವುದು ಸಂತಸದ ವಿಷಯವಾಗಿದೆ. ಜೊತೆಗೆ ನಮಗೆ ನೀರಿನ ಪಾಠವನ್ನೂ ಕಲಿಸುತ್ತಿದೆ.

ನೀರುಕ್ಕಿಸುವ ಈ ಮಾದರಿ ಜಿಲ್ಲೆಯಾದ್ಯಂತ ಪ್ರಚಾರ ಪಡೆದು ತನ್ನಷ್ಟಕ್ಕೇ ಅಲ್ಲಲ್ಲಿ ಕೆರೆ, ಕಲ್ಯಾಣಿಗಳ ಹೂಳೆತ್ತಿ ಪುನಶ್ಚೇತನಗೊಳಿಸಿಕೊಳ್ಳುವ ಕೆಲಸಗಳೂ ವ್ಯಾಪಕವಾಗಿ ನಡೆಯುತಿವೆ. ಹಲವು ಕಡೆಗಳಲ್ಲಿ ತಕ್ಷಣಕ್ಕೇ ನೀರು ಕಾಣಿಸಿಕೊಂಡಿದೆ. ಕೆಲವದರಲ್ಲಿ, ೨–೩ ದಿನಗಳ ನಂತರ, ಅಥವಾ ಮಳೆ ಬಂದ ನಂತರ ನೀರು ತುಂಬಿಕೊಂಡಿದೆ. ಒಟ್ಟಾರೆ ನೀರಿನ ಮೂಲಗಳನ್ನು ಹೂಳೆತ್ತಿ, ಮುಚ್ಚಿರುವ ಅವುಗಳ ಕಣ್ಣು ತೆಗೆದು ಸ್ವಚ್ಛ ಮಾಡಿಟ್ಟುಕೊಂಡರೆ, ಮಳೆ ಬಂದಾಗ ತುಂಬಿಕೊಳ್ಳುವ ನೀರು ವರ್ಷಗಳು ಕಳೆದರೂ ಆರುವುದಿಲ್ಲ ಎಂಬ ಅರಿವು ನಿಧಾನವಾಗಿ ಜನರಲ್ಲಿ ಮೂಡುತ್ತಿದೆ, ಕಾಲೇಜಿನ ಎನ್‌ಎಸ್‌ಎಸ್ ಕ್ಯಾಂಪ್‌ಗಳನ್ನು ಕಲ್ಯಾಣಿ ಇರುವ ಊರುಗಳನ್ನೇ ಹುಡುಕಿ ಆಯೋಜಿಸುವಂತೆಯೂ ನೋಡಿಕೊಳ್ಳಲಾಗುತ್ತಿದೆ. ತನ್ಮೂಲಕ ಕಾರ್ಯಕರ್ತರ ವಾಸ್ತವ್ಯದ ಒಂದು ವಾರದಲ್ಲಿ ಶ್ರಮದಾನದ ಮೂಲಕ

(೧೩ನೇ ಪುಟಕ್ಕೆ

ಲೋಹಿಯಾ ಸ್ಮಾರಕ ಉಪನ್ಯಾಸದ ಭಾಗ-೩

# ನಾವೇಕೆ ಇಂದು ಲೋಹಿಯಾರನ್ನು ನೆನಪಿಸಿಕೊಳ್ಳಬೇಕಿದೆ?

–ನ್ಯಾ. ಸುದರ್ಶನ ರೆಡ್ಡಿ



**ನಾಗರೀಕ ಅಸಹಕಾರ ಆಂದೋಲನವನ್ನು ಸದಾ ಜೀವಂತವಾಗಿರಿಸುವುದೊಂದೇ ಪ್ರಜೆಯು ಪ್ರಭುತ್ವದ ಅಕ್ರಮಗಳು ಮತ್ತು ದಮನಗಳನ್ನು ವಿರೋಧಿಸಲು ಇರುವ ಏಕೈಕ ಪರಿಣಾಮಕಾರಿ ಅಸ್ತ್ರ ಎಂದು ಪ್ರತಿಪಾದಿಸುತ್ತಿದ್ದ ಲೋಹಿಯಾ ಆಧುನಿಕ ಪ್ರಭುತ್ವವೊಂದರ ಸಂದರ್ಭದಲ್ಲಿ ನಾಗರಿಕ ಸ್ವಾತಂತ್ರ್ಯಗಳ ಪರಿಕಲ್ಪನೆ ಮತ್ತು ಅದರ ಮಹತ್ವ ಕುರಿತು ಯೋಚಿಸಿದ ಹಿನ್ನೆಲೆ ಮತ್ತು ಪರಿಯನ್ನು ಭಾರತದ ಸಮಕಾಲೀನ ರಾಜಕಾರಣ ಎದುರಿಸುತ್ತಿರುವ ಸವಾಲುಗಳ ಮುಖಾಮುಖಿಯಲ್ಲಿ ಇಲ್ಲಿ ನಿರೂಪಿಸಲಾಗಿದೆ.**–ಸಂ.

**ಜಾ**ನ್ ಗ್ರೇ ಎಂಬ ತತ್ವ ಜ್ಞಾನಿಯು ಉದಾರವಾದಿ ನೋಟದಲ್ಲಿ ಇರುವ ಒಂದು ಮೂಲಭೂತ ಬಿರುಕನ್ನು ಗುರುತಿಸುತ್ತಾರೆ. "ಒಂದು ಕಡೆ, ಅವರು ಇರುವುದು ಚೈತನ್ಯ ಸ್ವರೂಪಿಯಾದ ಸತ್ಯ ಒಂದೇ ಮತ್ತು ಮನುಷ್ಯನ ವಿವೇಕ–ಪ್ರಜ್ಞೆಯನ್ನು ಬಳಸಿಕೊಂಡು ಅದರ ಅರಿವು ಪಡೆದುಕೊಳ್ಳಬಹುದೆಂದೂ ಮತ್ತು ಆ ಜ್ಞಾನದ ಬೆಳಕಿನಲ್ಲಿ ಒಮ್ಮತದ ತಿಳುವಳಿಕೆಗೆ ಬರಬೇಕೆಂದು ಹೇಳುತ್ತಾರೆ. ಮತ್ತೊಂದು ಕಡೆ, ಉದಾರವಾದವು ಜನರ ವೈವಿಧ್ಯಮಯ ನಂಬಿಕೆಗಳು, ಅನುಭವಗಳು, ದೃಷ್ಟಿಕೋನಗಳು ಮತ್ತು ಅಗತ್ಯತೆಗಳ ಬಗ್ಗೆ ಸಹಿಷ್ಣುತೆ ಮತ್ತು ವಂಚಿತ ಮತ್ತು ನಿರ್ಲಕ್ಷ್ಯಕ್ಕೊಳಗಾದ ಜೀವಗಳ ಬಗ್ಗೆ ಸಹಾನುಭೂತಿ; ಇವು ನ್ಯಾಯಸ್ಥಾಪನೆಗೆ ಮತ್ತು ಪ್ರಗತಿಗೆ ಸೂಚಕವಾದಂತ ಸಾಮಾಜಿಕ ಸ್ಥಿರತೆಗೆ ಅತ್ಯಾವಶ್ಯಕವೆಂದೂ ಪ್ರತಿಪಾದಿಸುತ್ತಾರೆ. ಆದರೆ ಮೊದಲನೇ ದೃಷ್ಟಿಯ ಅಪಾಯವೆಂದರೆ ನಾವು ತಿಳಿದುಕೊಂಡ ಸತ್ಯವನ್ನೇ ಅಂತಿಮ ಮತ್ತು ಪರಿಪೂರ್ಣವೆಂದು ತಪ್ಪುತಪ್ಪಾಗಿ ಭಾವಿಸಿ ಅದನ್ನು ಒಪ್ಪದೇ ಇರುವವರನ್ನು 'ಬೇರೆಯವರು'ಎಂದು ಪ್ರತ್ಯೇಕಿಸಿ ಅಂತಹ 'ಅವರು' ದುಷ್ಟರೂ, ಶಿಸ್ತುಗೆಟ್ಟವರೂ, ಪ್ರಗತಿ–ಅಭಿವೃದ್ಧಿ ಮತ್ತು ರಾಷ್ಟ್ರದ ವಿರೋಧಿಗಳೆಂದು ಸುಲಭವಾಗಿ ತೀರ್ಮಾನಕ್ಕೆ ಬಂದುಬಿಡಬಹುದು. ಹಾಗೆ ಆ 'ಬೇರೆಯವರು' ಅವಿವೇಕಿಗಳು, ವಿಚಾರಹೀನರು ಎಂದು ಪರಿಭಾವಿಸಿಕೊಂಡಾಗ 'ಈ ಗುಂಪು' ಅವರ ಮೇಲೆ ದಬ್ಬಾಳಿಕೆ ನಡೆಸುವುದು, ಭಿನ್ನ ಅಭಿಪ್ರಾಯದ ಧ್ವನಿಗಳನ್ನು ಹತ್ತಿಕ್ಕಿ ನಿರ್ನಾಮ ಮಾಡುವುದು ಇವೆಲ್ಲಾ 'ಸತ್ಯವನ್ನು ತಿಳಿದವರ' ತಾರ್ಕಿಕ ಹೆಜ್ಜೆಗಳಾಗುತ್ತವೆ.

ಇನ್ನೊಂದು ಕಡೆ ಉದಾರವಾದದ ಮತ್ತೊಂದು ದೃಷ್ಟಿಯಲ್ಲಿಯೂ ಸಾಕಷ್ಟು ಸಮಸ್ಯೆಗಳು ಕಂಡು ಬರುತ್ತಿವೆ. ವಾದಕ್ಕೆ ಪ್ರತಿವಾದ, ಪ್ರತಿಯೊಬ್ಬ ವ್ಯಕ್ತಿಯೂ ಅಥವಾ ಗುಂಪೂ ತಮ್ಮ ವಾದವೇ ಸರಿಯೆಂದೂ, ಸತ್ಯವೆಂದು ಸಂಸ್ಥಾಪಿಸುವ ಪ್ರಯತ್ನ ಮತ್ತು ಇದರಿಂದಾಗಿ ಎಲ್ಲಿಯೂ ಯಾವುದೇ ಒಮ್ಮತದ ಮತ್ತು ಒಗ್ಗಟ್ಟಿನ ಕ್ರಿಯೆಗಳು/ಕಾರ್ಯಕ್ರಮಗಳು ಹುಟ್ಟಿಕೊಳ್ಳದೆ ವಿವಿಧ ಗುಂಪುಗಳಾಗಿ ಚದುರಿಕೊಂಡು ತಮ್ಮ ತಮ್ಮ ಅಸ್ಮಿತೆಗಾಗಿ ಮತ್ತು ಸಂಕುಚಿತ ಅಗತ್ಯತೆಗಳ ಸಲುವಾಗಿ ಕಾದಾಡುವುದು ಕಂಡುಬರುತ್ತಿದೆ. ಇಂತ ನೂರಾರು ದಂಗೆಗಳ ಗದ್ದಲದ ವಾತಾವರಣದಲ್ಲಿ ವಾಸ್ತವವಾದಿತ್ವ ಎಂಬ ಹೆಸರಿನಲ್ಲಿನ ಸಿನಿಕ ಗುಂಪುಗಳು/ಶಕ್ತಿಗಳು ದುರ್ಬಲ ವರ್ಗದ ಜೀವಚ್ಛವಗಳೆನಿಸಿಕೊಂಡ, ಮುಖ್ಯವಾಹಿನಿಯ ಸಮಾಜದಿಂದ ಪ್ರತ್ಯೇಕಿಸಲ್ಪಟ್ಟ ಜನರ ಮೇಲೆ ಆಕ್ರಮಣವನ್ನು ಎಸಗಿ ಅವರನ್ನು ಇನ್ನಷ್ಟು ಸುಲಿಗೆ ಮಾಡುವ ಹುಂಬ ಧೈರ್ಯವನ್ನು ಪ್ರದರ್ಶಿಸುತ್ತವೆ. ಇಂತಹ ವಿಚ್ಛಿದ್ರಕಾರಕ ಶಕ್ತಿಗಳಿಗೆ ಸಮಾಜವೆಂಬುದು' ಒಂದು ದೊಡ್ಡ ಮಾರುಕಟ್ಟೆಯಾಗಿ ಮಾತ್ರ ಕಾಣಿಸುತ್ತಿರುತ್ತದೆ. ಸಿದ್ದಾಂತಗಳ, ಮೌಲ್ಯಗಳ, ಧರ್ಮದ, ನಂಬಿಕೆಗಳ, ಹಕ್ಕುಗಳ ಮಾರುಕಟ್ಟೆ. ಇಂತಹ ಪರಿಸ್ಥಿತಿಯಲ್ಲಿ ಮತ್ತೆ ದೊಡ್ಡ ಯಂತ್ರಗಳು–ಪ್ರತಿಷ್ಠಿತ, ಗಣ್ಯ ಜನವರ್ಗವೆಂಬ ಸಾಮಾಜಿಕ ಯಂತ್ರ–ಪ್ರಾಮುಖ್ಯತೆಯನ್ನು, ಚಾಲನೆಯನ್ನು, ಅಧಿಕಾರವನ್ನು ಪಡೆಯುತ್ತವೆ. ಲೋಹಿಯಾರ ಮಾತುಗಳಲ್ಲೇ ಹೇಳುವುದಾದರೆ ಜಾತಿ, ಸಂಪತ್ತು ಮತ್ತು ಅಧಿಕಾರಶಾಹಿ ಭಾಷೆಯ ಪರಿಣತಿ–ಈ ಮೂರರಲ್ಲಿ ಕನಿಷ್ಠ ಎರಡರ ಪ್ರಭುತ್ವ ಹೊಂದಿದವರು ಈ ಪ್ರತಿಷ್ಠಿತ ಜನವರ್ಗದಲ್ಲಿ ಸೇರಿರುತ್ತಾರೆ.

ಇಂತಹ ಪರಿಸ್ಥಿತಿಯು ಮತ್ತೆ, ನೈತಿಕತೆಯ ಮೌಲ್ಯಗಳಿಗೆ ಜಡಗೊಂಡಿರುವಂತಹ, ಸಹಜ ಮಾನವೀಯ ಅಂತಃಕರಣ, ಸಹಾನುಭೂತಿಯಂತ ಗುಣಗಳಿಗೆ ಎರವಾಗಿರುವ, ನೆರೆಹೊರೆಯ ಸಂಗಾತಿಗಳ ಸಂಕಷ್ಟ, ನೋವುಗಳ ಬಗ್ಗೆ ದಿವ್ಯ ನಿರ್ಲಕ್ಷ್ಯ ಮತ್ತು ಉಪೇಕ್ಷಾ ಭಾವ ತಳೆದಂತಹ, ತಮ್ಮ ವಿಪರೀತ ಮತ್ತು ಬಾಲಿಶ ಬೇಡಿಕೆಗಳಿಂದ ಸಮಾಜದ ಮೇಲೆ ಒಡ್ಡುತ್ತಿರುವ ತೀವ್ರ ಒತ್ತಡ ಮತ್ತು ಅಪಾಯಗಳು ಹಾಗೂ ಅನಿವಾರ್ಯವಾಗುತ್ತಿರುವಂತ ಸಾಮಾಜಿಕ ದಳ್ಳುರಿಯಂತಹ ದುರಂತಗಳಿಗೆ ಪೂರ್ಣ ಕುರುಡಾಗಿ ವರ್ತಿಸುವಂತಹ, ಒಂದು ಸಾಮೂಹಿಕ ಏಕರೂಪಿ ಮನಸ್ಸು ರೂಪುಗೊಳ್ಳುತ್ತಿರುವುದಕ್ಕೆ ಕಾರಣವಾಗುತ್ತಿದೆ.

ಮಾನವ ಇತಿಹಾಸವು ಅನೇಕ ಸಾಮಾಜಿಕ ದೃಷ್ಟಿಕೋನಗಳು, ಸಿದ್ಧಾಂತಗಳು ಮತ್ತು ಕ್ರಮಾನುಕರಣೆಗಳ ಹುಟ್ಟಿಗೆ ಕಾರಣವಾಗಿ ಅದನ್ನು ನಂಬಿಕೊಂಡು ಉಳಿಸಿ ಬೆಳೆಸುವಂತಹ ಅನೇಕ ರೀತಿಯ ಪ್ರಯತ್ನಗಳೂ ನಡದಿವೆ. ಒಂದು ನಿರ್ಧಿಷ್ಟ ಉದಾಹರಣೆ ಎಂದರೆ ಅತ್ಯಂತ ಹಿಂಸಾತ್ಮಕ ಮತ್ತು ರಕ್ತಸಿಕ್ತವಾದಂತಹ ಫ್ಯಾಸಿಸಂ ಎಂಬ ಸಿದ್ಧಾಂತದ ಉದಯ ಮತ್ತು ನಾಝಿ ಜರ್ಮನಿಯ ಹುಟ್ಟು. ಜರ್ಮನಿಯ ನಾಝಿ ಆಳ್ವಿಕೆಯ ಕಾಲದ ಒಂದು ವಿಚಿತ್ರ ಮತ್ತು ವಿಲಕ್ಷಣ ಸಂಗತಿ ಎಂದರೆ ದೇಶದ ನಮ್ಮ ನಿಮ್ಮಂತಹ ಸಾಮಾನ್ಯ ಜನರು ಪ್ರಭುತ್ವದ ಅಸಹಿಷ್ಣು ಮತ್ತು ಅಮಾನವೀಯ ವರ್ತನೆಗಳಿಗೆ ಮೂಕ ಮತ್ತು ಕುರುಡು ಸಾಕ್ಷಿಯಾದದ್ದು. ಯಾವ ಜನರು ಸಹಜ ಔದಾರ್ಯ, ಪರಸ್ಪರ ದಯೆ, ಅನುಕಂಪದ ಮಾನವೀಯ ಗುಣಗಳನ್ನು ಹೊಂದಿದ್ದರೋ ಅವರೇ ಜಗತ್ತಿನಲ್ಲಿ ತಮ್ಮ ಶಕ್ತಿ ಸಾಮರ್ಥ್ಯಗಳನ್ನು ಪ್ರತಿಷ್ಠಾಪಿಸುವ ಮಹತ್ವಾಕಾಂಕ್ಷೆ ತಳೆದು ರಾಷ್ಟ್ರದ ಪ್ರತಿಷ್ಠೆ ಮತ್ತು ದೇಶದ ಆರ್ಥಿಕತೆಯ ಅಭಿವೃದ್ಧಿಯೇ ಮುಖ್ಯ ಗುರಿಯಾಗಿ ಅದನ್ನು ಯಾವ ಬೆಲೆ ತೆತ್ತಾದರೂ ವಿಶ್ವದ ಕಣ್ಮುಂದೆ ಪುನರ್‌ಸ್ಥಾಪಿಸಬೇಕೆಂಬ ಹುಚ್ಚುತನದಿಂದ ಅನ್ಯದ್ವೇಷಿಗಳಾಗಿ ಘೋರ ಹಿಂಸೆಗಳಿಗೆ ಕಾರಣರಾದರು. ಮತ್ತು ಈ ಗುರಿಯ ಸಾಧನೆಗೆ ಇರುವ ದಾರಿ ಒಂದೇ ಎಂದು ವಾದಿಸಿ, ಇದಕ್ಕೆ ಇರಬಹುದಾದ ಪರ್ಯಾಯ ಮಾರ್ಗಗಳನ್ನು ಅಥವಾ ದೃಷ್ಟಿಕೋನಗಳನ್ನು ಗಣನೆಗೆ ತೆಗೆದುಕೊಳ್ಳದೆ ಅದರ ಚರ್ಚೆ ಮತ್ತು ಪರ್ಯಾಯ ಸಾಮಾಜಿಕ ಸಂಘಟನೆಗಳ ಪರಿಕಲ್ಪನೆಗಳ ಪ್ರತಿಪಾಪಾದಕರನ್ನು ಅನುಮಾನಾಸ್ಪದರು ಮತ್ತು ಅವರನ್ನು ತೊಡೆದುಹಾಕಬೇಕು ಎಂಬ ಭಾವನೆ ತಳೆದರು. ದೊಡ್ಡ ಹತ್ಯಾಕಾಂಡವಾಗುವುದನ್ನೂ ಗ್ರಹಿಸದ ರೀತಿಯಲ್ಲಿ ಸಾಂಸ್ಕೃತಿಕ ಅಂಧತ್ವವನ್ನು ಬೆಳೆಸಿದರು. ಇದು ಸಾಧ್ಯವಾಗಿದ್ದು ಹೇಗೆಂದರೆ, ಯಾವ ಜನರನ್ನು ನಾಶಮಾಡಲಾಗುತ್ತಿದೆಯೋ ಅವರು 'ಬೇರೆಯವರು' ಮತ್ತು ತಮ್ಮ ಏಕಾಯಾಮದ ರಾಷ್ಟ್ರದ ಗುರಿ ಸಾಧನೆಗೆ ತೊಡಕಾಗಿರುವಂತಹವರು ಎಂದು ನಾಝಿ ಪಕ್ಷವು ತಮ್ಮ ಪ್ರಚಾರದಿಂದ ಜನರನ್ನು ನಂಬಿಸಿತು. ನಾಝಿ ಪಕ್ಷವನ್ನು ಅಧಿಕಾರಕ್ಕೆ ತಂದಿದ್ದು ಮುಕ್ತ ವಿಚಾರ–ನಂಬಿಕೆಗಳ ಪ್ರತಿಷ್ಠಾಪನಾ ವೇದಿಕೆಯಾದ ಪ್ರಜಾಸತ್ತಾತ್ಮಕ ಚುನಾವಣೆಯೇ. ಮತ್ತು ಜನರ ಬೆಂಬಲವೇ ಅವರನ್ನು ಅಧಿಕಾರದಲ್ಲಿ ಉಳಿಸಿದ್ದು ಎಂಬುದನ್ನು ನಿಜಕ್ಕೂ ನಾವು ನೆನಪಿಟ್ಟುಕೊಳ್ಳಬೇಕು. ಪ್ರಜಾತಂತ್ರ ತನ್ನಷ್ಟಕ್ಕೆ ತಾನೇ ಸತ್ಯಕ್ಕೆ ಸಾಧನವಾಗಲಾರದು ಮತ್ತು ಸದಾ ಮಾನವ ಕಲ್ಯಾಣಕ್ಕೆ ಪೂರಕವಾಗಿರುತ್ತದೆ ಎಂದು ತಿಳಿಯಲಾಗದು. ಹಾಗಾಗಿ 'ಗುರಿ' ಮತ್ತು 'ಮಾರ್ಗ' ಇವೆರಡನ್ನೂ ಸತತವಾಗಿ ಮತ್ತು ತೀವ್ರವಾಗಿ ಪ್ರಶ್ನಿಸುವ ಭಿನ್ನ ಧ್ವನಿಗಳನ್ನು ಕಾಪಾಡಿಕೊಳ್ಳುವುದು, ಯಾವುದು ಮಾನವೀಯ ಮತ್ತು ಅಮಾನವೀಯ ನಡೆಗಳು ಎನ್ನುವುದನ್ನು ಸರಿಯಾಗಿ ಅರ್ಥಮಾಡಿಕೊಳ್ಳುವ ಪ್ರಕ್ರಿಯೆಯನ್ನು ಕುರಿತ ಚರ್ಚೆ ಬಹಳ ಮುಖ್ಯ.

ಡಾ.ಲೋಹಿಯಾರವರು ಮಾನವ ಇತಿಹಾಸ ವಿಷಯದ ವಿದ್ಯಾರ್ಥಿಯಾಗಿದ್ದರು. ನಿರ್ದಿಷ್ಟವಾಗಿ ಹೇಳುವುದಾದರೆ, ನಿರ್ಬಲೀಕರಣಗೊಂಡ, ದುರ್ಬಲ ವರ್ಗದ ಜನರ ಸಂಕಷ್ಟದ ಮತ್ತು ದುರವಸ್ಥೆಯ ಬಗ್ಗೆ ಪ್ರಭುತ್ವವು ತಾಳುವ ಔದಾಸೀನ್ಯವನ್ನು ಮತ್ತು ನಾಗರಿಕ ಸ್ವಾತಂತ್ರ್ಯವನ್ನು ಕೀಳಾಗಿ ಕಾಣುವ ಅದರ ಧೋರಣೆಗಳನ್ನು ಮಾನ್ಯ ಮಾಡುವ ಮತ್ತು ಸಾಮಾನ್ಯೀಕರಿಸುವ ಇದೇ ಪ್ರತಿಷ್ಠಿತ ವರ್ಗದ 'ಏಕರೂಪಿ ಮನಸ್ಸಿನ' ವಿರುದ್ಧ ಮಾನವನು ನಡೆಸಿದ ಹೋರಾಟವನ್ನು ಅಭ್ಯಸಿಸಿದ ವಿದ್ಯಾರ್ಥಿ. ಈ ಸಂಬಂಧ ಡಾ. ಲೋಹಿಯಾರ ಮಾತುಗಳನ್ನೇ ನೆನಪಿಸಿಕೊಳ್ಳುವುದು ಒಳ್ಳೆಯದು;

"ನಾಗರಿಕ ಸ್ವಾತಂತ್ರ್ಯವೆಂಬ ಪರಿಕಲ್ಪನೆಯು ಪ್ರಜೆಗಳು ಪ್ರಭುತ್ವದ ವಿರುದ್ಧ ಸತತವಾಗಿ ನಡೆಸಿದ ಹೋರಾಟದ ಫಲ. ಇತಿಹಾಸದುದ್ದಕ್ಕೂ ಪ್ರಭುತ್ವವು ಮತ್ತು ಅದರ ಕಾನೂನುಗಳು ಅನೇಕ ರೀತಿಯ ದೌರ್ಜನ್ಯಗಳನ್ನು ತನ್ನ ಪ್ರಜೆಗಳಮೇಲೆ ಎಸಗುತ್ತಾ ಬಂದಿದೆ. ಜನರು ಧೀರ್ಘ ಮತ್ತು ಏಕಾಂತ ಸೆರೆಮನೆವಾಸವನ್ನೂ,

ಅನೇಕ ಸಲ ಮರಣವನ್ನೂ ಅನುಭವಿಸುತ್ತಲೇ ಬಂದಿದ್ದಾರೆ. ಹೀಗೆ ಮನುಷ್ಯನ ಬಹು ಬೆಲೆ ಬಾಳುವ ಸ್ವತ್ತುಗಳನ್ನು ಪ್ರಭುತ್ವವು ಕಸಿದುಕೊಳ್ಳುತ್ತಾ ಬಂದಿದ್ದಾನೆ. ಆದುದರಿಂದ ಅವನಿಗೆ ಪ್ರಭುತ್ವದ ಅತಿರೇಕದ ವರ್ತನೆಗಳಿಂದ ತನ್ನನ್ನು ಕಾಪಾಡಿಕೊಳ್ಳಲು ಮತ್ತು ಅಧಿಕಾರದ ದುರುಪಯೋಗಗಳನ್ನು ಮತ್ತು ಅದರ ದುಷ್ಟತನವನ್ನು ಎದುರಿಸಿ ಪ್ರತಿರೋಧವನ್ನು ದಾಖಲಿಸಲು ಮತ್ತು ಅವುಗಳಿಂದ ತನ್ನನ್ನು ರಕ್ಷಿಸಿಕೊಳ್ಳಲು ಒಂದು ರಕ್ಷಣಾತ್ಮಕ ವೇದಿಕೆಯ ಅಗತ್ಯವಿತ್ತು. ಅದೇ ನಾಗರಿಕ ಸ್ವಾತಂತ್ರ್ಯದ ಹುಟ್ಟಿಗೆ ಕಾರಣವಾಯಿತು. ಈ ನಾಗರಿಕ ಸ್ವಾತಂತ್ರ್ಯ ರಕ್ಷಣೆಗಾಗಿ ಪ್ರಭುತ್ವ ಪ್ರತಿರೋಧ ಶಕ್ತಿ(ನಾಗರಿಕ ಅಸಹಕಾರ) ಜೀವಂತವಿದ್ದಾಗ ಪ್ರಭುತ್ವದ ದಮನಕಾರಿ ಕ್ರಮಗಳ ವಿರುದ್ಧದ ಪ್ರತಿರೋಧ ಅಷ್ಟು ಭೀಕರವಾದ ಪರಿಣಾಮಗಳಿಗೆ ಎಡೆ ಕೊಡುವುದಿಲ್ಲ.

ಇಂತಹ ಒಂದು ಐತಿಹಾಸಿಕ ಪರಿಕಲ್ಪನೆಯೇ (ನಾಗರಿಕ ಸ್ವಾತಂತ್ರ್ಯ) ಮತ್ತು ಅದರ ಮೇಲಿನ ಅವರ ಬದ್ದತೆಯೇ ಡಾ.ಲೋಹಿಯಾರವರ ಆಲೋಚನೆ ಮತ್ತು ಕ್ರಿಯೆಗಳನ್ನು ಸದಾ ಪ್ರೇರೇಪಿಸುತ್ತ ಬಂದವು. ಅವರ ರಾಷ್ಟ್ರೀಯತೆಯ ಪರಿಕಲ್ಪನೆಯು ಭಾರತದ್ದೇ ಆದ (ಸ್ಥಳೀಯವಾದ) ವಿಶಿಷ್ಟ ಮತ್ತು ನಿರ್ದಿಷ್ಟ ಸ್ಥಿತಿಗತಿಗಳು, ವಿಶೇಷತೆಗಳು, ಸಮಸ್ಯೆಗಳು ಮತ್ತು ಅಗತ್ಯತೆಗಳನ್ನು ಗಮನದಲ್ಲಿರಿಸಿಕೊಂಡು ರೂಪಿಸಿಕೊಂಡಿದ್ದಾಗಿತ್ತು. ಅದೇನೇ ಇದ್ದರೂ ಅವರು ಸದಾ ತೆರೆದ ಮನಸ್ಸಿನವರಾಗಿದ್ದು ದಿನನಿತ್ಯದ ಆಗುಹೋಗುಗಳ ಬಗ್ಗೆ ಮತ್ತು ಅದು ಉಂಟುಮಾಡಬಹುದಾದಂತಹ ಏಕರೂಪಿ ಮನಸ್ಥಿತಿಯ ಉತ್ಪಾದನೆಯ ಸಾಧ್ಯತೆ ಮತ್ತು ಆ ಸ್ಥಿತಿಯು ತಂದೊಡ್ಡಬಹುದಾದ ಮಾನವ ಕೋಟಿಯ ಮೇಲಿನ ದೌರ್ಜನ್ಯ ಮತ್ತು ಅಪಾಯಗಳ ಬಗ್ಗೆ ಅವರು ಸದಾ ಎಚ್ಚರವಾಗಿದ್ದು ಆ ಎಚ್ಚರವೇ ನೀಡುವಂತಹ ಒಳನೋಟಗಳನ್ನೇ ಅವರು ತಮ್ಮ ತಕ್ಷಣದ ಕ್ರಿಯೆಗಳಿಗೆ ಮಾರ್ಗದರ್ಶಕಗಳಾಗಿ ಬಳಸಿಕೊಳ್ಳುತ್ತಾ ಹೊಸ ತೀರ್ಮಾನಗಳನ್ನು ತೆಗೆದುಕೊಳ್ಳುತ್ತಿದ್ದರು. ಹಾಗಾಗಿ ಅವರಿಗೆ 'ನಾಗರಿಕ ಸ್ವಾತಂತ್ರ್ಯ'ವೆಂಬುದು ಕೇವಲ ಒಂದು ಪರಿಕಲ್ಪನೆ ಅಥವಾ ಪಠ್ಯದಲ್ಲಿ ಅಡಕವಾದ ಭರವಸೆಗಳು ಮಾತ್ರವಾಗಿರದೆ ವ್ಯಷ್ಟಿ ಮತ್ತು ಸಮಷ್ಟಿಯ ಆರೋಗ್ಯಕರ ಅಸ್ತಿತ್ವಕ್ಕೆ ಬೇಕಾದಂತಹ ವಾಸ್ತವ ಮತ್ತು ಕ್ರಿಯಾಸ್ವರೂಪಿ ನೋಟವಾಗಿತ್ತು. ಅವರು ಈ 'ನಾಗರಿಕ ಸ್ವಾತಂತ್ರ್ಯ'ವೆಂಬುದು ಸಾಮಾಜಿಕ ಸ್ಥಿರತೆಯುಳ್ಳ ರಚನಾತ್ಮಕ, ಪ್ರಗತಿಶೀಲ ಪ್ರಜಾತಂತ್ರದ ಕಟ್ಟಡಕ್ಕೆ ಅಗತ್ಯವಿರುವ ಭದ್ರ ಬುನಾದಿ ಎಂದು ತಿಳಿದಿದ್ದರು. ಡಾ. ಲೋಹಿಯಾರ ಜೀವನ ಮತ್ತು ಚಿಂತನೆಗಳು ನಿಜಕ್ಕೂ, ಕಳೆದ ಮೂರು ದಶಕಗಳಿಂದ ಡಾ.ಅಮರ್ತ್ಯಸೇನ್‌ರವರು ಅಂಗೀಕರಿಸಿ ಪ್ರತಿಪಾದಿಸಿಕೊಂಡು ಬರುತ್ತಿರುವ "ಪರ್ಯಾಲೋಚಕ ಮತ್ತು ಸಾಮರ್ಥ್ಯವನ್ನು ವೃದ್ಧಿಸುವ ಪ್ರಜಾತಂತ್ರ ವ್ಯವಸ್ಥೆ'(deliberative and capability enhancing) ಪರಿಕಲ್ಪನೆಗೆ ಪೂರ್ವ ಪೀಠಿಕೆಯಾಗಿದೆ ಎಂದು ಧೈರ್ಯವಾಗಿ ಹೇಳುತ್ತೇನೆ. ಲೋಹಿಯಾರವರ ಹೇಳಿಕೆಯನ್ನೇ ಇಲ್ಲಿ ಪುನರುಚ್ಚರಿಸಿದರೆ ತಪ್ಪಾಗಲಾರದೆಂದು ಭಾವಿಸುತ್ತೇನೆ: "ನಾಗರಿಕ ಸ್ವಾತಂತ್ರ್ಯವು ಪ್ರಗತಿಶೀಲತೆಯ ಕಡೆಗಿನ ಸಮಾಜದ ನಡಿಗೆಯನ್ನು ಸುಗಮಗೊಳಿಸುತ್ತದೆ. ಸಮಾಜವು ನಿರಂತರವಾಗಿ ಪ್ರಗತಿ ಮತ್ತು ಪ್ರತಿಗಾಮಿತನದ ನಡುವೆ ತುಯ್ದಾಡುತ್ತಿರುತ್ತದೆ. ಈ ತುಯ್ದಾಟದ ಮಧ್ಯೆ ಯಥಾಸ್ಥಿತಿವಾದಿ ಶಕ್ತಿಗಳಿಂದ ಪ್ರಭುತ್ವವು ನಿಯಂತ್ರಣಕ್ಕೊಳಪಡುತ್ತಿರುತ್ತದೆ... ಇದನ್ನು ನಾವು ಮನಗಂಡು ಎದುರಿಸದೆ ಇದ್ದರೆ ಪ್ರಭುತ್ವವು ಪ್ರಗತಿಗೆ ಒಂದು ಭಾರಿ ತಡೆಗೋಡೆಯಾಗಿ ಮಾರ್ಪಟ್ಟು ಅದನ್ನು ದಮನ ಮಾಡಲು ತನ್ನೆಲ್ಲ ಪರಮ ಅಧಿಕಾರವನ್ನು ನಾಗರಿಕರ ಮೇಲೆ ಬಳಸುತ್ತದೆ. ನಾಗರಿಕರು ಈ ಎಚ್ಚರಿಕೆಯನ್ನು ಇಟ್ಟುಕೊಂಡಿದ್ದಾಗ ಮಾತ್ರ ಒಂದು ಕ್ರಮಬದ್ಧವಾದ ಸಾಮಾಜಿಕ ಪ್ರಗತಿಯು ಸಾಧ್ಯವಾಗಿ ಸಮಾಜವು ನಿರಂತರವಾಗಿ 'ದಬ್ಬಾಳಿಕೆ ಇಲ್ಲಾ ಕ್ರಾಂತಿ' ಎಂಬೆರಡು ಕಂದಕಗಳ ನಡುವೆ ಸಿಕ್ಕಿಕೊಂಡು ಪಾಡು ಪಡಬೇಕಾಗಿ ಬರುವುದಿಲ್ಲ. ಹೀಗಾಗಿ ನಾಗರಿಕ ಸ್ವಾತಂತ್ರ್ಯದ ಪರಿಕಲ್ಪನೆಯು ಅಗತ್ಯವಾಗಿ ಒಂದು ಉದಾರವಾದಿ ವಿಚಾರವಾಗಿದ್ದು ಒಂದು ರೀತಿಯಲ್ಲಿ 'ಪ್ರಭುತ್ವದ ದಬ್ಬಾಳಿಕೆ ಅಥವಾ ಸಾಮೂಹಿಕ ಬಂಡಾಯ' ಎಂಬ ಈ ಎರಡರ ಕ್ರೂರ ಪರಿಣಾಮಗಳನ್ನು ಹೀರಿಕೊಳ್ಳುವ ಆಘಾತ ಪ್ರತಿರೋಧಕ ಸಾಧನದಂತೆ ಕೆಲಸ ಮಾಡುತ್ತದೆ".

ಏಕರೂಪಿ ಮನಸ್ಸು ಮತ್ತು ಅದು ಹೊರಡಿಸಬಹುದಾದ ಸಾಮಾಜಿಕ ವ್ಯವಸ್ಥೆಗಳ –ಅದು ಮಾರ್ಕ್ಸ್‌ವಾದಿಗಳ ಮಾದರಿಯದ್ದೇ ಆಗಿರಲಿ ಅಥವಾ ಬಂಡವಾಳಶಾಹಿಗಳದ್ದೇ ಆಗಿರಲಿ–ಈ ಬಗೆಗೆ ಡಾ.ಲೋಹಿಯಾರವರಿಗಿದ್ದ ಸಮರ್ಥನೀಯ ಭಯವೇ ಅವರು ಹಿಂಸೆಯನ್ನು ಆಶ್ರಯಿಸದೇ ಕಾರ್ಯಸಾಧ್ಯವಾಗಬಲ್ಲ ಸಾಮಾಜಿಕ ಬದಲಾವಣೆಯ ಮಾದರಿಗಳನ್ನು ಶೋಧಿಸಿ ಬೆಳೆಸುವ ಬಗ್ಗೆ ಸದಾ ಚಿಂತಿಸುವಂತೆ ಮಾಡಿತ್ತು. ಈ ನಿಟ್ಟಿನಲ್ಲಿ ಲೋಹಿಯಾರ ಜೀವನ ಮತ್ತು ಚಿಂತನೆಗಳು ಮತ್ತು ಅವರ ಶೀಲವಂತ ಜೀವನದ ಪರಿಕಲ್ಪನೆಯು ಬ್ರೆಜಿಲ್‌ನ ಹೆಸರಾಂತ ಶಿಕ್ಷಣ ತಜ್ಞ ಪೌಲೊ ಫ್ರೇಯ್ರ್ ಅವರು ಕರೆದಂತೆ ಒಂದು 'ಮಾನವೀಕೃತ ಜಗತ್ತಿನ ಹುಡುಕಾಟ'ವೇ ಆಗಿತ್ತು. ದೌರ್ಜನ್ಯ, ದಮನಗಳ ವಿರುದ್ಧದ ಸ್ವಾತಂತ್ರ್ಯಪರವಾದ ಪ್ರತಿ ಹೋರಾಟದಲ್ಲೂ ಸಮಾನತೆಗಾಗಿನ ಹುಡುಕಾಟವು ಕೊನೆಗೆ ಸಮಾನ ಅವಕಾಶದ ಆಗ್ರಹ ಮತ್ತು ಕೂಗುಗಳಾಗಿ ಅವನತಿ ಹೊಂದಿ ದಮನಿತರು ತಮ್ಮ ಸರದಿಯಲ್ಲಿ ದಮನಕಾರರನ್ನು ದಮನಿಸುವ ಅವಕಾಶಗಳನ್ನಾಗಿ ಪರಿವರ್ತಿಸಿಕೊಳ್ಳುತ್ತಿರುವ ಪರಿಪಾಠಗಳು ಕಂಡುಬರುತ್ತಿವೆ. ಹಾಗಾಗಿ ದೌರ್ಜನ್ಯ ಮತ್ತು ಶೋಷಣೆಯ ಅಮಾನುಷ ಸ್ಥಿತಿಯು ಮುಂದುವರಿಯುತ್ತಲೇ ಹೋಗುತ್ತದೆ. ಹಿಂಸಾತ್ಮಕ ಚಳುವಳಿಗಳು ಸಾಮಾಜಿಕ ಚರ್ಚೆ ಮತ್ತು ಮಾತುಕತೆಗಳು ದಾರಿ ತಪ್ಪಿದ ಮತ್ತು ಸೋತು ಸೊರಗಿರುವ ಸಂಕೇತವಾದರೂ, ಎರಡು ವಿಷಯಗಳನ್ನು ಮಾತ್ರ ಇಲ್ಲಿ ಅರ್ಥಮಾಡಿಕೊಳ್ಳಬೇಕು. ಮೊದಲನೆಯದೆಂದರೆ, ಸಮಾಜ ಮತ್ತು ಪ್ರಭುತ್ವವು ಜನರ ಭಿನ್ನಾಭಿಪ್ರಾಯಗಳು ಮತ್ತು ಅಸಮ್ಮತಿಗಳನ್ನು, ಹಿಂಸೆಯ ವಿರುದ್ಧ ರಕ್ಷಾ ಕವಾಟಗಳಾಗಿ ವರ್ತಿಸುವ ನಾಗರೀಕ ಸ್ವಾತಂತ್ರ್ಯದ ಚೌಕಟ್ಟಿನಲ್ಲೇ, ಅಭಿವ್ಯಕ್ತಿಸಲು ಅವಕಾಶ ಕೊಟ್ಟರೆ ಜನರು ಸಾಮಾನ್ಯವಾಗಿ ಹಿಂಸೆಯನ್ನು ಆಶ್ರಯಿಸುವುದಿಲ್ಲ. ಎರಡನೆಯದಾಗಿ, ಹಿಂಸೆಯ ಅಭಿವ್ಯಕ್ತಿಯನ್ನು ಪ್ರಭುತ್ವವು ಕಾನೂನು ಬಾಹಿರ ಮತ್ತು ಅನಿಯಂತ್ರಿತ ಹಿಂಸಾ ಮಾರ್ಗಗಳನ್ನೇ ಬಳಸಿ ಹತ್ತಿಕ್ಕುವುದು ಸರಿಯಲ್ಲ. ಏಕೆಂದರೆ ಅದು ಇನ್ನೂ ಹೆಚ್ಚಿನ ಪ್ರತಿರೋಧ ಮತ್ತು ಹಿಂಸೆಯನ್ನು ಹುಟ್ಟು ಹಾಕುತ್ತದೆ. ಲೋಹಿಯಾ ಇದರ ಬಗ್ಗೆ ಸದಾ ಹೇಳುತ್ತಿದ್ದರು

ನ್ಯಾಯಸಮ್ಮತತೆ ಮತ್ತು ಸಮಂಜಸತೆ/ಕಾನೂನು ಸಮ್ಮತತೆ ಮತ್ತು ನಾಗರೀಕ ಸ್ವಾತಂತ್ರ್ಯ ಎಂಬ ಮೂಲ ಸತ್ವಗಳನ್ನು ಇತ್ತೀಚಿನ ಕೆಲ ದಶಕಗಳಿಂದ ಅನೇಕ ದೇಶಗಳಲ್ಲಿ ವ್ಯವಸ್ಥಿತವಾಗಿ ನಾಶಗೊಳಿಸುತ್ತಲಿರುವುದನ್ನು ನಾವು ನೋಡುತ್ತಿದ್ದೇವೆ. ನಮ್ಮ ದೇಶವೂ ಇದಕ್ಕೆ ಹೊರತಾಗೇನೂ ಇಲ್ಲ.' ವಾಷಿಂಗ್ಟನ್ ಒಮ್ಮತ' ಎಂದೂ ಮತ್ತು ಅಗತ್ಯ ಆರ್ಥಿಕ ರಚನೆಗಳ ಸುಧಾರಣೆಗೆಂದೂ ಭಾರತದಲ್ಲಿ ನವ ಉದಾರವಾದಿ ಆರ್ಥಿಕ ಚಿಂತನೆಗಳು ಕಾರ್ಯರೂಪವನ್ನು ಪಡೆದು ತನ್ನ ಬೇರುಗಳನ್ನು ಪಸರಿಸಿಕೊಂಡು ಭದ್ರಪಡಿಸಿಕೊಳ್ಳುತ್ತ ಬಂದಹಾಗೆ ಅದು ಗಟ್ಟಿಯಾದ ಏಕರೂಪಿ ಮನಸ್ಸು, ಸಿದ್ಧಾಂತ ಮತ್ತು ಸಂಸ್ಕೃತಿಯನ್ನು ಸೃಷ್ಟಿಸಿ ದೇಶದ ಆಂತರ್ಯವನ್ನೆಲ್ಲ ವ್ಯಾಪಿಸುತ್ತಾ ಬಂದಿದೆ. ಇದು ಅಸಮ್ಮತಿಯ ಮತ್ತು ವಿರೋಧದ ಅಭಿವ್ಯಕ್ತಿಗಳನ್ನು ರಾಷ್ಟ್ರ ವಿರೋಧಿ ಮತ್ತು ಅಭಿವೃದ್ಧಿ ವಿರೋಧಿ ಎಂದು ಖಂಡಿಸುವ ಮತ್ತು ಹತ್ತಿಕ್ಕುವ ತೀರಾ ತೆಳು/ಹುಸಿ ರಾಷ್ಟ್ರೀಯತೆಯ ಭಾವವನ್ನು ನಮ್ಮ ಜನಮಾನಸದಲ್ಲಿ ವ್ಯವಸ್ಥಿತವಾಗಿ ಬೆಳೆಸುತ್ತಿದೆ. ಭಿನ್ನ ಅಭಿಪ್ರಾಯದ/ಅಸಮ್ಮತಿಯ ಪ್ರತಿ ಅಭಿವ್ಯಕ್ತಿಯೂ ನಾವು ಕಟ್ಟಿಕೊಳ್ಳುತ್ತಿರುವ ಅಭಿವೃದ್ಧಿ ಮತ್ತು ರಾಷ್ಟ್ರೀಯತೆಯ ಮಾದರಿಗಳಿಗೆ ಅಡ್ಡಿಯಾಗುತ್ತಿರುವ ಸಂಭಾವ್ಯ ಅಪಾಯಗಳು ಎಂಬ ಮಾತುಗಳು ಈ ಜನಪ್ರಿಯ ಸಂಸ್ಕೃತಿಯ ನಡುವೆ ಮತ್ತು ಗಣ್ಯರ/ಪ್ರಮುಖರ ಮಾತುಕತೆಗಳಲ್ಲಿ/ಉಪನ್ಯಾಸಗಳಲ್ಲಿ ಕೇಳಿಬರುತ್ತಿದೆ. ಈ ಅಭಿವೃದ್ಧಿ ಮಾದರಿಯಾದರೂ ಎಂತಹದ್ದು? ಬೆರಳೆಣಿಕೆಯ ಪ್ರತಿಷ್ಠಿತರನ್ನು ಬಿಲಿಯನ್ ಡಾಲರ್‌ನ ಒಡೆಯರನ್ನಾಗಿ ಮಾಡುತ್ತಾ ನೂರಾರು ಲಕ್ಷ ಜನರನ್ನು ಅಂಚಿಗೆ ತಳ್ಳುತ್ತಿರುವ, ಅವರ ಮೂಲಭೂತ ಅವಶ್ಯಕತೆಗಳಾದ ಆಹಾರ, ವಸತಿ, ಸೂರು, ಶುದ್ಧ ನೀರು, ಗಾಳಿ, ಸಾಮಾಜಿಕ ಆಧಾರಗಳು ಇತ್ಯಾದಿಗಳಿಂದ ವಂಚಿತರನ್ನಾಗಿಸಿ ಅಮಾನುಷ ಸ್ಥಿತಿಗೆ ನೂಕುತ್ತಿರುವ ಮಾದರಿ. ಹೀಗೆ ರಾಜಕಾರಣದ ಪ್ರಕ್ರಿಯೆಯು ಬಹುಜನರ ಮೂಲಭೂತ ಬೇಡಿಕೆಗಳನ್ನು ನಿರ್ಲಕ್ಷಿಸಿ ಹೊರಗಿಟ್ಟಂತಹ ಪರಿಸ್ಥಿತಿಯಲ್ಲಿ ಅವರು ತಮ್ಮ ಸಿಟ್ಟನ್ನ, ಅಸಮ್ಮತಿಯನ್ನು ವ್ಯಕ್ತಪಡಿಸಿದಾಗ ಈ ಪ್ರತಿಷ್ಠಿತ ಸಂಸ್ಕೃತಿಯು ಇದಕ್ಕೆ ಪ್ರತಿಕ್ರಿಯೆಯಾಗಿ ಸುವ್ಯವಸ್ಥೆಯನ್ನು ಕಾಪಾಡುವ ನೆಪದಲ್ಲಿ ಪ್ರಭುತ್ವದ ಸಹಾಯದಿಂದ ಅಂತಹ ಪ್ರತಿಭಟನೆಗಳನ್ನು ಬಗ್ಗುಬಡಿಯುತ್ತದೆ, ಧ್ವನಿಗಳನ್ನು ಹತ್ತಿಕ್ಕಲಾಗುತ್ತದೆ. ಹೀಗೆ ಈ ಪ್ರತಿಷ್ಠಿತ ಜನರು ಮತ್ತೆ ನಿಶ್ಚಿಂತರಾಗಿ ತಮ್ಮತಮ್ಮ ಇನ್ನೂ ತೆಳುವಾದ ಟಿ.ವಿ.ಗಳ, ತಳುಕುಬಳುಕಿನ ಸಂಸ್ಕೃತಿಯ ಮತ್ತು ಐಷಾರಾಮಿ ಜೀವನ ಶೈಲಿಯ ಮೊರೆಹೋಗುತ್ತಾರೆ. ಈ ಎಲ್ಲ ಆತ್ಮಘಾತಕ ಕೃತ್ಯಗಳಿಗೆ, ಒಂದಷ್ಟು ಸಮರ್ಥನೆಗಳನ್ನು /ಉಪದೇಶಗಳನ್ನು, ನಮ್ಮನ್ನು ಇನ್ನಷ್ಟು ರಾಕ್ಷಸಗೊಳಿಸುವ ದೇವರು, ಧರ್ಮ ಮತ್ತು ಏಕರೂಪಿ ಧಾರ್ಮಿಕ ವ್ಯವಸ್ಥೆಯ ನಿರ್ಮಾಣದ ಹೆಸರಿನಲ್ಲಿ ಒಂದಷ್ಟು ಸಮರ್ಥನೆಗಳನ್ನು /ಉಪದೇಶಗಳನ್ನು ಕೊಟ್ಟುಕೊಳ್ಳುತಿದ್ದಾರೆ. ಈ ಎಲ್ಲ ಕೃತ್ಯಗಳನ್ನು ನಮ್ಮ ಸಾಂವಿಧಾನಿಕ ರಚನೆಗಳನ್ನು ತಿರುಚುವುದರ ಮೂಲಕ ಮತ್ತು ದ್ವೇಷವನ್ನೇ ತುಂಬಿಕೊಂಡ ಸಣ್ಣ ಸಣ್ಣ ಯುವ ಪಡೆಗಳ ಮೂಲಕ ಸಾಧಿಸಿಕೊಳ್ಳಲಾಗುತ್ತಿದೆ. **(ಮುಂದುವರೆಯುವುದು)**

(ಕೃಪೆ : ***ಜನತಾ,*** ೨೧, ಜನವರಿ, ೨೦೧೮)

(ಕನ್ನಡಕ್ಕೆ : **ಬಿ.ವಿ. ಸುರೇಂದ್ರ**)

# ಅಯೋಧ್ಯೆಗೆ ಗಾಂಧೀಜಿಯ ಎರಡು ಭೇಟಿಗಳು : ಒಂದು ನೆನಪು

ತಿಂಗಳ ವಿಶೇಷ ಲೇಖನ

–ಕೃಷ್ಣ ಪ್ರತಾಪ್ ಸಿಂಗ್



**ಗಾಂಧೀಜಿಗೆ ಬಹು ಪ್ರಿಯ ಮತ್ತು ಆದರ್ಶ ವ್ಯಕ್ತಿತ್ವವಾಗಿದ್ದ ರಾಮನ ರಾಜಧಾನಿ ಅಯೋಧ್ಯೆಗೆ ಖಿಲಾಫತ್ ಚಳುವಳಿಯ ಮಧ್ಯದಲ್ಲಿ ಅವರು ಬಂದು ಸಾರಿದ ಅಹಿಂಸೆ ಮತ್ತು ಹಿಂದೂ–ಮುಸ್ಲಿಂ ಐಕ್ಯತೆಯ ಸಂದೇಶವನ್ನು ಅಯೋಧ್ಯಾ ವಿವಾದ ಸರ್ವೋನ್ನತ ನ್ಯಾಯಾಲಯದಲ್ಲಿ ಅಂತಿಮ ಹಂತದ ವಿಚಾರಣೆಯ ಘಟ್ಟ ತಲುಪಿ ತೀರ್ಪಿನ ಬಗ್ಗೆ ರಾಷ್ಟ್ರಾದ್ಯಂತ ಕುತೂಹಲ ಹೆಚ್ಚುತ್ತಿರುವ ಸಂದರ್ಭದಲ್ಲಿ ನೆನಪಿಸಿಕೊಳ್ಳುವುದು ಬಹು ಉಚಿತವಾದೀತು.**–ಸಂ.

೧೯೨೧ನೆಯ ಇಸವಿ ಫೆಬ್ರವರಿ ೧೦ ರಂದು ಗಾಂಧಿ ಅಯೋಧ್ಯೆಗೆ ಭೇಟಿ ನೀಡಿದರು, ರಾಮನ ಹೆಸರಿನೊಂದಿಗೆ ಬೆಸೆಯಲಾದ ಈ ಸ್ಥಳಕ್ಕೆ ಅವರು ನೀಡಿದ ಎರಡು ಭೇಟಿಗಳಲ್ಲಿ ಇದು ಮೊದಲನೆಯದು. ಅವರ ಬಳಿ ನೀಡುವುದಕ್ಕೆ ಕೇವಲ ಎರಡು ಸಂದೇಶಗಳಿದ್ದವು, ಅವು ಹಿಂದು ಮುಸ್ಲಿಂ ಐಕ್ಯತೆ ಮತ್ತು ಅಹಿಂಸೆ. ತಮ್ಮ ಜೀವನದುದ್ದಕ್ಕೂ ರಾಮರಾಜ್ಯಕ್ಕಾಗಿ ಶ್ರಮಿಸುವ ಸ್ಫೂರ್ತಿಯನ್ನು ಹೊಂದಿದ್ದ ಮಹಾತ್ಮಾ ಗಾಂಧೀಜಿಯವರು ರಾಮನ ಜನ್ಮಸ್ಥಳವಾದ ಅಯೋಧ್ಯೆಗೆ ಕೇವಲ ಎರಡು ಸಲ ಭೇಟಿ ನೀಡಿದ್ದರು ಎಂದರೆ ಯಾರಿಗಾದರೂ ಆಶ್ಚರ್ಯವಾಗಬಹುದು. ಅದೇನೇ ಇರಲಿ, ಈ ಎರಡೂ ಸಂದರ್ಭಗಳಲ್ಲೂ ಎರಡು ಭೇಟಿಗಳ ಅಗಾಧ ಮಹತ್ವವನ್ನು ನಾವು ಅರಿಯಬೇಕಿದೆ.

೧೯೨೧ರ ಫೆಬ್ರವರಿ ೧೦ ರಂದು, ಗಾಂಧೀಜಿಯವರು ಅಯೋಧ್ಯೆಗೆ ಭೇಟಿ ನೀಡಿದ್ದು ಅಯೋಧ್ಯೆ ಮತ್ತು ಫೈಜಾಬಾದ್ ಎಂಬ ಅವಳಿ ನಗರಗಳಾದ್ಯಂತ ಅಪಾರವಾದ ಭಾವೋದ್ವೇಗವನ್ನು ಉಂಟುಮಾಡಿತ್ತು ಎಂಬುದನ್ನು ಅಂದಿನ ಇತಿಹಾಸದ ಜಾಡು ತಿಳಿದವರು ಜ್ಞಾಪಿಸಿಕೊಳ್ಳುತ್ತಾರೆ. ಅವರು ಬರಬೇಕಿದ್ದ ರೈಲು ಬರುವುದಕ್ಕೆ ಹಲವು ಗಂಟೆಗಳ ಮೊದಲೇ, ರೈಲ್ವೇ ನಿಲ್ದಾಣದಿಂದ ಪ್ರಾರಂಭವಾಗಿ ಗಾಂಧೀಜಿಯವರು ಜನರನ್ನುದ್ದೇಶೀಸಿ ಮಾತನಾಡಲಿದ್ದ ಸ್ಥಳದವರೆಗೂ,ರಸ್ತೆಯ ಎರಡೂ ಬದಿಯಲ್ಲಿ ಮತ್ತು ಮನೆಗಳ ಮೇಲೆ ಎಲ್ಲೆಲ್ಲೂ ಜನಜಂಗುಳಿ ನೆರೆದಿತ್ತು. ಪ್ರತಿಯೊಬ್ಬರದ್ದೂ ಒಂದೇ ಬಯಕೆ –ಗಾಂಧೀಜಿಯವರ ದರ್ಶನದಿಂದ ಧನ್ಯರಾಗಬೇಕೆಂಬುದು.

ಭವ್ಯವಾದ ಫೈಜಾಬಾದ್ ಚೌಕಕ್ಕೊಂದು ಚೆಲುವನ್ನು ತಂದು ಕೊಡುವ ಗಡಿಯಾರದ ಗೋಪುರವು ಶಹನಾಯಿಯ ನಾದವನ್ನು ಅನುರಣಿಸುತ್ತಿತ್ತು. ಪ್ರತಿಯೊಬ್ಬರ ಬಾಯಲ್ಲೂ ಒಂದೇ ಮಾತು :ನಮ್ಮನ್ನು ಸ್ವತಂತ್ರಗೊಳಿಸಲು ಗಾಂಧೀಜಿ ಬರುತ್ತಿದ್ದಾರೆ. ಕಾರ್ಯಕ್ರಮವು ನಡೆಯಬೇಕಾದ ಸ್ಥಳ, ಅಯೋಧ್ಯೆ ಮತ್ತು ಫ್ಯಜಾಬಾದ್ ನಡುವೆ ಇರುವ ಜಲ್ಪ ನಲ್ಲಾ ಎಂಬ ಪ್ರದೇಶದ ಪಶ್ಚಿಮಕ್ಕಿರುವ ಮೈದಾನ. ೧೯೧೮ ರಲ್ಲಿ ಬ್ರಿಟಿಷರು ಪ್ರಥಮ ಮಹಾಯುದ್ಧದ ಗೆಲುವನ್ನು ಆಚರಿಸಲು ಈ ಮೈದಾನವನ್ನು ಆಯ್ದುಕೊಂಡಿದ್ದರು. ಆ ನಿರ್ದಿಷ್ಠ ಕಾರಣಕ್ಕಾಗಿಯೇ–ಬ್ರಿಟಿಷರ ಮತ್ತು ಗಾಂಧೀಜಿಯವರ ವಿಧಾನಗಳ ನಡುವೆ ಇರುವ ಭಿನ್ನತೆಯನ್ನು ಬ್ರಿಟಿಷರಿಗೆ ತೋರಿಸಲು–– ಕಾಂಗ್ರೆಸ್ ಈ ಸ್ಥಳವನ್ನು ಆಯ್ಕೆ ಮಾಡಿತ್ತು.

ರೈಲು, ನಿಲ್ದಾಣ ಪ್ರವೇಶಿಸುತ್ತಿದ್ದಂತೆ, ಇಬ್ಬರು ಸ್ಥಳೀಯ ಕಾಂಗ್ರೆಸ್ ನಾಯಕರು, ಆಚಾರ್ಯ ನರೇಂದ್ರ ದೇವ ಮತ್ತು ಮಹಾಶಯ್ ಕೇದಾರನಾಥ್ ಅವರುಗಳು ಕಾಂಗ್ರೆಸ್ ಬಾವುಟವನ್ನು ಎತ್ತಿ ಹಿಡಿದು ಗಾಂಧೀಜಿಯವರಿದ್ದ ಬೋಗಿಯ ಕಡೆಗೆ ನಡೆದರು. ಆಗ ಅವರ ಕಣ್ಣಿಗೆ ಬಿದ್ದ ದೃಶ್ಯವನ್ನು ಅವರು ನಿರೀಕ್ಷಿಸಿರಲಿಲ್ಲ. ರೈಲು ಫೈಜಾಬಾದ್ ಜಿಲ್ಲೆಯನ್ನು ಪ್ರವೇಶಿಸುತ್ತಿದ್ದ ಹಾಗೇ ಗಾಂಧೀಜಿ ತಮ್ಮ ಬೋಗಿಯ ಎಲ್ಲಾ ಕಿಟಕಿಗಳನ್ನು ಮುಚ್ಚಲು ತಿಳಿಸಿದ್ದರು, ಯಾರೊಬ್ಬರನ್ನೂ ಭೆಟಿಯಾಗಲು ಅಥವಾ ಮಾತನಾಡಲೂ ಅವರು ನಿರಾಕರಿಸಿದರು. ಅವಧ್‌ನ ರೈತರ ಚಳುವಳಿಯು ತಮ್ಮ ಆದರ್ಶದ ಮಾರ್ಗವನ್ನು ಬಿಟ್ಟು ಆಕ್ರಮಣಕಾರೀ ಯುದ್ಧಘೋಷಣೆಗೆ ತಿರುಗಿದ್ದು, ಅವರನ್ನು ಕಂಗೆಡಿಸಿತ್ತು. ಚಳುವಳಿಯಲ್ಲಿದ್ದವರಿಗೆ ಅಹಿಂಸೆಯ ಬಗ್ಗೆ ಗೌರವವಿರಲಿಲ್ಲ. ವಿಶೇಷವಾಗಿ ಫ್ಯಜಾಬಾದ್‌ನ ರೈತರು ಯುದ್ಧದ ಹುರುಪಿನಲ್ಲಿದ್ದರು. ಬಿದಾಹಾರ್‌ನಲ್ಲಿ ತಾಲೂಕದಾರ್ ಮತ್ತು ಜಮೀನ್ದಾರ್‌ಗಳ ಮನೆಗಳನ್ನು ಲೂಟಿಮಾಡಿ, ಬೆಂಕಿ ಹಚ್ಚಿದ್ದರು.

ಗಾಂಧೀಜಿಯವರಿಗೆ ಅಲ್ಲಿನ ಪರಿಸ್ಥಿತಿ ಅಸಹನೀಯವಾಗಿ ಕಂಡಿತ್ತು, ಅವರ ಅತೃಪ್ತಿಯನ್ನು ವ್ಯಕ್ತಪಡಿಸುವ ಕಾರಣಕ್ಕಾದರೂ ಅವರು ಜನರನ್ನುದ್ದೇಶಿಸಿ ಮತನಾಡಬೇಕೆಂಬ ಮನವೊಲಿಕೆಗೆ ಅವರು ನಂತರದಲ್ಲಿ ಸಮ್ಮತಿಸಿದರು. ಅವರೊಡನೆ ಮೌಲಾನಾ ಅಬ್ದುಲ್ ಕಲಾಂ ಅಝಾದ್ ಮತ್ತು ಲಕ್ನೋ ಕಾಂಗ್ರೆಸ್ ನಿರ್ಣಯದ ಅನುಸಾರ, ಹಿಂದೂ–ಮುಸ್ಲಿಂ ಐಕ್ಯತೆ, ಮತ್ತು ಖಿಲಾಫತ್ ಚಳುವಳಿ ಹಾಗೂ ಅಸಹಕಾರ ಚಳುವಳಿಗಳನ್ನು ಒಂದುಗೂಡಿಸುವ ಪ್ರಯತ್ನದ ಭಾಗವಾಗಿ ಮೌಲಾನಾ ಶೌಕತ್ ಆಲಿಯವರು ಗಾಂಧೀಜಿಯವರೊಡನೆ ಪ್ರವಾಸ ಮಾಡುತ್ತಿದ್ದರು.

ಗಾಂಧೀಜಿಯವರು ಕಾರಿನಲ್ಲಿ ಕುಳಿತು ಮೆರವಣಿಗೆ ಹೊರಡುತ್ತಿದ್ದಂತೆ, ಬಿಚ್ಚುಗತ್ತಿಗಳನ್ನು ಕೈಯಲ್ಲಿ ಹಿಡಿದು, ತಮ್ಮನ್ನು ಸ್ವಾಗತಿಸಲು ಬಂದ ಖಿಲಾಫತ್ ಚಳುವಳಿಯ ಬೆಂಬಲಿಗರನ್ನು ಅವರು ಎದುರುಗೊಳ್ಳಬೇಕಾಯಿತು. ಗಾಂಧೀಜಿಯವರ ಪ್ರಥಮ ಸಂದೇಶವೇ, ಹಿಂಸೆಯ ಮಾರ್ಗಕ್ಕೆ ಪ್ರತಿಯಾಗಿ ಹೋರಾಟದ ಕಷ್ಟಗಳನ್ನು ಸಹಿಸುವುದನ್ನು ಕಲಿಯಬೇಕು ಎಂಬುದಾಗಿತ್ತು. ನಂತರ ಯಾವ ಸಂದೇಹಕ್ಕೂ ಎಡೆ ಇಲ್ಲದಂತೆ ಕಠಿಣವಾದ ಭಾಷೆಯಲ್ಲಿ ಅವರು ಹಿಂಸೆಯನ್ನು ಖಂಡಿಸಿದರು. ಹಿಂಸೆಯಲ್ಲಿ ತೊಡಗಿದ ರೈತರನ್ನು ಮತ್ತು ಖಡ್ಗ ಹಿಡಿದವರನ್ನು ಕುರಿತು 'ಹಿಂಸೆಯು ಶೌರ್ಯದ ಲಕ್ಷಣವಲ್ಲ, ಅದು ಹೇಡಿತನದ ಲಕ್ಷಣ, ಖಡ್ಗವು ಹೇಡಿಗಳ ಅಸ್ತ್ರ' ಎಂಬ ಮಾತುಗಳನ್ನಾಡಿದರು.

ಗಾಂಧೀಜಿಯವರು, ಈ ಎರಡು (ಅಹಿಂಸೆ ಮತ್ತು ಹಿಂದು ಮುಸ್ಲಿಂ ಐಕ್ಯತೆ) ಮಂತ್ರಗಳನ್ನು ತಮ್ಮ ಅನುಯಾಯಿಗಳಿಗೆ ಬೋಧಿಸಲು ಆರಿಸಿಕೊಂಡಿದ್ದು, ಯಾವ ರಾಮನ ರಾಜ್ಯವು, ಗಾಂಧೀಜಿಯವರಿಗೆ ಜೀವನ ಪರ್ಯಂತ ಒಂದು ಆದರ್ಶವಾಗಿತ್ತೋ ಅದೇ ರಾಮನ ಅಯೋಧ್ಯೆಯನ್ನು ಎಂಬುದು ಗಮನಾರ್ಹ. ಅವರ ವಿಶ್ರಾಂತಿಯ ವ್ಯವಸ್ಥೆಯನ್ನು ಯಾವ ರೀತಿಯಲ್ಲಿ ಮಾಡಲಾಗಿತ್ತೆಂದರೆ, ಅವರು ವಿಶ್ರಾಂತಿ ತೆಗೆದುಕೊಳ್ಳುತ್ತಿರುವಾಗಲೇ, ಕೊನೆಯೇ ಇಲ್ಲದಷ್ಟು ಜನರ ಸಾಲು ಅವರ ದರ್ಶನವನ್ನು ಪಡೆಯಬಹುದಾಗಿತ್ತು. ಆ ರಾತ್ರಿ ತಮ್ಮ ಕಣ್ಣುಗಳಲ್ಲಿ ಪಶ್ಚಾತ್ತಾಪದ ಕಣ್ಣೀರು ಹರಿಸುತ್ತಾ, ಸಹಸ್ರಾರು ರೈತರು ಮಹಾತ್ಮರಲ್ಲಿ ಮೌನವಾಗಿ ಕ್ಷಮೆ ಯಾಚಿಸಿದರು.

ಮರುದಿನ ಬೆಳಗ್ಗೆ ಸರಯೂ ನದಿಯಲ್ಲಿ ಮಿಂದು ಗಾಂಧೀಜಿಯವರು ತಮ್ಮ ಮುಂದಿನ ಪಯಣದಲ್ಲಿ ತೊಡಗಿದರು. ಆದರೆ ರೈತರ ಹಿಂಸೆಯಿಂದ ಅವರಿಗೆ ಉಂಟಾಗಿದ್ದ ನೋವು, ಕೇವಲ ಚಳುವಳಿಗೆ ಮಾತ್ರ ಹೊಡೆತ ನೀಡದೆ, ಅದೊಂದು ಅಪಮಾನದ ಕಾರಣವೂ ಸಹ ಆಗಿ ಗಾಂಧೀಜಿಯವರನ್ನು ಕಾಡುತ್ತಿತ್ತು. ಋಜು ಮಾರ್ಗದಿಂದ ದೂರ ಸರಿದಿದ್ದ ರೈತರಿಗೆ ಮಾರ್ಗದರ್ಶನ ಮಾಡಬೇಕೆಂದು ಅವರು ಜವಹರಲಾಲ್‌ನೆಹರು ಅವರನ್ನು ಒತ್ತಾಯಿಸಿದರು.

ಕೆಲವು ದಿನಗಳ ನಂತರ, ನೆಹರೂ ಅವರು ಬಂಡಾಯಗಾರ ರೈತರನ್ನು ಉದ್ದೇಶಿಸಿ ಮಾತನಾಡಿ, ಅವರು ಮಾಡಿದ ಅಕೃತ್ಯಗಳ ಸಾಮೂಹಿಕ ಜವಾಬ್ದಾರಿಯನ್ನು ಒಪ್ಪಿಕೊಳ್ಳುವಂತೆ ಮಾಡಿದರು. ಅದು ಎಷ್ಟರಮಟ್ಟಿಗೆ ಎಂದರೆ, ಹಲವಾರು ರೈತರು ತಾವು ಮಾಡಿದ ತಪ್ಪನ್ನು ಒಪ್ಪಿಕೊಂಡು ಸ್ವಇಚ್ಛೆಯಿಂದ ದೀರ್ಘವಾದ ಜೈಲುವಾಸವನ್ನು ಅನುಭವಿಸುವುದಕ್ಕೂ ಸಹ ಸಿದ್ದರಾದರು.

ಈ ಪ್ರಕರಣವು ಸತ್ಯ ಮತ್ತು ಅಹಿಂಸೆಗಳ ಮಾನದಂಡಗಳನ್ನಾಧರಿಸಿದ, ನೈತಿಕ ಹಾಗೂ ತಾತ್ವಿಕ ಶಕ್ತಿಗಳಿಂದ ಮುನ್ನಡೆಸಲ್ಪಟ್ಟ ಗಾಂಧೀಜಿಯವರ ಸ್ವಾತಂತ್ರ್ಯ ಹೋರಾಟದ ಪ್ರೇರಣೆ ಎಂತಹದು ಎಂಬುದನ್ನು ತಿಳಿಸುತ್ತದೆ. ಚೌರಿಚೌರಾ ಘಟನೆಯ ಸಂದರ್ಭದಲ್ಲಿ ಇಡೀ ಅಸಹಕಾರ ಚಳುವಳಿಯನ್ನೇ ಗಾಂಧೀಜಿ ಸ್ಥಗಿತಗೊಳಿಸಿದ್ದು ಎಲ್ಲರಿಗೂ ತಿಳಿದ ವಿಷಯವೇ ಆಗಿದೆ.

ಅಯೋಧ್ಯೆಯ ಸಾಧುಗಳನ್ನು ಭೇಟಿಮಾಡಿ ಅವರನ್ನು ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಳ್ಳುವಂತೆ ಮಾಡುವುದು ೧೯೨೧, ಫೆಬ್ರವರಿ ೧೦ ರಂದು ಗಾಂಧೀಜಿಯವರು ಅಯೋಧ್ಯೆಗೆ ನೀಡಿದ ಈ ಭೇಟಿಯ ಹಿಂದಿನ ಉದ್ದೇಶಗಳಲ್ಲೊಂದಾಗಿತ್ತು. ಹಿಂದೂ–ಮುಸ್ಲಿಂ ಐಕ್ಯತೆಯನ್ನು ಉತ್ತೇಜಿಸಲು ಖಿಲಾಫತ್ ಚಳುವಳಿಯನ್ನು ಬಳಸಿಕೊಳ್ಳುವ ಪ್ರಯತ್ನವು ಫಲ ನೀಡಲು ತೊಡಗಿದ್ದ ಹಿನ್ನೆಲೆಯಲ್ಲಿ, ಸಾಧುಗಳನ್ನು ಭೇಟಿಮಾಡುವ ಪ್ರಯತ್ನವು ಬಹಳ ಮಹತ್ವದ್ದಾಗಿತ್ತು (ಟರ್ಕಿಯ ಖಲಿಫರ ಆಳ್ವಿಕೆಯನ್ನು ರದ್ದುಪಡಿಸುವ ಬ್ರಿಟಿಷ್ ಪ್ರಧಾನಮಂತ್ರಿಯ ಪ್ರಯತ್ನವನ್ನು ಕೈಬಿಡುವಂತೆ ಮಾಡುವುದು ಖಿಲಾಫತ್ ಚಳುವಳಿಯ ' ಉದ್ದೇಶವಾಗಿತ್ತು, ಖಲೀಫತ್ ಆಳ್ವಿಕೆಯನ್ನು ಕೊನೆಗೊಳಿಸುವುದು ಇಸ್ಲಾಂಗೆ,

ಮತ್ತು ಮುಸ್ಲಿಂ ಧಾರ್ಮಿಕ ಸ್ವಾತಂತ್ರ್ಯಕ್ಕೆ ಧಕ್ಕೆಯುಂಟು ಮಾಡುವ ಪ್ರಯತ್ನವೆಂಬುದು ಮುಸ್ಲಿಮರ ಭಾವನೆಯಾಗಿತ್ತು) ಆ ಸಮಯದಲ್ಲಿ ಖಿಲಾಫತ್ ಚಳುವಳಿಯನ್ನು ತಮ್ಮ ನೀತಿಗಳಿಗೆ ತಕ್ಕಂತೆ ರೂಪುಗೊಳಿಸುವ ಪ್ರಯತ್ನದಲ್ಲಿ ಗಾಂಧೀಜಿ ತೊಡಗಿದ್ದರು. ಹಿಂದು ಮುಸ್ಲಿಂ ಐಕ್ಯತೆಯ ದಾರಿಗೆ ಬ್ರಿಟಿಷರು ಒಡ್ಡುತ್ತಿದ್ದ ಅಡೆತಡೆಗಳನ್ನು ನಿವಾರಿಸುವ ಪ್ರಯತ್ನದಲ್ಲೂ ಸಹ ಗಾಂಧೀಜಿ ನಿರತರಾಗಿದ್ದರು. ಆಗ ಅವರಿಗೆ ಎದುರಾದ ಬಹಳ ದೊಡ್ಡ ಅಡ್ಡಿಯೆಂದರೆ ಬ್ರಿಟಿಷರು ಧಾರ್ಮಿಕ ಬಣ್ಣ ನೀಡಲು ಪ್ರಯತ್ನಿಸುತ್ತಿದ್ದ ದನಗಳನ್ನು ಕೊಲ್ಲುವ ವಿಚಾರ. ಅಯೋಧ್ಯೆಯಲ್ಲಿ ಗಾಂಧೀಜಿಯವರು ಈ ವಿಚಾರದಲ್ಲಿ ಮುಕ್ತವಾಗಿ ಮಾತನಾಡಬಯಸುತ್ತಿದ್ದುದು ಸಹಜವೇ ಆಗಿತ್ತು. ಈ ವಿಚಾರದಲ್ಲಿ ಬ್ರಿಟಿಷ್ ಸರ್ಕಾರವನ್ನು ಅವರು ಕಟಕಟೆಯಲ್ಲಿ ನಿಲ್ಲಿಸಿದ ರೀತಿ, ಮತ್ತು ಗೋರಕ್ಷಣೆಗೆ ಹಿಂದು-ಮುಸ್ಲಿಂ ಐಕ್ಯತೆಯನ್ನು ಅನಿವಾರ್ಯಗೊಳಿಸಿದ ರೀತಿಗಳು ಅವರಿಗೆ ಮಾತ್ರವೇ ಸಾಧ್ಯವಿದ್ದಂತಹ ವಿಚಾರ.

ಹಿಂದಿನ ದಿನದ ದೀರ್ಘವಾದ ಚರ್ಚೆಗಳಿಂದ ದೈಹಿಕವಾಗಿ ವಿಪರೀತ ಬಳಲಿದ್ದ ಗಾಂಧೀಜಿ ಪಂಡಿತ್ ಚಾಂದೀರಾಮ್ ಅವರ ನಾಯಕತ್ವದಲ್ಲಿದ್ದ ಸಾಧುಗಳ ಭೇಟಿಗೆ ಸರಯೂ ನದಿ ತೀರಕ್ಕೆ ತೆರಳಿದಾಗ, ನಿಂತುಕೊಂಡು ಮಾತನಾಡಲೂ ಅವರಿಗೆ ಶಕ್ತಿಯಿರಲಿಲ್ಲ. ತಮ್ಮ ದೈಹಿಕ ನಿತ್ರಾಣದಿಂದಾಗಿ ತಾವು ಕುಳಿತುಕೊಂಡು ಮಾತನಾಡುವುದು ಅನಿವಾರ್ಯವಾದುದಕ್ಕಾಗಿ ಸಾಧುಗಳಲ್ಲಿ ಕ್ಷಮೆ ಕೋರಿ ತಮ್ಮ ಮಾತು ಮುಂದುವರಿಸಿದರು. ನಂತರ ಆ ಸಾಧುಗಳಿಗೆ ಅವರು ಹೀಗೆ ಹೇಳಿದರು: 'ದೇಶದಲ್ಲಿ ೫೬ ಲಕ್ಷ ಸಾಧುಗಳಿರುವುದಾಗಿ ಹೇಳಲಾಗುತ್ತದೆ. ೫೬ ಲಕ್ಷ ಸಾಧುಗಳೂ ನಿಮ್ಮ ಜೀವಗಳನ್ನು ಬಲಿಕೊಡಲು ಸಿದ್ಧರಾಗಿದ್ದರೆ, ನಿಮ್ಮ ತಪಸ್ಸು ಮತ್ತು ಪ್ರಾರ್ಥನೆಯ ಬಲದಿಂದ ನೀವು ದೇಶವನ್ನು ಸ್ವತಂತ್ರಗೊಳಿಸಬಹುದು. ಆದರೆ ನೀವೆಲ್ಲರೂ ನಿಮ್ಮ ದಾರಿಯಿಂದ ದೂರ ಸರಿದಿದ್ದೀರಿ. ಮೌಲ್ವಿಗಳೂ ಕೂಡ ಹಾಗೆಯೇ. ಮೌಲ್ವಿಗಳು ಮತ್ತು ಸಾಧುಗಳು ಏನಾದರೂ ಸಾಧಿಸಿದ್ದರೆ ಅದು ಹಿಂದುಗಳು ಮತ್ತು ಮುಸ್ಲಿಮರು ಪರಸ್ಪರ ಕಾದಾಡುವಂತೆ ಮಾಡಿರುವುದು ಮಾತ್ರ. ನಾನು ನಿಮಗಿಬ್ಬರಿಗೂ ಹೇಳುತ್ತೇನೆ. ಪರಸ್ಪರರಿಗೆ ಯಾವ ಕೆಡುಕನ್ನೂ ಮಾಡಿರದ ಇಬ್ಬರು ವ್ಯಕ್ತಿಗಳ ನಡುವೆ ಶತ್ರುತ್ವವನ್ನು ಉಂಟು ಮಾಡಲು ನಿಮಗೆ ಒಪ್ಪಿಗೆ ನೀಡುವ ಯಾವ ದೇವರ ಆದೇಶವೂ ಇಲ್ಲ'. ಗಾಂಧೀಜಿಯ ಈ ಕಠಿಣ ಮಾತುಗಳಿಂದ ಸಭೆ ದಂಗು ಬಡಿಯಿತು.

ಗಾಂಧೀಜಿಯವರು ಅಷ್ಟಕ್ಕೇ ನಿಲ್ಲಲಿಲ್ಲ, 'ನೀವು ಹಸುಗಳನ್ನು ರಕ್ಷಿಸಬೇಕೆಂದಿದ್ದರೆ, ನಿಮ್ಮ ಜೀವಗಳನ್ನು ಮುಸ್ಲಿಮರಿಗೆ ಕೊಡಲು ಸಿದ್ಧರಿರಬೇಕು ಎಂದು ಹರಿದ್ವಾರದ ಸಾಧುಗಳಿಗೆ ನಾನು ಹೇಳಿದೆ. ಬ್ರಿಟಿಷರು ನಮ್ಮ ನೆರೆಯವರಾಗಿದ್ದರೆ, ಹಸುಗಳನ್ನು ಕೊಂದು ಅವುಗಳನ್ನು ತಿನ್ನುವ ವಿಷಯಕ್ಕೆ ಅವರ ಧರ್ಮದಲ್ಲಿ ಯಾವ ನಿರ್ಬಂಧವೂ ಇಲ್ಲದಿದ್ದರೂ ಕೂಡ ನಮಗಾಗಿ ಅವರು ಆ ಅಭ್ಯಾಸವನ್ನು ತ್ಯಜಿಸುವಂತೆ ಅವರನ್ನು ಕೇಳಿಕೊಳ್ಳಬೇಕೆಂದು ನಿಮಗೆ ತಿಳಿಸುತ್ತಿದ್ದೆ. ಆದರೆ ಅವರು ನಮ್ಮನ್ನು ಆಳುತ್ತಿರುವವರು. ಅವರು ನಮ್ಮ-ನಿಮ್ಮ ಮಾತು ಕೇಳುವವರಲ್ಲ. ಹಾಗಾಗಿ ಸಾಧುಗಳಿಗೆ ನನ್ನ ಕೋರಿಕೆ ಏನೆಂದರೆ, ಗೋವುಗಳನ್ನು ರಕ್ಷಿಸುವುದು ನಿಮಗೆ ಬೇಕಿದ್ದರೆ, ಖಿಲಾಫತ್‌ಗಾಗಿ ನಿಮ್ಮ ಜೀವಗಳನ್ನು ಕೊಡಿ, ಗೋಹತ್ಯೆ ಮಾಡುತ್ತಾರೆಂಬ ಕಾರಣಕ್ಕೆ ಮುಸ್ಲಿಮರನ್ನು ಕೊಲ್ಲುವವರು ತಮ್ಮ ಧರ್ಮವನ್ನು ತೊರೆಯಬೇಕು. ಏಕೆಂದರೆ ಈ ರೀತಿಯ ನಿರ್ದೇಶನವು ಹಿಂದುಗಳಿಗೆ ಎಲ್ಲೂ ಇಲ್ಲ.' ಎಂದರು

ಮುಂದುವರಿದು ಅವರು ಹೇಳಿದರು : ಇತ್ತೀಚಿನ ದಿನಗಳಲ್ಲಿ ನಗರ ಸಭೆಗಳು ಗೋಹತ್ಯೆಯನ್ನು ನಿಷೇಧಿಸಬೇಕೆಂದು ಹಿಂದುಗಳು ಬಯಸುತ್ತಾರೆ. ಅದನ್ನು ಮೂರ್ಖತನವೆಂದು ನಾನು ಕರೆಯುತ್ತೇನೆ. ಈ ವಿಚಾರದಲ್ಲಿ ಕಲ್ಕತ್ತಾದ ಕೆಲವು ಮಾರ್ವಾಡಿ ಗೆಳೆಯರು, ಕಟುಕರಿಂದ ಕಡಿಯಲ್ಪಡಲಿರುವ ೨೦೦ ಹಸುಗಳನ್ನು ಕಾಪಾಡಲು ಏನಾದರೂ ಮಾಡುವಂತೆ ನನ್ನನ್ನು ಕೋರಲು ಕೆಲವರಿಗೆ ತಿಳಿಸಿದ್ದಾರಂತೆ. ಆದರೆ ನಾನು ಹಿಂದೂಗಳ ಭಾವನೆಗಳಿಗೆ ಧಕ್ಕೆ ಉಂಟುಮಾಡದಂಥ ಇನ್ನಾವ ಕೆಲಸಗಳನ್ನು ಮಾಡಬಹುದು ಎಂಬುದನ್ನು ಆ ಕಟುಕರಿಗೆ ತಿಳಿಸುವ ತನಕ ಒಂದೇ ಒಂದು ಹಸುವನ್ನಾದರೂ ಕಡಿಯಬೇಡಿರೆಂದು ಆ ಕಟುಕರಿಗೆ ನಾನು ಹೇಳಲಾರೆ. ಬೊಂಬಾಯಿಯಲ್ಲಿ ಆದದ್ದು ನೋಡಿ. ಕಟುಕರ ಬಳಿ ನೂರಾರು ದನಗಳಿದ್ದವು ಆದರೆ ಯಾವ ಹಿಂದುವೂ ಅವರ ಬಳಿ ಸುಳಿಯಲಿಲ್ಲ. ಖಿಲಾಫತ್ ಸಮಿತಿಯ ಸದಸ್ಯರು ಕಟುಕರ ಬಳಿ ಹೋಗಿ 'ನೀವು ಮಾಡುತ್ತಿರುವುದು ಸರಿಯಲ್ಲ, ಹಸುಗಳನ್ನು ಬಿಟ್ಟು ಬಿಡಿರಿ, ಅವುಗಳ ಬದಲಿಗೆ ಕುರಿಗಳನ್ನು ಕೊಂದುಕೊಳ್ಳಿರಿ' ಎಂದು ಹೇಳಿದರು. ಆ ಕಟುಕರೂ ಎಲ್ಲ ಹಸುಗಳನ್ನೂ ಬಿಟ್ಟು ಬಿಟ್ಟರು.... ಗೋರಕ್ಷಣೆ ಎಂದರೆ ಇದು.'

'ಹಸುಗಳ ರಕ್ಷಣೆಯ ಉದ್ದೇಶ ಕೇವಲ ಪ್ರಾಣಿ ರಕ್ಷಣೆಯಲ್ಲ: 'ಕಾಳಜಿ ಇರಬೇಕಾದದ್ದು ಹಸುಗಳನ್ನು ಸಾಕುವ ದುರ್ಬಲರ ಮತ್ತು ಅಸಹಾಯಕರ ರಕ್ಷಣೆಯ ಬಗ್ಗೆ. ಎಲ್ಲಿಯವರೆಗೆ ನಾವು ದುರ್ಬಲರ ರಕ್ಷಣೆ ಮಾಡುವುದಿಲ್ಲವೋ ಅಲ್ಲಿಯವರೆಗೆ ನಮ್ಮ ರಕ್ಷಣೆಗಾಗಿ ದೇವರನ್ನು ಪ್ರಾರ್ಥಿಸುವುದು ಪಾಪ.... ರಾಮನು ಸೀತೆಯನ್ನು ಪ್ರೀತಿಸಿದ ರೀತಿ ನಾವು ದೇವರನ್ನು ಪ್ರೀತಿಸಬೇಕು. ನಮ್ಮ ಧರ್ಮವನ್ನು ನಾವು ಆತ್ಮಪೂರ್ವಕವಾಗಿ, ಪರಿಪೂರ್ಣ ನಂಬಿಕೆ ಮತ್ತು ದೃಢವಿಶ್ವಾಸದಿಂದ ಪಾಲಿಸದೇ ಇರುವವರೆಗೆ ಈ ಪೈಶಾಚಿಕ ಸರ್ಕಾರವನ್ನು ನಾಶಪಡಿಸಲು ನಮಗೆ ಸಾಧ್ಯವಾಗದು. ನಾವು ಸ್ವರಾಜ್ಯವನ್ನೂ ಪಡೆಯಲಾರೆವು, ಧರ್ಮದ ಆಳ್ವಿಕೆಯೂ ಬರಲಾರದು. ರಾಮರಾಜ್ಯವನ್ನು ಮರಳಿ ತರುವುದು ಹಿಂದೂಗಳ ಶಕ್ತಿಯನ್ನು ಮೀರಿದ್ದು.' ಎಂದು ಅವರು ತಮ್ಮ ಭಾಷಣವನ್ನು ಕೊನೆಗೊಳಿಸಿದರು.

ಈ ಭಾಷಣದ ಇಂಗ್ಲಿಷ್ ಭಾಷಾಂತರವನ್ನು, ಲಕ್ನೋದಲ್ಲಿರುವ ಉತ್ತರ ಪ್ರದೇಶದ ರಾಜ್ಯಪತ್ರಾಗಾರದಲ್ಲಿ ಕಾಯ್ದಿಡಲಾಗಿದೆ. ಹಿಂದಿನ ಸಂಜೆ ಕೂಡ, ತಮ್ಮ ದಕ್ಷಿಣ ಆಫ್ರಿಕಾ ಸತ್ಯಾಗ್ರಹದ ಅನುಭವದ ಮೇಲೆ ಬೆಳಕು ಚೆಲ್ಲಿದ ಅವರು ಬ್ರಿಟಿಷ್ ಸರ್ಕಾರದ ವಿರುದ್ಧ, ಸರ್ಕಾರೀ ಅನುದಾನಿತ ಶಾಲೆಗಳನ್ನು ಬಹಿಷ್ಕರಿಸುವ ಮೂಲಕ, ವಿದೇಶೀ ಬಟ್ಟೆಗಳನ್ನು ಧರಿಸುವುದನ್ನು ಬಿಡುವುದರ ಮೂಲಕ, ಅದಕ್ಕೆ ಪ್ರತಿಯಾಗಿ ಚರಕಾದಲ್ಲಿ ನೂಲುವಮೂಲಕ, ಶಾಂತಿಯುತವಾದ ಅಸಹಕಾರ ಚಳುವಳಿಯಲ್ಲಿ ಪಾಲ್ಗೊಳ್ಳಬೇಕೆಂದು ಕರೆ ನೀಡಿದರು.

೧೯೨೯ ರಲ್ಲಿ ಹರಿಜನ ನಿಧಿಗಾಗಿ ದೇಣಿಗೆ ಕೇಳಲು ಅಯೋಧ್ಯೆಗೆ ಗಾಂಧೀಜಿಯವರು ಎರಡನೆಯ ಬಾರಿ ಬಂದರು. ಫೈಜಾಬಾದ್‌ನ ಮೋತಿಭಾಗ್ ಪ್ರದೇಶದಲ್ಲಿ ನಿಧಿಗಾಗಿ ಅವರಿಗೆ ಒಂದು ಬೆಳ್ಳಿಯ ಉಂಗುರವನ್ನು ನೀಡಲಾಯಿತು. ಅವರು ಅದನ್ನು ಅಲ್ಲೇ ಹರಾಜು ಹಾಕಲು ನಿರ್ಧರಿಸಿದರು.

ಅತಿ ಹೆಚ್ಚು ಬಿಡ್ ಅನ್ನು ಉತ್ತೇಜಿಸುವುದಕ್ಕಾಗಿ, ಅತಿ ಹೆಚ್ಚಿನ ಮೊತ್ತಕ್ಕೆ ಉಂಗುರವನ್ನು ಬಿಡ್ ಮಾಡಿದವರ ಬೆರಳಿಗೆ ಸ್ವತಃ ತಾವೇ ಉಂಗುರವನ್ನು ತೊಡಿಸುವುದಾಗಿ ಗಾಂಧೀಜಿ ಘೋಷಿಸಿದರು. ಒಬ್ಬ ಮನುಷ್ಯನು ಅದನ್ನು ೫೦ ರೂಪಾಯಿಗೆ ಬಿಡ್ ಮಾಡಿದನು. ಆತನ ಬೆರಳಿಗೆ ಉಂಗುರವನ್ನು ತೊಡಿಸಿ ಗಾಂಧೀಜಿ ತಮ್ಮ ಮಾತನ್ನು ಉಳಿಸಿಕೊಂಡರು. ಆ ಮನುಷ್ಯನ ಬಳಿ ೧೦೦ ರೂಪಾಯಿಯ ಒಂದೇ ನೋಟು ಇದ್ದು ಆತ ಆ ನೋಟನ್ನು ನೀಡಿ ತನಗೆ ಹಿಂದಕ್ಕೆ ಬರಬೇಕಾದ ೫೦ ರೂಪಾಯಿಗಾಗಿ ಕಾಯುತ್ತಾ ನಿಂತಾಗ, ಗಾಂಧೀಜಿಯವರು 'ಏನೇ ಆದರೂ ನಾನೊಬ್ಬ ಬನಿಯ ಅಲ್ಲವೆ?ತನ್ನ ಕಡೆಗೆ ಬಂದ ಹಣವನ್ನು ಒಬ್ಬ ಬನಿಯಾ ಎಂದೂ ಕಳೆದುಕೊಳ್ಳುವುದಿಲ್ಲ ಅದೊಂದು ದೇಣಿಗೆಯಾದರಂತೂ, ಖಂಡಿತಾ ಅದನ್ನು ಹಿಂದಕ್ಕೆ ಕೊಡುವುದಿಲ್ಲ ' ಎನ್ನುತ್ತಾ ಮುಂದೆ ನಡೆದರು, ನೆರೆದಿದ್ದ ಜನರೆಲ್ಲ ನಗೆಗಡಲಲ್ಲಿ ಮುಳುಗಿದರು, ಆ ಮನುಷ್ಯನೂ ಕೂಡಾ ನಗುತ್ತಾ ಸಂತೋಷದಿಂದ ಹೊರಟು ಹೋದ.

ಈ ಭೇಟಿಯ ಸಂದರ್ಭದಲ್ಲಿ ಗಾಂಧೀಜಿಯವರು ಧೀರೇಂದ್ರ ಭಾಯ್ ಮಜುಮ್ದಾರ್ ಅವರಿಂದ ಅಕ್ಬರ್‌ಪುರ ಎಂಬಲ್ಲಿ (ಇದು ಲೋಹಿಯಾ ಅವರ ಜನ್ಮಸ್ಥಳ) ಪ್ರಾರಂಭಿಸಲ್ಪಟ್ಟ, ದೇಶದಲ್ಲಿನ ಪ್ರಥಮ ಗಾಂಧೀ ಆಶ್ರಮಕ್ಕೆ ಭೇಟಿ ನೀಡಿದರು. ಈ ಸಂದರ್ಭದಲ್ಲೇ ಅವರು ಅತ್ಯಂತ ಪ್ರಖ್ಯಾತ ' ಪಾಪವನ್ನು ದ್ವೇಷಿಸು, ಪಾಪಿಯನ್ನಲ್ಲ' ಎಂಬ ಸಂದೇಶವನ್ನು ನೀಡಿದ್ದು. ಸ್ಲೇಟ್‌ಮನ್ ಎಂಬ ಇಂಗ್ಲಿಷ್ ಪಾದ್ರಿಯ ಮನೆಯಲ್ಲಿ ಉಳಿಯುವ ಮೂಲಕ ಅವರು ತಮ್ಮ ಸಂದೇಶವನ್ನು ಆಚರಣೆಗೆತಂದರು. ಆಶ್ರಮದ ಸಭೆಯಲ್ಲಿ, ನೆರೆದಿದ್ದ ಜನರನ್ನು 'ಸಂಘಟಿತರಾಗಿ, ವಿದೇಶೀ ಬಟ್ಟೆಗಳನ್ನು ಬಹಿಷ್ಕರಿಸಿ, ಚರಕದಿಂದ ನೂಲಿರಿ, ಅಹಿಂಸಾತ್ಮಕ ಪ್ರತಿರೋಧದ ಮೂಲಕ ಜಮೀನ್ದಾರರ ದಮನವನ್ನು ಪ್ರತಿಭಟಿಸಿ, ಪಾನ ನಿಷೇಧದ ವಿಚಾರದಲ್ಲಿ ನಿಷ್ಠೆಯಿಂದಿರಿ, ಸರ್ಕಾರೀ ಶಾಲೆಗಳನ್ನು ಬಹಿಷ್ಕರಿಸಿ' ಎಂದು ಆಗ್ರಹಪಡಿಸಿದರು.

ಅಲ್ಲಿಂದ ಮುಂದೆ ಅವಧ್‌ನ ಬಂಡಾಯಗಾರ ರೈತರು ಹಿಂಸೆಯ ಮಾರ್ಗವನ್ನು ತ್ಯಜಿಸಿದರು. ಅಷ್ಟು ಮಾತ್ರವಲ್ಲದೆ, ದೃಢ ಮನಸ್ಸಿನಿಂದ ಪೋಲೀಸರ ದಬ್ಬಾಳಿಕೆಯನ್ನೂ ಮತ್ತು ಅತಿರೇಕಗಳನ್ನೂ ಎದುರಿಸಿದರು, ತಮಗೆ ಸಮರ್ಥನೆಯಿದೆ ಎಂದುಕೊಂಡು ತನ್ನ ಸೈನ್ಯದ ದಮನಕಾರಿ ಪಡೆಗಳನ್ನು ತಮ್ಮ (ರೈತರ) ವಿರುದ್ಧ ಬಳಸುವುದಕ್ಕೆ ಬ್ರಿಟಿಷರಿಗೆ ನೆಪಗಳು ದೊರೆಯದಂತೆ ಮಾಡಿದರು.

(ಕೃಪೆ: ***ಜನತಾ,*** ೨೫, ಫೆಬ್ರುವರಿ, ೨೦೧೮)

**(ಕನ್ನಡಕ್ಕೆ : ಎಂ. ರಾಜು)**

**ಇತ್ತೀಚೆಗೆ ತಮ್ಮ ಸಾರ್ಥಕ ಜೀವನದ ನೂರು ವರ್ಷಗಳನ್ನು ಪೂರೈಸಿ ಶತಾಯುಷಿಗಳಾಗಿರುವ ಹಿರಿಯ ಗಾಂಧಿವಾದಿ ಹೋರಾಟಗಾರ ಎಚ್.ಎಸ್. ದೊರೆಸ್ವಾಮಿಯವರಿಗೆ 'ಹೊಸ ಮನುಷ್ಯ'ದ ಶುಭ ಹಾರೈಕೆಗಳು-ಸಂ.**









ಕರ್ನಾಟಕ ವಿಧಾನಸಭಾ ಚುನಾವಣೆಗಳು–೨೦೧೮

# ಮತ ಹಾಕುವ ಮುನ್ನ...

ಇನ್ನು ಎಂಟು–ಹತ್ತು ದಿನಗಳಲ್ಲಿ ರಾಜ್ಯದ ಜನತೆ ತನ್ನ ಮುಂದಿನ ಸರ್ಕಾರವನ್ನು ಆಯ್ಕೆ ಮಾಡಿಕೊಳ್ಳಲು ಮತ ಹಾಕಬೇಕಿದೆ. ಯಾರನ್ನು, ಯಾವ ಪಕ್ಷವನ್ನು ಆಯ್ಕೆ ಮಾಡಬೇಕೆಂದು ಯೋಚಿಸಿ ಮತಹಾಕಬಯಸುವವರಿಗೆ ಚಿತ್ರವೀಗ ಸ್ಪಷ್ಟವಾಗಿದೆ. ಆದರೆ ಹಲವರ ಪ್ರಕಾರ ಈ ಚುನಾವಣೆಯಲ್ಲಿ ಯೋಚಿಸಲು ಏನೂ ಉಳಿದಿಲ್ಲ. ಪ್ರಜಾಪ್ರಭುತ್ವದ ಆಧಾರವಾದ ಚುನಾವಣಾ ವ್ಯವಸ್ಥೆಯ ಯಾವ ತತ್ವವನ್ನೂ, ಯಾವ ಪಕ್ಷವೂ, ಅಭ್ಯರ್ಥಿಯೂ ಹೊಲಸು ಮಾಡದೆ ಉಳಿಸಿಲ್ಲ. ಇದನ್ನೇ ಚೆನ್ನಿಯವರು ಮುಂದಿನ ಪ್ರಸ್ತಾವನೆಯಲ್ಲಿ ಇಂದಿನ ಚುನಾವಣಾ ಕಣವನ್ನು 'ಮಲದ ಗುಂಡಿ' ಎಂದು ಕರೆದಿರುವುದು.ಕೋಮುವಾದ, ಜಾತಿವಾದ, ಭ್ರಷ್ಟಾಚಾರ, ಗೂಂಡಾಗಿರಿ,ಕುಟುಂಬ ರಾಜಕಾರಣ ಇವಾವವೂ ಚುನಾವಣಾ ವಿಷಯಗಳಾಗದಂತೆ ಪಕ್ಷಗಳ ನಡುವೆ ಕೊಡು–ಕೊಳುವ ವ್ಯವಹಾರ ನಡೆದು ಮತದಾರನಿಗೆ ದಿಕ್ಕೇ ತೋಚದಂತಾಗಿದೆ. ಕಳೆದ ಚುನಾವಣೆಗಳಲ್ಲಿ ಪ್ರಮುಖ ವಿಷಯವಾಗಿದ್ದ ಗಣಿ ಕೊಳ್ಳೆಯ ಎಲ್ಲ ಫಲಾನುಭವಿ ಕೇಡಿಗಳೂ ಈಗ ಪಕ್ಷಬೇಧವಿಲ್ಲದೆ ಎಲ್ಲ ಪಕ್ಷಗಳಲ್ಲೂ ಸ್ಥಾನ ಗಿಟ್ಟಿಸಿದ್ದಾರೆ. ನಮ್ಮ ಜನಪ್ರಿಯ ಮುಖ್ಯಮಂತ್ರಿಗಳು ತಾವೇ ನೀರೆರೆದು ಬೆಳೆಸಿದ ರಾಜಕಾರಣದ ಬಲೆಗೆ ಸಿಕ್ಕಿಹಾಕಿಕೊಂಡ ಭಯದಲ್ಲಿ ಹೆಚ್ಚುವರಿಯಾಗಿ ದೂರದ ಕ್ಷೇಮಕರ ಕ್ಷೇತ್ರಕ್ಕೆ ದೌಡಾಯಿಸಿದ್ದಾರೆ. ಆದರೆ ಜನ ತಮ್ಮಯೋಗ ಕ್ಷೇಮವನ್ನು ನೋಡಿಕೊಳ್ಳುವ ಭರವಸೆ ನೀಡುವ ಸರ್ಕಾರಕ್ಕೆ ಎಲ್ಲಿಗೆ ದೌಡಾಯಿಸಬೇಕು?

ಈ ಪ್ರಶ್ನೆಯ ಬೆನ್ನು ಹತ್ತಿ ಹೋದ ರಾಜ್ಯದ ವಿವಿಧ ಭಾಗಗಳ, ವಿವಿಧ ಸಾಮಾಜಿಕ ಮತ್ತು ವೃತ್ತಿ ಹಿನ್ನೆಲೆಗಳ ಮತದಾರರು ಇಲ್ಲಿ ತಮ್ಮ ಆಲೋಚನಾ ಲಹರಿಯನ್ನು ದಾಖಲಿಸಿದ್ದಾರೆ. ಇವು ನಿಮಗೂ ಮತ ಹಾಕುವ ಮುನ್ನ ನಿಮ್ಮ ಆಯ್ಕೆ ಪ್ರಕ್ರಿಯೆಗೆ ದಿಕ್ಸೂಚಿಗಳಂತೆ ನೆರವಾಗಬಹುದು. ಮತ್ತೆ ಹೊಸ ಸರ್ಕಾರದ ಅಡಿಯಲ್ಲಿ ಭೇಟಿಯಾಗೋಣ!–ಸಂ.

## ಮಲದ ಗುಂಡಿಯಂತಾಗಿರುವ ರಾಜ್ಯ ವಿಧಾನಸಭಾ ಚುನಾವಣಾ ಕಣ: ಡಾ. ರಾಜೇಂದ್ರ ಚೆನ್ನಿ

**ಭಾ**ರತದಲ್ಲಿ ಸಿದ್ಧಾಂತ, ನೀತಿ ಅಥವಾ ನಿರ್ದಿಷ್ಟವಾದ ಉದ್ದೇಶಗಳ ಆಧಾರದ ಮೇಲೆ ಚುನಾವಣೆಗಳು ನಡೆದು ದಶಕಗಳೇ ಕಳೆದಿವೆ. ನನ್ನ ತಲೆಮಾರಿನವರಿಗೆ ತುರ್ತು ಪರಿಸ್ಥಿತಿಯ ನಂತರ ಇಂದಿರಾಗಾಂಧಿ ಚುನಾವಣೆಯಲ್ಲಿ ಸೋತಿದ್ದು, 'ಇಂಡಿಯಾ ಬೆಳಗುತ್ತಿದೆ' ಎನ್ನುವ ಬಿ.ಜೆ.ಪಿ ಯ ಭರಾಟೆಯ ನಂತರ ಆ ಪಕ್ಷವು ಸೋತಿದ್ದು, ಕರ್ನಾಟಕದಲ್ಲಿ ಕಳೆದ ಚುನಾವಣೆಯಲ್ಲಿ ಆಡಳಿತದಲ್ಲಿದ್ದ ಬಿ.ಜೆ.ಪಿ ಸರಕಾರ ಸೋತಿದ್ದು– ಇಂಥ ವಿದ್ಯಮಾನಗಳಿಂದಾಗಿ ಎಲ್ಲಿಯೋ ನಮ್ಮ ಸಾಮಾನ್ಯ ಮತದಾರನು ತನ್ನ ರಾಜಕೀಯ ವಿವೇಕವನ್ನು ಇಟ್ಟುಕೊಂಡು ಚುನಾವಣೆಯ ಮೂಲಕ ಪವಾಡಗಳನ್ನೇ ಮಾಡುತ್ತಾನೆ ಎನ್ನುವ ನಂಬಿಕೆ ಇದೆ. ಇತ್ತೀಚೆಗೆ ಗುಜರಾತ್ ಹಾಗೂ ಉತ್ತರಪ್ರದೇಶದ ಚುನಾವಣೆಗಳ ಫಲಿತಾಂಶದಲ್ಲಿ ಇದೇ ಭಾವನೆ ಬಂದಿತು.

ಆದರೆ ಇದು ಪ್ರಜಾಪ್ರಭುತ್ವ ಮತ್ತು ಚುನಾವಣಾ ರಾಜಕೀಯದ ಬಗ್ಗೆ ನಮ್ಮ ಭ್ರಮೆಗಳ ಹ್ಯಾಂಗ್ ಓವರ್ ಅನ್ನಲೂ ಬಲವಾದ ಕಾರಣಗಳಿವೆ. ಮುಖ್ಯವಾಗಿ ಅಪಾರವಾದ ಕೋಮು ಹಿಂಸೆ ಹಾಗೂ ಕಗ್ಗೊಲೆಗಳ ಮೂಲಕ ಅಧಿಕಾರಕ್ಕೆ ಬಂದ ಪಕ್ಷ ಮತ್ತು ಅದರ ನೇತಾರನನ್ನು ಒಪ್ಪಿಕೊಂಡ ಪ್ರಜಾಪ್ರಭುತ್ವವು ಅದು ಹೇಗೆ ಪ್ರಜಾಪ್ರಭುತ್ವವಾಗುತ್ತದೆ? ದಲಿತರು, ಮುಸ್ಲಿಮ್ ರ ಮೇಲೆ ದೈಹಿಕ ಆಕ್ರಮಣ, ಸಂವಿಧಾನದ ಎಲ್ಲಾ ಕಟ್ಟಳೆಗಳನ್ನು ಮುರಿಯುವ ಅಟ್ಟಹಾಸ, ಮಹಿಳೆಯರ ಮೇಲೆ ಸಾಮಾಜಿಕ ಜಾಲತಾಣಗಳಲ್ಲಿ ಭಾಷೆಯ ಮೂಲಕವೇ ಅತ್ಯಾಚಾರ ಇವೆಲ್ಲವುಗಳಲ್ಲಿ ಭಾಗಿಯಾಗುವವರು ಆಯ್ಕೆ ಮಾಡುವ ಪಕ್ಷವು ಆಡಳಿತ ಮಾಡುವುದು ಯಾವ ಪ್ರಜಾಪ್ರಭುತ್ವ? ಈ ಪ್ರಶ್ನೆಗಳನ್ನು ನಾವು ಕೇಳಿಕೊಳ್ಳುತ್ತಿಲ್ಲ. ಬಹಳ ಸ್ಪಷ್ಟವಾಗಿ ಹಾಗೂ ಖಚಿತವಾಗಿ ಭಾರತದ ರಾಜಕೀಯ ವ್ಯವಸ್ಥೆಯು ಸರ್ವಾಧಿಕಾರಿಯ ಆಳ್ವಿಕೆಯ ಫ್ಯಾಸಿಸ್ಟ್ ವ್ಯವಸ್ಥೆಯ ಕಡೆಗೆ ಪರಿವರ್ತಿತವಾಗುತ್ತಿದೆ. ಇಂಥ ಸನ್ನಿವೇಷದಲ್ಲಿ ಚುನಾವಣೆಗಳ ಮೂಲಕದ ಹೋರಾಟವು ನನ್ನ ದೃಷ್ಟಿಯಲ್ಲಿ ಒಂದು ಅಂತಿಮ ಹೋರಾಟವಾಗುತ್ತದೆ ಎಂದು ಭಾವಿಸಿದ್ದೆ. ಏಕೆಂದರೆ ನಾವು ಒಂದು ನಿರ್ಣಾಯಕ ಸ್ಥಿತಿಯಲ್ಲಿದ್ದೇವೆ. ಇಲ್ಲಾ ಪ್ರಜಾಪ್ರಭುತ್ವ, ಇಲ್ಲಾ ಸರ್ವಾಧಿಕಾರಿ ಫ್ಯಾಸಿಜಮ್‌ಗಳ ನಡುವಿನ ಆಯ್ಕೆ.

ಆಶ್ಚರ್ಯವೆಂದರೆ ಹೀಗೆಂದು ಯಾವ ರಾಜಕೀಯ ಪಕ್ಷಗಳೂ ಭಾವಿಸಿಲ್ಲ. ನಮ್ಮ ನಾಗರೀಕ ಸಮಾಜವೂ ಭಾವಿಸಿಲ್ಲ. ಕರ್ನಾಟಕದ ಚುನಾವಣೆಗಳ ಮೊದಲ ಹಂತದಲ್ಲಿ ಮೋದಿ ವಿರುದ್ಧ ಸಿದ್ಧರಾಮಯ್ಯ, ಮೋದಿ ವಿರುದ್ಧ ರಾಹುಲ್ ಗಾಂಧಿ ಎನ್ನುವ, ಅದೆಷ್ಟೆ ತೆಳುವಾದರೂ ಸರಿ, ವಾತಾವರಣವಿತ್ತು. ಚುನಾವಣೆಗಳ ಘೋಷಣೆಯಾದ ಮೇಲೆ ರಂಗಮಂಚವು ಬದಲಾಗಿದೆ; ಪಾತ್ರಧಾರಿಗಳು ಬದಲಾಗಿದ್ದಾರೆ. ಏಕೆಂದರೆ ಘೋಷಿಸಲಾದ ಅಭ್ಯರ್ಥಿಗಳು ಎಲ್ಲಾ ಪಕ್ಷದಲ್ಲೂ ಗಣಿ ದರೋಡೆಕೋರರು, ಕ್ರಿಮಿನಲ್‌ಗಳು, ಭ್ರಷ್ಟಾಚಾರಿಗಳು, ಹೆಂಗಸರ ಮೇಲೆ ನೇರವಾಗಿ ಅತ್ಯಾಚಾರ ಮಾಡಿರುವವರು ಅಥವಾ ಕ್ರೂರವಾಗಿ ಪೀಡಿಸಿದವರು, ಕೊಳಕರು ಮತ್ತು ಲೋಫರ್‌ಗಳು. ಸಂವಿಧಾನ, ಪ್ರಜಾಪ್ರಭುತ್ವ ಇದಾವುದೇ ಚರ್ಚೆಯಲ್ಲಿ ಎಂದೂ ನೀವು ಇವರನ್ನು ಕಂಡಿಲ್ಲ. ಇವರು ಗೆಲ್ಲುವ ಕುದುರೆಗಳು ಎನ್ನುವುದಾದರೆ ಕರ್ನಾಟಕದ ಚುನಾವಣೆಗಳು ಒಟ್ಟಾರೆಯಾಗಿ ಒಂದು ಮಲದ ಗುಂಡಿಯ ಹೊರತು ಏನೂ ಅಲ್ಲ. ಗೆಲುವು ಸೋಲಿನ ಸಮೂಹ ಸನ್ನಿಯಲ್ಲಿ ಹೊರಳಾಡುತ್ತಿರುವುದು ಕನ್ನಡ ಸಂಸ್ಕೃತಿಯೇ, ಸಮಾಜವೇ ಎಂದು ಭೀತಿಯೆನ್ನಿಸುತ್ತದೆ.

ಚುನಾವಣಾ ಕಣದಲ್ಲಿ ಓಡಾಡುತ್ತಿರುವ ಹಣದ ಪ್ರಮಾಣವನ್ನು ಅಂದಾಜು ಮಾಡುವ ಕಲ್ಪನಾಶಕ್ತಿಯೂ ನಮ್ಮಲ್ಲಿಲ್ಲ. ಇವೆಲ್ಲವುಗಳ ಕೆಳಗೆ ಅಸ್ಪಷ್ಟವಾದರೂ ಕೆಲವು ಸಾಮೂಹಿಕವಾದ ಅನುಭವವಗಳು, ನಿಲುವುಗಳು ಇದ್ದಂತೆ ತೋರುತ್ತದೆ. ಸಿದ್ದರಾಮಯ್ಯ (ಇತ್ತೀಚಿನ ಪುತ್ರಕಾಂಡದವರೆಗಾದರೂ) ಪ್ರಭಾವೀ ನಾಯಕರಾಗಿದ್ದರು. ಕಡು ಬಡತನ, ಹಸಿವಿನಲ್ಲಿರುವವರಿಗೆ ತುಂಬಾ ಆಂಶಿಕವಾದರೂ ಕೆಲವು 'ಭಾಗ್ಯಗಳು' ತಲುಪಿವೆ. ಯಡ್ಯೂರಪ್ಪನವರನ್ನು ನಾಯಕರನ್ನಾಗಿ ಸ್ವೀಕರಿಸಲು ಜನಸಮುದಾಯ ಸಿದ್ಧವಾಗಿಲ್ಲ. ದಲಿತ ದ್ವೇಷದ ಪ್ರಕರಣಗಳು ಸಮುದಾಯದ ಮನಸ್ಸನ್ನು ಕಲಕಿವೆ. ಸಾಮಾನ್ಯರು, ಕಡಿಮೆ ಶಿಕ್ಷಿತರು, ಅಸಂಘಟಿತ ಕೆಲಸಗಾರರು ಚಿಕ್ಕ ವ್ಯಾಪಾರಿಗಳು ತಮ್ಮ ಅನೇಕ ಬವಣೆಗಳಿಂದಾಗಿ ನಲುಗಿ ಹೋಗಿದ್ದಾರೆ. ಇವರು ಬಿ.ಜೆ.ಪಿ ಯನ್ನು ತಮ್ಮ ಉದ್ಧಾರದ ದಾರಿಯನ್ನಾಗಿ ಕಂಡಿಲ್ಲ. ಜೆ.ಡಿ.ಎಸ್ ತನ್ನ ಸುಪ್ತವಾದ ಜಾತಿವಾದ ಹಾಗೂ ಬಿ.ಜೆ.ಪಿ ಯೊಂದಿಗೆ ಮಾಡಿಕೊಂಡ ಒಳ ಒಪ್ಪಂದಗಳಿಂದಾಗಿ ಒಂದು ಪರ್ಯಾಯ ರಾಜಕೀಯ ಪಕ್ಷವಾಗುವ ಅವಕಾಶವನ್ನು ಕಳೆದುಕೊಂಡಿದೆ. ಈ ಎಲ್ಲ ವಿದ್ಯಮಾನಗಳು ಒಂದು ಸ್ಪಷ್ಟವಾದ ರಾಜಕೀಯ ಆಯ್ಕೆಯನ್ನು ಕಠಿಣಗೊಳಿಸಿವೆ. ಚುನಾವಣೆಗಳು, ಫಲಿತಾಂಶಗಳು, ಜನಸಮುದಾಯಗಳ ಬದುಕು ಬವಣೆಗಳು–ಇವುಗಳ ಮಧ್ಯ ಯಾವುದೇ ಅರ್ಥಪೂರ್ಣವಾದ ಸಂಬಂಧಗಳೇ ಇಲ್ಲದಂಥ ಸ್ಥಿತಿಯ ಕಡೆಗೆ ಹೋಗುತ್ತಿರುವ ಸಾಧ್ಯತೆಗಳೇ ಕರ್ನಾಟಕದಲ್ಲಿ ಹೆಚ್ಚಾಗಿವೆ. ಆದ್ದರಿಂದಲೇ ಮೇ ೧೨ ರ ಚುನಾವಣೆಗಳಲ್ಲಿ ಬರಬಹುದಾದ ಬಹುಮತಕ್ಕೂ ಸ್ಪಷ್ಟವಾದ ರಾಜಕೀಯ ಅರ್ಥವಿರಲಾರದು.




**(ನಿವೃತ್ತ ಇಂಗ್ಲಿಷ್ ಅಧ್ಯಾಪಕರಾದ ರಾಜೇಂದ್ರ ಚೆನ್ನಿಯವರು ನಮ್ಮ ನಡುವಿನ ಸೂಕ್ಷ್ಮ ಮನಸ್ಸಿನ ಸಂಸ್ಕೃತಿ ಮತ್ತು ರಾಜಕೀಯ ಚಿಂತಕರೂ ಹೌದು)**

## ‘ನೋಟಾ’ಕ್ಕೆ ಗುದ್ದುವುದೇ ಮೇಲು!

ಒಂದೂ ದಿನ ನಡೆಯದ ಇತ್ತೀಚಿನ ಸಂಸತ್ತಿನ ಬಜೆಟ್ ಅಧಿವೇಶನ, ಒಣ ಪ್ರತಿಷ್ಠೆಗಳಿಗೆ ನಮ್ಮ ವಿಧಾನಸಭೆ ಕಲಾಪಗಳು ವ್ಯರ್ಥವಾಗುತ್ತ ಬಂದುದನ್ನು ಉದ್ದಕ್ಕೂ ನಾವು ನೋಡುತ್ತ ಬಂದಿದ್ದೇವೆ. ಒಂದು ರೀತಿಯ ಪ್ರಜಾಪ್ರಭುತ್ವದ ಅಣಕು ನಮ್ಮಲ್ಲಿ ಇದೆ. ನೀವು ಯಾವ ಪಕ್ಷದವರಿಗೆ ಮತ ನೀಡಿದರೂ ಕೊನೆಗೆ ಅವರು ಮಾಡುವುದು ಅದನ್ನೇ. ಕರ್ತವ್ಯ ಪ್ರಜ್ಞೆ ಎಂಬುದೇ ಇವರಲ್ಲಿ ಇಲ್ಲ. ನಮ್ಮ ಪ್ರಜಾಪ್ರಭುತ್ವ ನಿಧಾನವಾಗಿ ಸಾಯುತ್ತಿದೆ ಎಂದು ಅನಿಸತೊಡಗಿದೆ.ಇಂಥದ್ದರಲ್ಲಿ ನಾವು ಮತ ಚಲಾಯಿಸುವದು ಏತಕ್ಕೆ, ಪಟ್ಟಭದ್ರ ಹಿತಾಸಕ್ತಿಗಳ ಉದ್ಧಾರಕ್ಕೆ, ವಂಶೋದ್ಧಾರಕ್ಕೆ ಎಂದು ಅನಿಸುವದಿಲ್ಲವೆ? ನಮ್ಮ ‘ಎಲ್ಲ ರಾಜಕೀಯ ಪಕ್ಷಗಳು ಮತದಾರರನ್ನು ಗುತ್ತಿಗೆ ಹಿಡಿದು, ಆಗಲೇ ಆರಿಸಿ ಬಂದು ಗದ್ದುಗೆ ಹಿಡಿದವರಂತೆ ಜಂಭದಿಂದ ಮಾತನಾಡುತ್ತಿದ್ದಾರೆ. ನಯ, ವಿನಯ, ಸೌಜನ್ಯಯುತ ನಡುವಳಿಕೆ, ಪರಸ್ಪರ ಗೌರವ ಭಾವವನ್ನು ಇವರು ಮರೆತಿದ್ದಾರೆ. ಈ ವ್ಯವಸ್ಥೆ ಬದಲಾಯಿಸಲು ಮತ ಚಲಾಯಿಸೋಣ ಅಂದರೆ ಇವರು.ಜನಪರ ಕಾಳಜಿಯುಳ್ಳ ಸಭ್ಯರ ಸ್ಪರ್ಧೆ ಅಪಹಾಸ್ಯಕ್ಕೀಡಾಗುವಷ್ಟು ಚುನಾವಣಾ ಕಣವನ್ನು ಹಾಳು ಮಾಡಿಟ್ಟಿದ್ದಾರೆ



ನಮ್ಮ ‘ಪವಿತ್ರ’ ಮತ ಚಲಾಯಿಸಲು ಅಗ್ರಹ, ಅಭಿಯಾನಗಳೂ ನಡೆಯುತ್ತಿವೆ. ಮತ ಚಲಾಯಿಸಬೇಕು ಸರಿ. ಆದರೆ ಆಯ್ಕೆ ಎಲ್ಲಿದೆ? ಎಲ್ಲ ಪಕ್ಷಗಳನ್ನೂ ನಾವು ನೋಡಿಯಾಗಿದೆ. ಇವರೆಲ್ಲರೂ ಚುನಾಯಿತರಾದ ನಂತರ ತಮ್ಮದೇ ರಾಜಕೀಯ ಸ್ವಾರ್ಥದಲ್ಲಿ ಮುಳುಗಿಹೋಗುತ್ತಾರೆ. ಅಭ್ಯರ್ಥಿಗಳಿರಬಹುದು. ಅಂತಹ ಕಡೆಗಳ ಹೊರತಾಗಿ ತುಂಬ ಕೆಟ್ಟ ಚರಿತ್ರೆಯ ಅಭ್ಯರ್ಥಿಗಳಿಗೆ ಮತ ನೀಡುವ ತಪ್ಪು ಮಾಡದೆ ‘ನೋಟಾ’ಕ್ಕೆ ಗುದ್ದುವುದೇ ಮೇಲು!

**–ವೆಂಕಟೇಶ ಮಾಚಕನೂರ,** ನಿವೃತ್ತ ಕೆಎಎಸ್ ಅಧಿಕಾರಿ ಮತ್ತು ಲೇಖಕ, ಧಾರವಾಡ

## ಕೋಮುವಾದಿಗಳು ಅಧಿಕಾರಕ್ಕೆ ಬರದಂತೆ ತಡೆಯಬೇಕಿದೆ

ಹತ್ತು ವರ್ಷಗಳ ಯುಪಿಎ ದುರಾಡಳಿತದಿಂದ ಬೇಸತ್ತು ಬದಲಾವಣೆಗಾಗಿ ಹಂಬಲಿಸುತ್ತಿದ್ದ ದೊಡ್ಡ ಯುವಸಮುದಾಯ ಬೆಂಬಲದೊಂದಿಗೆ ಅಧಿಕಾರಕ್ಕೆ ಬಂದ ನರೇಂದ್ರ ಮೋದಿಯವರು ಚುನಾವಣೆಗೆ ಮುಂಚೆ ನೀಡಿದ್ದ ಕಪ್ಪು ಹಣ ವಾಪಸಾತಿ, ಕೋಟಿಗಟ್ಟಲೆ ಉದ್ಯೋಗ ಸೃಷ್ಟಿ, ಕಾಶ್ಮೀರ ವಿವಾದ ಪರಿಹಾರ ಇತ್ಯಾದಿ ಎಲ್ಲ ಭರವಸೆಗಳನ್ನು ಈಡೇರಿಸುವಲ್ಲಿ ವಿಫಲವಾಗಿದ್ದಾರೆ. ಈ ಪಕ್ಷ ಈಗ ವಿರೋಧ ಪಕ್ಷಗಳನ್ನು ನಿರ್ನಾಮ ಮಾಡುವುದನ್ನೇ ಉದ್ಯೋಗ ಮಾಡಿಕೊಂಡಿದೆ. ಬಿ.ಜೆ.ಪಿ ಅಧಿಕಾರದ ರಾಜ್ಯಗಳಲ್ಲಿ ಗೋರಕ್ಷಣೆಯ ಹೆಸರಿನಲ್ಲಿ ದಲಿತ ಮತ್ತು ಅಲ್ಪಸಂಖ್ಯಾತರ ಮೇಲೆ ನಡೆಯುತ್ತಿರುವ ಹಲ್ಲೆಗಳು ಮತ್ತು ಹತ್ಯೆಗಳು ಅಭಿವೃದ್ಧಿಯ ಮಾತನ್ನು ಹಿಂದೆ ಸರಿಸಿ ಹಿಂದುತ್ವದ ಅಜೆಂಡಾವನ್ನು ಮುಂದೆ ತರುತ್ತಿವೆ.

ಕರ್ನಾಟಕದಲ್ಲಿ ಕಳೆದ ಐದು ವರ್ಷಗಳು ಆಡಳಿತ ನಡೆಸಿದ ಸಿದ್ಧರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರವು ರಾಜ್ಯದ ಅಮೂಲಾಗ್ರ ಬದಲಾವಣೆಯಾಗುವಂತಹ ಯಾವುದೇ ಯೋಜನೆಗಳನ್ನು ಜಾರಿ ಮಾಡದಿದ್ದರೂ ಕೆಲವು ಜನಪ್ರಿಯ ಯೋಜನೆಗಳ ಮೂಲಕ ತಾವು ಸಾಮಾಜಿಕ ನ್ಯಾಯದ’ ಪರ ಇದ್ದೇವೆ ಎನ್ನುವ ರೀತಿಯ ಮಾತನ್ನಾದರೂ ಆಡಿದ್ದಾರೆ. ಹಾಗೂ ಸಿದ್ಧರಾಮಯ್ಯ ಹೈಕಮಾಂಡ್ ಸಂಸ್ಕೃತಿಯಿಂದ ಸ್ವಲ್ಪ ಬಿಡಿಸಿಕೊಂಡು ಸ್ವತಂತ್ರ ಮತ್ತು ಸಮರ್ಥ ನಾಯಕರಂತೆ ಕಾಣಿಸುತ್ತಿದ್ದಾರೆ. ಇನ್ನು ಜೆ.ಡಿ.ಎಸ್ ತನ್ನ ಕುಟುಂಬ ರಾಜಕಾರಣ ಮತ್ತು ಅಧಿಕಾರಕ್ಕಾಗಿ ಸೈದ್ಧಾಂತಿಕ ಬದ್ಧತೆಯನ್ನು ಬದಿಗೊತ್ತಿ ಬಿ.ಜೆ.ಪಿಯ ಜೊತೆ ಹೋಗಬಹುದೆನ್ನುವ ಆತಂಕವಿದೆ. ಹಾಗಾಗಿ ಈ ಚುನಾವಣೆಯಲ್ಲಿ ಕೋಮುವಾದಿ ರಾಜಕಾರಣ ಮಾಡುವವರು ಅಧಿಕಾರಕ್ಕೆ ಬರುವುದನ್ನು ತಡೆಯಲು ಜಾತ್ಯಾತೀತ ನಿಲುವುಳ್ಳ ಪಕ್ಷದ ಸರ್ಕಾರ ಅಧಿಕಾರಕ್ಕೆ ಬರುವಂತೆ ಮತ ಚಲಾಯಿಸುವುದು ಅನಿವಾರ್ಯವಾಗಿದೆ.



**–ಎ.ಎಲ್ ನರಸಿಂಹಮೂರ್ತಿ,** ಸಂಶೋಧನ ವಿದ್ಯಾರ್ಥಿ, ಇಂಗ್ಲಿಷ್ ವಿಭಾಗ ಬೆಂಗಳೂರು ವಿಶ್ವವಿದ್ಯಾಲಯ

## ಮತ ಸ್ವಗತ

ಇವನೆ! ಇವಂಗೆ ವೋಟೆ?  
ಈ ಶುದ್ಧ ಘಟಿಂಗನಿಗೆ?  
‘ಅಂತಿದ್ದರೆ ಇವನಿಗೆ?’  
ಇಲ್ಲ ಇಲ್ಲ. ಈತ ಅವನ ಅಪ್ಪಲ್,  
ಮತ್ತಿವನೆ! ಶುದ್ಧ ಶುಂಠ, ಎಲ್ಲ ಬಿಟ್ಟು!  
ಆತನೆ? ಹೆಸರೆತ್ತಬೇಡ, ಹೆಣ್ಣನ್ನು ಹೆಣ ಮಾಡುವನಾತ,  
ರಕ್ಕಸರಲ್ಲಿ ರಕ್ಕಸ, ತಿಳಿಯದೆ?  
ಯಾವ ಬಾಯಲ್ಲಿ ಶಿಫಾರಸು ಮಾಡುವೆ? ಆ ಬಾಯಿ ಬಿದ್ದು ಹೋಗ!  
ಏನು, ಏನೆಂದೆ?  
ಹೆಣ್ಣುಬಾಕಗಳನ್ನು ಕಂಡಕಂಡಲ್ಲಿ ಸಂಹರಿಸದವ ಈತ,  
ದೇವರೆ? ಅದೂ ‘ಸಾಕ್ಷಾತ್ ದೇವರೆ’?!  
ಏನಾಗಿದೆ ನಿಂಗೆ? ಎಲ್ಲೂ ಇಲ್ಲದವನನ್ನು ಪಟ್ಟಿಯಲಿ ತೂರಿಸುವಿಯಲ್ಲ,  
ಕರ್ಮವೇ!  
‘ಹೋಗಲಿ ಬಿಡು, ಇವಳು?’  
ಇವಳು ಇವಳಲ್ಲ ಅವನು  
‘ಅವನು?’  
ಅವನು ಅವನಲ್ಲ ‘ಅವರು’  
‘ಇವನು?’  
ಅಯ್ಯೊ, ಮತಭೇದ ಮೊಟ್ಟೆ! ಇವಂಗೆ ಮತವೆ!  
ಕೇಳಿಸಿಕೋ, ನನ್ನ ಹಕ್ಕನ್ನು ಹರಾಜು ಹಾಕಲಾರೆ  
ಮೋಸಗೆಡವಲಾರೆ.

*****

ಮಗೂ, ಸಾವಧಾನ ಸಾವಧಾನ  
ಆವೇಶಿಯಾಗದಿರು, ನಿರಾಶಿಯಾಗದಿರು  
ಮನದ ತಕ್ಕಡಿ ಎತ್ತಿಕೋ  
ತೂಕದ ಗುಂಡಾಗಿ ಆತ್ಮಸಾಕ್ಷಿಯನ್ನಿರಿಸು  
ಯಾರು ಕಡಿಮೆ ಅಪಾಯ, ತೂಗು  
ಅವರಿಗೆ ವೋಟು ಹಾಕು, ಅವರ ಪಕ್ಷವೂ ಕಡಿಮೆ ಅಪಾಯವೆ.  
(ಹಾಗೆಂತ ಹಾರೈಸು.)  
ಹಕ್ಕನ್ನು ಹರಾಜು ಹಾಕುವುದಲ್ಲ, ಮಗೂ  
ವ್ಯರ್ಥ ಮಾಡದಿರುವುದು  
ಒಮ್ಮೆ ವೋಟು ಮಾಡು. ಆ ಮೇಲೆ, ಏನೋ,  
ನೋಡಿಕೊಳ್ಳೋಣ ಯಥಾನುಶಕ್ತಿ  
‘ಪ್ರಜಾಪ್ರಭುತ್ವ ವಿಧಿ’ ನಿಯಮವಿದು, ಬೇರೆ ವಿಧಿಯಿಲ್ಲ,  
ಬೇರೆ ವಿಧಿಗಳಲಿ ಪ್ರಜೆಗೆ ತೂಗುವ ಸ್ವಾತಂತ್ರ್ಯವೂ ಇಲ್ಲ  
ಮರೆಯದಿರು, ಹೊರಡು,  
ನಿನ್ನ ವೋಟು ಯಾರಿಗೆ?  
‘ಯಾರಿಗೆ? ಯಾರಿಗೆ? ಅಯ್ಯೊ,  
ಕೊನೇಪಕ್ಷ ಹೆಣ್ಣನ್ನು ಹರಿದು ತಿಂದರೂ ಮಾತಾಡದ ಪಕ್ಷಗಳಿಗಂತೂ  
ಸತ್ತರೂ ಇಲ್ಲ.’  
‘ಭ್ರಮಿಯೇ!! ಶೋಕಿತರ ಶೋಷಿತರ ಕೇಂಬ ಕಾಂಬುವ ಮಿಡಿವ  
ಮುಡಿಪಿಡುವ  
ಕೊಲೆಯರಿಯದ ಕಲೆಯಿಲ್ಲದ ಕೇಡಿಲ್ಲದ ಸೇಡಿಲ್ಲದ  
ಪಕ್ಷಗಳ ಮನೆಯಿಂದ ಸಾಸಿವೆಯ ತಾ’  
ಹಾ ಶಿವನೆ! ಹೊರಟೆ ಮತ ಹಾಕುವೆ  
ಇದ್ದವರಲಿ ಮನಗೆದ್ದ ಕಾರ್ಯವಂತಗೆ ಮತ್ತು  
ಕಾರುಣಿಕಗೆ.



(ಕ್ಷಮಿಸಿ, ಇದು ಪದ್ಯವಲ್ಲ)

**–ವೈದೇಹಿ,** ಹಿರಿಯ ಲೇಖಕಿ ಮತ್ತು ಗೃಹಿಣಿ, ಮಣಿಪಾಲ

### ನಾಳೆಗಳ ಆಸೆಯ ಮೇಲೆ ಅನಿವಾರ್ಯ ಆಯ್ಕೆ

**ಒ**ಬ್ಬ ರಾಜ್ಯಶಾಸ್ತ್ರದ ವಿದ್ಯಾರ್ಥಿಯಾದ ನನಗೆ ಇತ್ತೀಚಿನ ದಿನಗಳಲ್ಲಿ ಮತ ಹಾಕುವ ಸಂದರ್ಭ ಬಂದಾಗ ವೈಯಕ್ತಿಕವಾಗಿ ಅದೊಂದು ಗೊಂದಲದ; ಆದರೆ ಸಾಮುದಾಯಿಕ ನೆಲೆಯಲ್ಲಿ ಬಹು ಸೂಕ್ಷ್ಮ ಜವಾಬ್ದಾರಿಯುತ ಸವಾಲಾಗಿ ನಿಲ್ಲುತ್ತದೆ.ನಾನು ವೈಯಕ್ತಿಕ ಮತ್ತು ಸಾಮುದಾಯಿಕವಾಗಿ ನಂಬಿಕೊಂಡು ಬಂದ ಬದುಕು ಮತ್ತು ಮೌಲ್ಯಗಳಿಗೆ ಪೂರಕವಾದ ಆಯ್ಕೆ ಸುಲಭವಾಗಿದ್ದಾಗ ಸಮಾಧಾನಕರ ನಿಟ್ಟುಸಿರು ಬಿಡಬಹುದು. ಇಲ್ಲವಾದರೆ ಅದೊಂದು ದೊಡ್ಡ ಸಂದಿಗ್ಧ ಪರಿಸ್ಥಿತಿ.

ಪ್ರಸ್ತುತ ರಾಜಕೀಯ ಪರಿಸರದ ಹೊಸ ವಾಸ್ತವಿಕತೆಗಳಿಗೆ ನನಗೆ ಹೊಂದಿಕೊಳ್ಳಲು ಆಗುತ್ತಿಲ್ಲ ಎಂಬ ಅರಿವಾಗಿ ಸಿನಿಕತೆ ಆವರಿಸುತ್ತಿದೆ. ದೇಶ, ಪಕ್ಷ, ವ್ಯಕ್ತಿ, ಪ್ರಾಂತ್ಯ, ಜಾತಿ, ಅಭಿವೃದ್ಧಿ ಕುರಿತ ಮಾತುಗಳೆಲ್ಲ ಹುಸಿಯಾಗಿ ಅವನ್ನು ಆಧಾರಿಸಿ ಮತ ಹಾಕುವುದು ಈಗ ಮೂರ್ಖತನವೆನ್ನಿಸೀತು. ಯಾರಿಗಾದರೂ ಓಟು ಏಕೆ? ಎಂದು ನೋಟಾ ಒತ್ತಿದರೆ ಆಗುವ ಪ್ರಯೋಜನವೇನು? ಇನ್ನು ಮತ ಹಾಕದೇ ಇದ್ದರೆ ಒಂದು ರೀತಿಯ ನಾಗರಿಕ ಅಪರಾಧಿ ಭಾವ ಆವರಿಸಿಕೊಂಡು ಬಿಡುತ್ತದೆ. ಒಂದು ಸಮುದಾಯದ ಬಹುಪಾಲು ಭಾಗವಾಗದೆ ಉಳಿದೆನಲ್ಲ ಎಂಬ ಅಳುಕು. ಮತ್ತೆ ವಿಚಾರ ಮಾಡಿದರೆ ಯಾರು ಈ ಬಹುಪಾಲು ಜನ? ಮತ್ತೆ ಗೊಂದಲ.ನಮ್ಮ ಪ್ರಜಾಪ್ರಭುತ್ವ ತನ್ನ ಗುಣ ಮಟ್ಟ ಹಾಗೂ ಘನತೆಯನ್ನು ಕಳೆದುಕೊಳ್ಳುತ್ತಿರುವುದು ನಮ್ಮ ಕಾಲದ ದುರಂತ. ದಿಕ್ಕು ದೆಸೆಗಳಿಲ್ಲದ ದೇಶ ವ್ಯವಸ್ಥೆ, ಬದ್ಧತೆಗಳಿಲ್ಲದ ರಾಜಕಾರಣಿಗಳು, ನಿಷ್ಠೆಯಿಲ್ಲದ ಮತದಾರ ಇವೆಲ್ಲದರ ಮಧ್ಯೆ ನಾಳೆಗಳ ಆಸೆ ಇಟ್ಟುಕೊಂಡು ಅದರ ಆಧಾರದ ಮೇಲೆ ಒಂದು ಅನಿವಾರ್ಯ ಆಯ್ಕೆ ಮಾಡಿಕೊಳ್ಳಬೇಕಿದೆ.



**– ಎಂ.ಬಿ. ಪಾಟೀಲ,** ನಿವೃತ್ತ ದೂರದರ್ಶನ ಕೇಂದ್ರ ನಿರ್ದೇಶಕರು ಮತ್ತು ರೈತರು, ಗುಲ್ಬರ್ಗ

### ಸೋಲನ್ನು ಗೆಲುವೆಂದು ಸಂಭ್ರಮಿಸಬೇಕಾಗಿದೆ....

**ಈ** ಸಲ ಕರ್ನಾಟಕದ ವಿಧಾನಸಭಾ ಚುನಾವಣೆಯಲ್ಲಿ ನಮ್ಮೆದುರು ಪ್ರಧಾನವಾಗಿ ಮೂರು ಪಕ್ಷಗಳಿವೆ. ಇದರಲ್ಲಿ ದೇವೇಗೌಡರ ಮನೆಯ ಪಕ್ಷ ಜೆಡಿಎಸ್ 'ದೇವರ ದಯೆ' ಯಿಂದ ಒಂದಷ್ಟು ಸ್ಥಾನ ಗಿಟ್ಟಿಸಿದರೆ ಬಿಜೆಪಿ ಜೊತೆ ಸೇರಿ ಅಧಿಕಾರ ಗದ್ದುಗೆಗೇರುವ ಕನಸು ಕಾಣುತ್ತಿದೆ. ಇಡೀ ಕುಟುಂಬ ಹಗಲಿರುಳೂ ಶ್ರಮಿಸುತ್ತಿದೆ.

ಇನ್ನು ಇತಿಹಾಸ ಮತ್ತು ಪುರಾಣಗಳಿಗೆ ವ್ಯತ್ಯಾಸ ಗೊತ್ತಿಲ್ಲದ, ಸಾಮಾಜಿಕ ಸ್ವಾಸ್ಥ್ಯವೆಂಬುದು ಸಮಾಜದ ಸಮಸ್ತರ ಸ್ವಾಸ್ಥ್ಯವೆಂಬ ಪ್ರಾಥಮಿಕ ಜ್ಞಾನವಿಲ್ಲದ ಬಿಜೆಪಿ ಬಗ್ಗೆ ಏನು ಹೇಳುವುದು? ಇವರ ಸುಳ್ಳುಗಾರಿಕೆ, ಸತ್ಯ–ಇತಿಹಾಸವನ್ನು ತಿರುಚುವ ಪರಿ, ಯಾವ ಮಹಾಯುದ್ಧಗಳೂ ನಾಚಿಕೊಳ್ಳುವಂತೆ ಇವರ ಚೇಲಾಗಳು ಹೆಣ್ಣುಮಕ್ಕಳ ಮೇಲೆ ಎಸಗುವ ಕ್ರೌರ್ಯ, ಭಾರತದ ಬಹುಸಂಸ್ಕೃತಿಯನ್ನು ಏಕಸಂಸ್ಕೃತಿಗೆ ಇಳಿಸುವ ಪರಿ, ಸಂವಿಧಾನದ ಬಗ್ಗೆ– ಮೀಸಲಾತಿಯ ಬಗ್ಗೆ ಇವರ ಮಾತುಗಳು ಆಘಾತಕಾರಿಯಾಗಿವೆ.

ಇವೆಂಥ ನತದೃಷ್ಟ ಸಂದರ್ಭವೆಂದರೆ ನಾವೀಗ ನೆಪಗಳನ್ನು ಹುಡುಕಿ 'ಕಾಂಗ್ರೆಸ್‌ಗೆ ಜೈ' ಎನ್ನಬೇಕಾಗಿದೆ. ಏಕೆಂದರೆ ಇದೇನೂ ಸತ್ಯವಂತರ, ಸಜ್ಜನರ, ಪ್ರಾಮಾಣಿಕರ, ಜಾತ್ಯಾತೀತರ ಪಕ್ಷವಲ್ಲ. ಅನೇಕ ತಿಮಿಂಗಿಲಗಳು ಇಲ್ಲಿಯೂ ಇವೆ. ಕಾಂಗ್ರೆಸ್ ಪಕ್ಷ ನಮ್ಮ ಈ ಅಭಿಪ್ರಾಯವನ್ನು ಸುಳ್ಳು ಮಾಡಿದರೆ ನಾವು ಧನ್ಯ, ದೇಶ ಧನ್ಯ.



**–ಡಾ.. ಮಿರ್ಜಾ ಬಷೀರ್,** ನಿವೃತ್ತ ಪಶು ವೈದ್ಯಾಧಿಕಾರಿಗಳು ಮತ್ತು ಲೇಖಕರು, ತುಮಕೂರು

### ವಿಚಿತ್ರ ಸಂದಿಗ್ಧ ಪರಿಸ್ಥಿತಿ...

**ಇ**ಂದು ರಾಜಕೀಯ ಪಕ್ಷಗಳ ಷಡ್ಯಂತ್ರಗಳು, ನೇತಾರರ ಸಾಧನಾ ಸಮಾವೇಶದ ಮಾತುಗಳನ್ನು ನೆನೆಸಿದಾಗ ಅನಿವಾರ್ಯವಾಗಿ ನನ್ನ ಬಾಲ್ಯ, ಹರೆಯದ ದಿನಗಳ ರಾಜಕೀಯ ವಾತಾವರಣ, ರಾಜಕಾರಣಿಗಳು ಎಲ್ಲರೂ ನೆನಪಿಗೆ ಬರುತ್ತಿದಾರೆ. ಆಗಿನ್ನು ಸ್ವಾತಂತ್ರ್ಯ ಗಳಿಸಿ ಹಲವು ವರ್ಷಗಳಾಗಿತ್ತು. ಅದೊಂದು ಬದಲಾವಣೆಯ ಗಾಳಿಯ ಮುನ್ಸೂಚನೆಯಾಗಿತ್ತು..ನಮ್ಮೂರಿನಲ್ಲಿ ಸಾಮಾನ್ಯರಲ್ಲಿ ಸಾಮಾನ್ಯರೇ ನಮ್ಮ ಪುರಸಭಾ ಸದಸ್ಯರಾಗಿದ್ದುದನ್ನು ನಾನು ಕಣ್ಣಾರೆ ಕಂಡಿದ್ದೇನೆ.. ಚಿಕ್ಕಮಗಳೂರಿನ ಶಾಸಕಿ ಬಿ.ಎಲ್.ಸುಬ್ಬಮ್ಮನವರೂ, ನಾವು ಆಗಾಗ್ಗೆ ಬೆಂಗಳೂರಿನಲ್ಲಿ ಒಂದೇ ಹೋಟೆಲ್‌ನಲ್ಲಿ ಉಳಿಯುತ್ತಿದ್ದೆವು. ಸಾದಾ ಖಾದಿ ಸೀರೆ ಉಡುಪಿನ ಸುಬ್ಬಮ್ಮನವರು ಎಷ್ಟೋ ವೇಳೆ ಬಾತ್‌ರೂಂ ಇಲ್ಲದ ರೂಮಿನಲ್ಲಿ ಉಳಿದು ಸಾರ್ವತ್ರಿಕ ಬಾತ್‌ರೂಂನ್ನೇ ಬಳಸುತ್ತಿದ್ದರು.. ಕಾರು, ಹಿಂಬಾಲಕರು ಇರಲೇ ಇಲ್ಲ. ಅಂದು ವಿರೋಧ ಪಕ್ಷದ ನಾಯಕರಾಗಿದ್ದ ಹಾಸನ ಜಿಲ್ಲೆಯ ಕಾಂತರಾಜಪುರದ ಶಿವಪ್ಪನವರು ತಮ್ಮ ಊರಿನಿಂದ ಹಾಸನಕ್ಕೆ ಬಸ್ಸಿನಲ್ಲೇ ಹೋಗಿ ಬಂದು ಮಾಡುತ್ತಿದ್ದರು. ಇನ್ನು ನಮ್ಮ ಶಾಂತವೇರಿ ಗೋಪಾಲಗೌಡರ ಚುನಾವಣೆ ಮತ್ತು ಬದುಕಿನ ಸರಳತೆಯ ಬಗ್ಗೆ, ವಿಧಾನಸಭೆಯಲ್ಲಿನ ಅವರ ದಿಟ್ಟ ಜನಪರ ಕಾಳಜಿಗಳ ಅಭಿವ್ಯಕ್ತಿಯ ಬಗ್ಗೆ ಹೇಳುವಂತೆಯೇ ಇಲ್ಲ.

ಅಂದಿನ ಮತ್ತೊಂದು ವೈಶಿಷ್ಟ್ಯವೆಂದರೆ ಇಂತಹ ನಿಸ್ಪೃಹ ವ್ಯಕ್ತಿಗಳನ್ನು ಇಷ್ಟಪಡುತ್ತಿದ್ದ ಅಂದಿನ ಜನರು ಆ ವ್ಯಕ್ತಿಗಾಗಿ ತಾವೇ ದುಡ್ಡು ಹಾಕಿ ಅಭ್ಯರ್ಥಿಯ ಪ್ರಚಾರ ಓಡಾಟದ ಖರ್ಚನ್ನು ನಿಭಾಯಿಸುತ್ತಿದ್ದರು. ಆದರೆ ಇಂದು?

ಈ ಸಲದ ಚುನಾವಣೆಗಾಗಿ ಎಲ್ಲ ಪಕ್ಷಗಳ ಪ್ರಚಾರದ ಅಬ್ಬರ, ದುಂದು ವೆಚ್ಚ, ಪರಸ್ಪರ ಟೀಕೆ, ಆಗಾಗ್ಗೆ ಸ್ಫೋಟಗೊಳ್ಳುವ ಹಗರಣಗಳು ಇವನ್ನೆಲ್ಲಾ ನೋಡಿದರೆ ಇವರಿಗೂ ಮಾಡಬೇಕಾದ ಕೆಲಸಗಳಿಗೂ ಅಜಗಜಾಂತರ. ಜಾತ್ಯಾತೀತ ರಾಷ್ಟ್ರ ನಮ್ಮದೆಂದು ಹೇಳಿದರೂ ಎಲ್ಲಕ್ಕೂ ಜಾತಿಯೇ ನಿರ್ಣಾಯಕ, ಜನಹಿತ ಎನ್ನುವುದು ನಾಲಗೆ ತುದಿಯ ಮಾತಾಗೂ ಉಳಿದಿಲ್ಲ. ಇವೆಲ್ಲಾ ನಮ್ಮನ್ನು ಎಲ್ಲಿಗೆ ಒಯ್ಯುತ್ತದೆ, ನಮ್ಮ ಮಾತನ್ನು ಕೇಳುವವರಾರು? ಹಾಗಾಗಿ ಈ ಬಾರಿ ಮತ ಹಾಕಬೇಕೋ ಬೇಡವೋ, ಹಾಕುವುದಾದರೆ ಅದಕ್ಕೆ ಅರ್ಹರಾದವರು ಯಾರೂ ಕಾಣದೆ ವಿಚಿತ್ರ ಸಂದಿಗ್ಧದಲ್ಲಿದ್ದೇನೆ ಆದರೆ ನಮ್ಮ ಸ್ನೇಹ ಬಳಗ ಪೂರಾ ಹತಾಶವಾಗಿಲ್ಲ. ನಮ್ಮ ಆಶಯಗಳು, ಎಲ್ಲೋ ಒಂದು ಮೂಲೆಯಲ್ಲಿ ನೆಲಕ್ಕೆ ಬಿದ್ದು ಮೊಳಕೆ ಒಡೆಯುತ್ತದೆ ಎಂಬ ಆಸೆಯ ಕಿಡಿ ಜೀವಂತವಾಗಿ ಇದ್ದೇ ಇದೆ.



**–ಪದ್ಮಾ ಶ್ರೀರಾಮ್,** ಲೇಖಕಿ ಮತ್ತು ಗೃಹಿಣಿ, ಮೈಸೂರು

### ಜೆ.ಡಿ.ಎಸ್ ಗೆ ಇನ್ನೊಂದು ಅವಕಾಶ ನೀಡಬಹುದೇನೋ...

**ಚು**ನಾವಣೆಗಳನ್ನು ಜನತಂತ್ರದ ಹಬ್ಬವೆಂದು ಕರೆಯಲಾಗುತ್ತದೆ. ನನಗಂತೂ ಇದು ಈಗ ಜೂಜು – ಮೋಜು–ಮಸ್ತಿಗಳ ಕರಾಳ ರೂಪದಂತೆ ಭಾಸವಾಗುತ್ತಿದೆ. ಮೊದಲ ಬಾರಿಗೆ ಎಂಬಂತೆ ಈ ಸಲ ನಿರಾಸಕ್ತಿ ಉಂಟಾಗಿದೆ. ಕಾರಣ ಯಾವ ರಾಜಕೀಯ ಪಕ್ಷಗಳ ಬಗೆಗೂ ಭರವಸೆಯೇ ಉಳಿದಿಲ್ಲ. ಸಿದ್ದರಾಮಯ್ಯ ಸರ್ಕಾರ ಬಡವರ ಪರ, ಹಿಂದುಳಿದವರ ಪರವೇನೋ ಹೌದು. ಆದರೆ ಇದೇ ಸರಕಾರ ಜಾತಿ ರಾಜಕಾರಣವನ್ನು ಇನ್ನಿಲ್ಲದಂತೆ ಮುನ್ನಲೆಗೆ ತಂದಿತು. ಜಾತಿಗಳನ್ನು ಎತ್ತಿಕಟ್ಟುವ ಮೂಲಕ ಅವುಗಳನ್ನು ತನ್ನ ಮತಬ್ಯಾಂಕ್‌ಗಳನ್ನಾಗಿಸಿಕೊಂಡಿತು. ಬಿಜೆಪಿ ಮಾಡಿದ್ದನ್ನೇ ಇದು ಇನ್ನೊಂದು ರೀತಿಯಲ್ಲಿ ಮಾಡಿತಷ್ಟೆ. ಹಿಂದುಳಿದವರ ಬಗ್ಗೆ ನಿಜವಾದ ಕಳಕಳಿ ಇದ್ದಲ್ಲಿ ನ್ಯಾ. ಸದಾಶಿವ ಆಯೋಗದ ವರದಿಯನ್ನು ಜಾರಿಗೆ ತರಬೇಕಿತ್ತು. ಬದಲಾಗಿ ಅಗತ್ಯವೇ ಇಲ್ಲದ ಲಿಂಗಾಯತ ಧರ್ಮದ ಮಾನ್ಯತೆಗಾಗಿ ತುದಿಗಾಲಿನಲ್ಲಿ ನಿಂತು ಕೆಲಸ ಮಾಡಿತು.

ಇನ್ನು ಯಡಿಯೂರಪ್ಪನವರಿಗೆ ಮತ ಹಾಕುವುದೆಂದರೆ ಕೋಮುವಾದ, ಭ್ರಷ್ಟಚಾರ ಎರಡನ್ನೂ ಒಪ್ಪಿಕೊಂಡಂತೆ. ಆದರೆ ಯಡಿಯೂರಪ್ಪನವರ ಜೈಲು ವಾಸದ ಬಗ್ಗೆ ಮಾತಾಡುವ ಸಿದ್ದರಾಮಯ್ಯ ಅದಕ್ಕೆ ಕಾರಣವಾದ ಲೋಕಾಯುಕ್ತ ಸಂಸ್ಥೆಯನ್ನೇ ಹಾಳುಗೆಡಹಿದ್ದು ನಿಜವಾಗಿಯೂ ವಿಪರ್ಯಾಸಕರ.

ಕಾಂಗ್ರೆಸ್ ಮತ್ತು ಬಿಜೆಪಿಗಳಿಗೆ ಪರ್ಯಾಯವಾಗಬಹುದಾಗಿದ್ದ ಆಮ್ ಆದ್ಮಿ ಪಕ್ಷ ಮತ್ತು ಸ್ವರಾಜ್ ಇಂಡಿಯಾ ಇನ್ನೂ ರಾಜ್ಯದಲ್ಲಿ ಸರಿಯಾಗಿ ಬೇರೂರಿಲ್ಲ. ಮುಂದೆ ಇವೇ ನಮ್ಮ ಭರವಸೆಯ ಬೆಳಕುಗಳಾಗಬಹುದೇನೋ! ಆದರೆ ಸದ್ಯಕ್ಕೆ ಕರ್ನಾಟಕದಲ್ಲಿ ನಿಜವಾಗಿಯೂ ಮೂರನೇ ಸಾಧ್ಯತೆಯಾಗಿರುವ ಜೆ.ಡಿ.ಎಸ್ ಒಂದೊಮ್ಮೆ ರಾಜ್ಯಾದಂತ ಗೆಲುವು ಸಾಧಿಸಿದರೆ ಅದರೊಳಗೆ ಆಂತರಿಕ ಪ್ರಜಾಪ್ರಭುತ್ವ ಬೆಳೆಯುವ ಸಾಧ್ಯತೆಗಳಿವೆ. ಈಗಿನ ನಿರಾಶಾದಾಯಕ ಸಂದರ್ಭದಲ್ಲಿ ಜೆ.ಡಿ.ಎಸ್ ಗೆ ಇನ್ನೊಂದು ಅವಕಾಶ ನೀಡಬಹುದೇನೋ...



**–ಎನ್.ಎಮ್ ಕುಲಕರ್ಣಿ,** ಕೈಮಗ್ಗ ವಸ್ತ್ರ ಉತ್ಪಾದಕರು ಮತ್ತು ಮಾರಾಟಗಾರರು, ಹೆಗ್ಗೋಡು



ಯುವ ಲಹರಿ

ಸಮಕಾಲೀನ ಯುವಜನತೆಯ ಒಳ ತಲ್ಲಣಗಳ ಒಂದು ಅಭಿವ್ಯಕ್ತಿ

# ನಿಂತು ಬಿಡಲೆ; ಹೆಜ್ಜೆ ಇಡಲೇ...

–ರಾಜೇಂದ್ರ ಬಡಿಗೇರ್

ಎರಡು ಕಾಲು ಇಡುವಷ್ಟು ಜಾಗವಿದೆ. ಕೂರುವ ಹಾಗೆಯೇ ಇಲ್ಲ. ಕಣ್ಣು, ಬಾಯಿ, ಕಿವಿಗಳ ಮೇಲೆ ಕೈ ಇಟ್ಟುಕೊಂಡು ನಾನು ನಿಂತುಬಿಟ್ಟಿದ್ದೇನೆ. ಒಮ್ಮೆ ಬಿಸಿಲು ಸುಡುತ್ತದೆ, ಮಳೆ ಸುರಿಯುತ್ತದೆ. ಮತ್ತೊಮ್ಮೆ ಗಾಳಿ ದೂಡುತ್ತದೆ, ಚಳಿ ಕೊರೆಯುತ್ತದೆ. ನನ್ನ ದೇಹ ಕಲ್ಲಿನ ಬಂಡೆಯೋ ಏನೊ ಗೊತ್ತೇ ಆಗುತ್ತಿಲ್ಲ. ಸುತ್ತಲೂ ಒಳಗಿರುವಷ್ಟೂ ಪ್ರಶಾಂತತೆಯೂ ಇಲ್ಲದ ಭೋರ್ಗರೆವ ಕಡಲು. ಅಲೆಗಳು ಬಂದು ಬಂದು ಹೋಗುತ್ತಲೇ ಇವೆ ಅಲೆಮಾರಿಯ ಹಾಗೆ.

ಬಣ್ಣಗಳನ್ನೆಲ್ಲ ಮೈ ಮೇಲೆ ಸುರಿದುಕೊಂಡಿವೆಯೇನೋ ಎನ್ನುವ ಹಾಗೆ ದೀಪ ಹತ್ತಿಸಿಕೊಂಡ ಸಣ್ಣ ಸಣ್ಣ ಸುಳಿಗಳು ದೂರದಲ್ಲೆಲ್ಲೋ ನನ್ನನ್ನೇ ಕಾಯುತ್ತಾ ಕೂತಿವೆಯೇನೋ ಅನಿಸುತ್ತದೆ. ಅವುಗಳು ದ್ವೀಪಗಳೇ ಇರಬಹುದು ಎಂಬ ಬಗ್ಗೆ ನನಗೆ ನಂಬಿಕೆಯಿಲ್ಲ. ಕೆಂಪು, ನೀಲಿ, ಹಸಿರು, ಹಳದಿ, ಕಪ್ಪು, ಬಿಳಿ, ಬಾವುಟಗಳನ್ನು ಹಾರಿಸುತ್ತಲೆ ನಿಂತಿರುವ; ಬಹಳ ಹೊತ್ತು ಇರುತ್ತವೆ ಎನಿಸದ ಒಂದಷ್ಟು ನಾವೆಗಳು ದೂರದಲ್ಲೆಲ್ಲೋ ಕಾಣುತ್ತಿವೆ. ನನಗೆ ಈಜು ಬರುತ್ತದೆ. ನನ್ನೂರಿನ ಕೆರೆಯಲ್ಲಿ ಸೊಗಸಾಗಿ ಈಜಿದ ಅನುಭವವಿದೆ. ಸುಳ್ಳಲ್ಲ ಸ್ವಾಮಿ, ಸಮುದ್ರದಲ್ಲಿ ಹಾವು, ಮೊಸಳೆ, ಶಾರ್ಕ್, ತಿಮಿಂಗಲ ಎಲ್ಲವೂ ಈಜುವವರನ್ನೆ ಕಾಯ್ದು ಕೂತಿರುತ್ತವೆ.

ಇದು ನನ್ನೊಬ್ಬನ ಸ್ಥಿತಿ ಅಲ್ಲ. ಜೀವಂತವಾಗಿರುವ ಈ ಜಗತ್ತಿನ ಈ ಕಾಲದ ಹೆಚ್ಚು ಕಡಿಮೆ ನನ್ನಷ್ಟೇ ವಯಸ್ಸಿನ ನನ್ನಷ್ಟೇ ಉಸಿರಾಡುವ ಎಲ್ಲರದ್ದೂ. ನಿಲ್ಲುವ ಹಾಗೆಯೇ ಇಲ್ಲ, ನಿಂತದ್ದೂ ಒಂದು ನಿಲುವು. ಹೆಜ್ಜೆ ಇಡುವ ಹಾಗೆಯೂ ಇಲ್ಲ, ನಡೆದದ್ದೂ ಒಂದು ಒಲವು.

ನಾನೂ ಈ ದೇಶದಲ್ಲಿ ಬಾಳುತ್ತಿರುವ ಒಬ್ಬ ಪ್ರಜೆ. ಇಲ್ಲಿರುವ ಕಾಂಗ್ರೆಸ್ಸು, ಬಿ.ಜೆ.ಪಿ, ಕಮ್ಯುನಿಸ್ಟು, ಜನತಾದಳ, ಸಮಾಜವಾದಿ ಇಂಥ ಯಾವುದಾದರೂ ಒಂದು ಪಕ್ಷದ ಸದಸ್ಯನಾಗಿ, ಅಲ್ಲಿಂದ ಉದ್ಭವವಾಗಿ ಎದ್ದು ನಿಂತ ನಾಯಕರಿಗೆ ಜೈ ಜೈ ಎನ್ನುತ್ತಾ, ಅವರ ಹಿಂದೆ ಓಡಾಡುತ್ತಾ, ಗೆಲ್ಲಿಸಿ. ಅಧಿಕಾರಕ್ಕೇರಿಸಿ. ಸಿಕ್ಕಿದ್ದನ್ನೆಲ್ಲ ದೋಚಿ. ಚೇರು, ಕಾರು, ಮನೆ, ಮನಿ, ಪ್ಲಾಟು, ಸೈಟು ಎನ್ನದೇ ನನಗೂ, ನನ್ನವರಿಗೂ ಹಂಚುತ್ತಾ, ಜೈ ಜೈ ಎನಿಸಿಕೊಂಡು ನಿಂತು ಬಿಡಲೇ; ಹೆಜ್ಜೆ ಇಡಲೆ.,

ನಾನೂ ಈ ಭೂಮಿಯ ಒಂದು ಕಡೆಯಿಂದ ಬಂದವ. ಇವರು ಉತ್ತರದವರು, ಅವರು ಪೂರ್ವದ ಕಡೆಯ ಜನ, ಇಲ್ಲಿ ಪಶ್ಚಿಮದವರು, ಅಲ್ಲಿ ದಕ್ಷಿಣದವರೆಂದು ಪತ್ತೆ ಹಚ್ಚಿ ದೂರ ದೂರ ಸರಿದು ವಾಯುವ್ಯ, ಆಗ್ನೇಯ, ಈಶಾನ್ಯ, ನೈಋತ್ಯ ಸೀಮೆಗಳಿಗೆ ದಂಡೆತ್ತಿ ಹೋಗಿ ಯುದ್ಧ ಹೂಡಿ; ಲಾಂಗು, ಮಚ್ಚು, ತಲವಾರು, ರಿವಾಲ್ವರುಗಳನ್ನು ಯಾರೋ ಕೊಟ್ಟ ಬಹುಮಾನಗಳೆಂದು ತೋರಿಸುತ್ತಾ ಝಳಪಿಸಿಕೊಂಡು; ರಕ್ತ ಹರಿಸಿ, ನಾನೇ ರಾಜ; ನಾನೇ ಕಿಂಗು ಎಂದುಕೊಂಡು ನಿಂತು ಬಿಡಲೇ; ಹೆಜ್ಜೆ ಇಡಲೆ.,

ನಾನೂ ಈ ಮಣ್ಣಿನಲ್ಲೇ ಹುಟ್ಟಿದ ಒಂದು ಧರ್ಮದವ. ಅವನು ಗಡ್ಡ ಬಿಟ್ಟು ಕುರಾನ್ ಓದುವ ಮುಸಲ್ಮಾನ, ಇವನು ಬೈಬಲ್ ಹಿಡಿದು ರಿಂಗ್ ತೊಡಿಸುವ ಕ್ರಿಶ್ಚಿಯನ್, ಈತ ಯೋಗಸ್ಥನಾದ ಜೈನ, ಆತ ಧ್ಯಾನಸ್ಥ ಬೌದ್ಧ, ಅವರು ಪಟಕಾ ಕಟ್ಟಿಕೊಂಡಿರುವ ಶಿಖ್ಖ್, ಇವರು ಬಿಳಿ ಬಟ್ಟೆಯುಟ್ಟ ಯಹೂದಿ, ಹೀಗೆ ಇಷ್ಟೆಲ್ಲಾ ಆಡಿಕೊಂಡು, ನನ್ನನ್ನೆ ನಾನು ನೋಡಿಕೊಳ್ಳದೆ ನಿಂತು ಬಿಡಲೇ; ಹೆಜ್ಜೆ ಇಡಲೆ.,

ನಾನೂ ಈ ಊರಿನಲ್ಲಿ ನಿಂತ ಒಂದು ಮನೆಯ ಮಗ. ಇವು ಒಕ್ಕಲಿಗರ ಬೀದಿ, ಅವು ಲಿಂಗಾಯಿತರ ಹಾದಿ, ಇದು ಬ್ರಾಹ್ಮಣರ ಅಗ್ರಹಾರ, ಅದು ದಲಿತರ ಕೇರಿ ಎಂದು ಸುತ್ತಲು ಗೋಡೆ ಕಟ್ಟಿಕೊಂಡು; ಬೋರ್ಡು ಎಬ್ಬಿಸಿ; ಪಾಳೆಗಾರಿಕೆ ಮಾಡಿಕೊಂಡು; ತೇರು ಎಳೆದು; ಜಯಂತಿ, ಹಬ್ಬ, ಹರಿದಿನ ಮಾಡಿಕೊಂಡು ನಿಂತು ಬಿಡಲೇ; ಹೆಜ್ಜೆ ಇಡಲೆ.,

ನಾನು ಈ ನೆಲದಲ್ಲೇ ಬೆಳೆದ ಒಂದು ಭಾಷೆಯವ. ಅಲ್ಲಿ ಇಂಗ್ಲಿಷ್ ಗೊತ್ತಿದ್ದವರಿಗೆ ಮಾತ್ರ, ಇಲ್ಲಿ ಹಿಂದಿ ಬಲ್ಲವನಿಗೆ, ಅದು ಸ್ಪಾನಿಷ್ ಕಲಿತವನಿಗೆ, ಇದು ಚೈನೀಸ್ ಮಾತಾಡುವವನಿಗೆ, ತಮಿಳು, ಮಲೆಯಾಳಂ, ತೆಲುಗು, ಪಂಜಾಬಿ, ಒಡಿಯಾ, ಬಂಗಾಳಿಯವನ ಹೋ ಗುಡ್, ಅಚ್ಚ, ಬಯನ, ನಲ್ಲ, ನಲ್ಲತ್, ಮಂಚಿ, ಕಗ, ಎಂದು ಕೇಳಿಸಿಕೊಂಡು ನಿಂತು ಬಿಡಲೇ; ಹೆಜ್ಜೆ ಇಡಲೆ.,

ನನ್ನದೂ ಈ ಕಾಲದಲ್ಲಿ ಉಳಿದಿರುವ ಒಂದು ಜೀವ. ಇಪ್ಪತ್ತೊಂದನೆ ಶತಮಾನದ ಆರಂಭದ ಎರಡನೇ ದಶಕದ ಕೊನೆಯಲ್ಲಿ ಇದ್ದುಕೊಂಡು ಪಬ್, ಬಾರ್, ರೆಸ್ಟೋರಾಗಳಿಗೆ ಹೋಗಿ ವಿಸ್ಕಿ, ಬಿಯರ್, ಸ್ಕಾಚ್‌ಗಳನ್ನು ಕುಡಿದುಕೊಂಡು; ಕೋಕೆನ್, ಆಫಿಮು, ಗಾಂಜಾ ತೆಗೆದುಕೊಂಡು; ಡಿಸ್ಕೋ, ರಾಕ್, ಹಿಪ್‌ಹಾಪ್‌ಗಳಿಗೆ ಕುಣಿದುಕೊಂಡು; ಸ್ಯಾಂಡ್‌ವಿಚ್, ಪಿಜ್ಜಾ, ಬರ್ಗರ್ ತಿಂದುಕೊಂಡು; ಪೀಟರ್ ಇಂಗ್ಲೆಂಡ್, ಲಿ ಕೂಪರ್, ಬಫೆಲೋ ಸಿಕ್ಕಿಸಿಕೊಂಡು; ಕ್ರಿಕೆಟ್, ಫುಟ್‌ಬಾಲ್, ಸ್ನೂಕರ್‌ಗಳನ್ನೆಲ್ಲ ನೋಡಿಕೊಂಡು; ಆಪಲ್, ಸ್ಯಾಮ್‌ಸಂಗ್, ಸೋನಿ ಗ್ಯಾಜೆಟ್‌ಗಳನ್ನೆಲ್ಲ ಕೊಂಡುಕೊಂಡು; ಫೇಸ್‌ಬುಕ್, ವಾಟ್ಸಪ್, ಟ್ವಿಟ್ಟರ್‌ಗಳನ್ನು ತುರುಕಿಕೊಂಡು; ಅವುಗಳು ತೋರಿಸುವ ಕನ್ನಡಿಯಲ್ಲಿ ನನ್ನನ್ನೇ ನಾನು ಹುಡಿಕಿಕೊಂಡು ನಿಂತು ಬಿಡಲೇ; ಹೆಜ್ಜೆ ಇಡಲೆ.,

ನಾನೂ ಒಬ್ಬ ಕುಸಿಯದೇ ಉಳಿದ ಹಸಿದವ. ದೊಡ್ಡಿ, ಕೊಪ್ಪಲು, ಹಳ್ಳಿ, ಊರುಗಳಿಂದ ಅಪ್ಪ, ಅವ್ವ, ಅಣ್ಣ, ತಂಗಿ, ಅತ್ತೆ, ಮಾವ, ಎಲ್ಲರನ್ನೂ ಬಿಟ್ಟು ಗಂಟು ಕಟ್ಟಿಕೊಂಡು; ನಿಮ್ಮ ಮುಂಬೈ, ಗುರ್‌ಗಾವ್, ನೋಯ್ಡಾ, ಕಲ್ಕತ್ತಾ, ಪೂನಾ, ಹೈದರಾಬಾದ್, ಬ್ಯಾಂಗಲೂರ್‌ಗಳಿಗೆ ರಾತ್ರೋರಾತ್ರಿ ಬಂದು ದೇಹ ಮನಸ್ಸೇ ಇಲ್ಲದ ದುಡಿದೂ ದುಡಿದೂ; ಉಸಿರನ್ನೆಲ್ಲ ತೆಗೆದು ಎಸೆದು ಬೆವರೇ ಬಾರದ ಯಂತ್ರವಾಗಿ ನಿಂತು ಬಿಡಲೇ; ಹೆಜ್ಜೆ ಇಡಲೆ.,

ನಾನೂ ಒಬ್ಬ ಬದುಕಲೇ ಬೇಕೆಂದು ಓದುತ್ತಿರುವವ. ಸೈನ್ಸು, ಕಾಮರ್ಸು, ಆರ್ಟ್ಸು, ಎಜುಕೇಶನ್ನು, ಲಾ, ಮೆಡಿಕಲ್ಲು, ಟೆಕ್ನಾಲಜಿ ಎಂದು ಯಾರೋ ತಂದು ಎಸೆದ ಬಾವಿಯಲ್ಲಿ ಬಿದ್ದು; ಬೈಯಾಲಜ್ಜಿ, ಫಿಸಿಕ್ಸು, ಟ್ರಿಗ್ನಮೆಟ್ರಿ, ಜಾಮಿಟ್ರಿ, ಕೆಮಿಸ್ಟ್ರಿ, ಮಾಥ್‌ಮೆಟಿಕ್ಸು, ಸಿವಿಲ್ಲು, ಏವಿಗೇಷನ್ನು, ಇ ಅಂಡ್ ಸಿ, ಸಿ. ಎಸ್ಸು, ಮೆಕಾನಿಕಲ್ಲು, ಕೆಮಿಕಲ್ಲು, ಜಾನಪದ, ಪೌರನೀತಿ, ಹಿಸ್ಟ್ರೀ, ಐಚ್ಚಿಕ ಕನ್ನಡ, ಇಂಗ್ಲೀಷ್ ಲಿಟರೇಚರ್ರು, ಸೈಕಾಲಜಿ, ಅಲ್‌ಝೀಬ್ರಾ ಹೀಗೆ ಗಂಟು ಬಿದ್ದವುಗಳನ್ನೆಲ್ಲ ಕಟ್ಟಿಕೊಂಡು ನಿಂತು ಬಿಡಲೇ; ಹೆಜ್ಜೆ ಇಡಲೆ.,

ನಾನೂ ಒಬ್ಬ ಹಗುರಾಗಲು ಬರೆಯುವವ. ಸುಮನಿರಲಾರದೆ ಬರೆದೂ, ಬರೆದು; ಬರೆದದ್ದನ್ನೆಲ್ಲ ಗೀಚಿ ಹರಿದು; ಲೆಫ್ಟು, ರೈಟ್ಟು, ಮಧ್ಯಮ, ಡಾಕ್ಟರ್ರು, ಡಾಕ್ಟರಲ್ಲ, ಅಕೆಡೆಮಿಕ್ಕು, ಪಾಪ್ಯುಲರ್ರು, ಕ್ರಿಟಿಕ್ಕು, ಪಿಟಿಕ್ಕು ಗುಂಪುಗಳ ನೆಟವರ್ಕು ಸಿಗ್ನಲ್ಲುಗಳಿಗೆ ಡಯಲ್ ಮಾಡಿ; ಹಲೋ.. ಹಲೋ... ಎಂದುಕೊಂಡು ನಿಂತು ಬಿಡಲೇ; ಹೆಜ್ಜೆ ಇಡಲೆ.,

ನಾನು ಒಬ್ಬ ಕಣ್ಣಿಗೆ ಬಟ್ಟೆ ಕಟ್ಟಿಸಿಕೊಂಡ ವಿದ್ಯಾರ್ಥಿ. ಎಸ್.ಎಫ್.ವೈ, ಎ.ಬಿ.ವಿ.ಪಿ, ಯೂತ್ ಕಾಂಗ್ರೆಸ್ಸು, ಬಜರಂಗದಳ, ದಸಂಸ, ಶ್ರೀರಾಮಸೇನೆ, ಆರೆಸ್ಸೆಸ್ಸು, ಎಸ್.ಡಿ.ಪಿ.ಐ, ಮಿಷನ್ನು, ಆರ್ಗನೈಜೇಷನ್ನುಗಳಿಗೆ ಸೇರಿಕೊಂಡು ಮಾರ್ಚು, ಸ್ಟ್ರೈಕು, ಬೈಠಕ್ಕು, ಸತ್ಯಾಗ್ರಹ, ಪ್ರೊಟೆಸ್ಟುಗಳನ್ನೆಲ್ಲ ಮಾಡಿಕೊಂಡು ಸೋಷಿಯಲಿಷ್ಟು, ಸೆಕ್ಯುಲರ್ರು, ಟೆರರಿಸ್ಟು, ನಕ್ಸಲಿಸ್ಟು, ಅಂಬೇಡ್ಕರ್‌ವಾದಿ, ಲೋಹಿಯಾವಾದಿ, ಗಾಂಧೀವಾದಿ ಎನಿಸಿಕೊಂಡು; ನಿಂತು ಬಿಡಲೇ; ಹೆಜ್ಜೆ ಇಡಲೆ.,

ನಾನೂ ಒಬ್ಬ ಕನಸು ಕಾಣುತ್ತಲೆ ಇರುವವ. ನನಗೂ ಐಡೆಂಟಿಟಿ ಬೇಕೆಂದು, ಕರುಳನ್ನೇ ಹೊರಕ್ಕೆ ಎಳೆಯುವ ಬೆಲ್ಟ್‌ಗಳನ್ನು ಸುತ್ತಿಕೊಂಡು; ಕೊರಳನ್ನೇ ಬಿಗಿಯುವ ಕಟ್ಟುವ ಟೈಗಳಿಗೆಲ್ಲ ತಲೆ ಎತ್ತುತ್ತಾ; ಹೃದಯವನ್ನೇ ಕೊರೆಯುವ ಬ್ಯಾಡ್ಜುಗಳಿಗೆಲ್ಲ ಎದೆಯೊಡ್ಡುತ್ತಾ; ಬ್ರೈನ್‌ವಾಷ್ ಮಾಡುವ ಎಲ್ಲ ಕ್ಯಾಪ್‌ಗಳನ್ನೂ ತಲೆಗೆ ಹಾಕಿಕೊಂಡು; ಇರುವಷ್ಟು ರಕ್ತವನ್ನೂ ಹೀರಿಕೊಳ್ಳುವ ಫ್ಲಾಗ್‌ಗಳನ್ನು ಕೈಯಲ್ಲಿ ಹಿಡಿದು; ನಿಂತು ಬಿಡಲೇ; ಹೆಜ್ಜೆ ಇಡಲೆ.,

ಹುಟ್ಟು ಸಾವುಗಳೆರಡೂ ಒಟ್ಟಿಗೆ ಮುಂದೆ ಬಂದು ನಿಂತಿವೆ. ನಿಂತ ನೀರು ಕೆಡುತ್ತದೆ. ಹರಿವ ನೀರು ಹೊಳೆಯುತ್ತದೆ. ಉಳಿದ ಕಬ್ಬಿಣಕ್ಕೆ ತುಕ್ಕು. ಹೊರಟ ಉಕ್ಕಿಗೆ ಸವೆತ. ಈ ಕತೆ ನನ್ನದಲ್ಲ. ನನ್ನ ಹಿಂದೆ ಅವಿತು ನಿಂತಿರುವ; ನಿಮ್ಮ ಮುಂದೆ ಕೂತು ಕೇಳುತ್ತಿರುವ ಎಲ್ಲರದ್ದೂ. ಅವರೆಲ್ಲ ನಿಂತು ಬಿಡಲೇ; ಹೆಜ್ಜೆ ಇಡಲೆ...



**(ಲೇಖಕ ರಾಜೇಂದ್ರ ಬಡಿಗೇರ್ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಸಾಹಿತ್ಯದ ಪಿಎಚ್‌ಡಿ ವಿದ್ಯಾರ್ಥಿ)**

ಕವಿ ನೆನಪು:

*ಗೋಪಾಲಕೃಷ್ಣ ಅಡಿಗರ ಶತಮಾನೋತ್ಸವ ವರ್ಷಕ್ಕಾಗಿ ವಿಶೇಷ ಲೇಖನ*



# ಅಡಿಗರ ಕಾವ್ಯ ಮತ್ತು ಹಿಂದುತ್ವ : ಕುದುರದ ಸಂಬಂಧ(ಭಾಗ-೨)

-ಜಿ. ರಾಜಶೇಖರ

**ಹಿಂ**ದುತ್ವದ ರಾಜಕೀಯ ನಿಲುವಿಗೆ ತದ್ವಿರುದ್ಧವಾಗಿರುವ ಅಡಿಗರ ಇನ್ನೊಂದು ಕವಿತೆ 'ಬತ್ತಲಾರದ ಗಂಗೆ' ಕೂಡ ಎಂದೆಂದಿಗೂ ಈಡೇರದ ಒಂದು ಹಾರೈಕೆಯೊಂದಿಗೆ ಕೊನೆಗೊಳ್ಳುತ್ತದೆ.

**'ದಡದಲ್ಲಿ ಮತ್ತೆ ವಿದ್ಯಾರಣ್ಯ ಕ್ಷೇತ್ರ**
**ಚಿಗುರುವುವು ಚಿಗಿಯುವುವು ಮುಗಿಲ ಕಡೆಗೆ**
**ಕನಸೆ? ಕಲ್ಪನೆಯೇ? ಇಲ್ಲವಾದರೇನಿದೆ ಇಲ್ಲಿ**
**ಕಣ್ಣು ಕೀಳುವ ಸೂಜಿ, ಕೊಲುವ ಬಡಿಗೆ.**

[ಅಡಿಗರ ಆಯ್ದ ಕವಿತೆಗಳು:ಅಕ್ಷರ ಪ್ರಕಾಶನ, ಸಾಗರ, ೨೦೦೬, ಪು. ೯೯]

ಮೇಲು ನೋಟಕ್ಕೆ ಈ ಉದ್ಧೃತ, ಸಂಸ್ಕೃತಿಯ ಪುನರುತ್ಥಾನದ ಆಶಯವನ್ನು ಹೇಳುತ್ತದೆ. ಆದರೆ ಕೊನೆಯ ಎರಡು ಸಾಲುಗಳಲ್ಲಿ ಕಾಣುವ ಹಿಂಸೆಯ ತೀವ್ರ ಅರಿವು ಮತ್ತು ಹತಾಶೆ, ಕವಿಯ ಹಂಬಲಕ್ಕೆ ವಿಷಾದ ವಿಹ್ವಲತೆಗಳ ಎಳೆಗಳನ್ನು ಸೇರಿಸುತ್ತದೆ. ಈ ಕವಿತೆ ಪ್ರಕಟವಾದ ಕೆಲವು ತಿಂಗಳ ಮೊದಲು ಬಿಹಾರದ ಜೈಲೊಂದರಲ್ಲಿ ಪೋಲೀಸರು ವಿಚಾರಣಾಪೂರ್ವ ಕೈದಿಗಳ ಕಣ್ಣುಗಳಿಗೆ ಸೂಜಿ ಹೆಟ್ಟಿದ ಕುಖ್ಯಾತ ಘಟನೆ ಮತ್ತು ಸಮಕಾಲೀನ ರಾಜಕೀಯ ಸಂಸ್ಕೃತಿಯ ಭಾಗವೇ ಆಗಿರುವ 'ಕೊಲುವ ಬಡಿಗೆ' – ಇವು ಕವಿತೆಯಲ್ಲಿ ನಮ್ಮ ಕಾಲದ ಕರಾಳತೆಯ ರೂಪಕಗಳಾಗಿವೆ. ಕವಿತೆಯ ಕೊನೆಯಲ್ಲಿ ನಮಗೆ ಕಾಣುವುದು, ತನ್ನ ಸುತ್ತಲಿನ ಹಿಂಸೆಯಿಂದ ದಿಕ್ಕೆಟ್ಟ ಕವಿಯ ಹತಾಶೆಯೇ ಹೊರತು, ರಾಜಕೀಯ ಪ್ರಚಾರಕನ ಹುಸಿ ಸಾಂತ್ವನವಲ್ಲ. ಕವಿತೆಯಲ್ಲಿ ಕಣ್ಣು ಕೀಳುವ ಸೂಜಿ, ಕೊಲುವ ಬಡಿಗೆಗಳ ಈ ಚಿತ್ರವನ್ನು ಪೂರ್ತಿಗೊಳಿಸುವುದು, 'ಈಗ ನಿಂತ ನೀರಿನ ಕೊಳೆಯುತ್ತಿರುವ ಮಡುಗಳ ಹಳೆ ಕೊಳೆಯ ದುರ್ನಾತ ಕೆಸರುರಾಡಿಯಾಗಿರುವ ಗಂಗಾನದಿ.' ಗಂಗಾ ನದಿ ಪರಂಪರೆಯ ಪ್ರತೀಕವೂ ಹೌದು; ವರ್ತಮಾನದ ವಾಸ್ತವವೂ ಹೌದು. 'ಬತ್ತಿ ಹೋಗಲಿ ಗಂಗೆಯೊಂದು ಸಲ ತಳ ಬಿರಿದು' ಎಂದು ಕವಿ ಸಂಕಟದಲ್ಲಿ ಶಪಿಸುತ್ತಾರೆ. ಒಮ್ಮೆ ಇದ್ದ ಕೊಳೆ ನೀರೆಲ್ಲ ಬತ್ತಿದರೆ, ನಂತರ ಗಂಗೆ ನಿರ್ಮಲವಾಗಿ ಹರಿಯಬಹುದು ಎಂದು ಕವಿಯ ಆಸೆ. ವರ್ತಮಾನದ ಮಲಿನಗೊಂಡ ಗಂಗೆ ಕವಿಗೆ ಮಲಿನಗೊಂಡ ಪರಂಪರೆಯ ಪ್ರತೀಕದ ಹಾಗೆ ಕಾಣುತ್ತಾಳೆ; ಗಂಗೆ ನಾಡಿನ ಹಾಲಾಹಲ, ಕೋಲಾಹಲಗಳಿಗೆಲ್ಲ ಸಾಕ್ಷಿಯಾಗಿ ಆ ನೆನಪನ್ನು ನಿರಂತರವಾಗಿ ಉಳಿಸಿಕೊಂಡಿರುವವಳೂ ಹೌದು.

**'ಗಂಗಾಳ ತುಂಬ ಗಂಜಿಯನಿಟ್ಟು ಕುಳಿತಿದ್ದಾಳೆ**
**ಗಂಗಜ್ಜಿ ಅಂಗಾಂಗ ಸುಕ್ಕಿ ಸೊರಗಿ;**
**ಮುಟ್ಟಲಾರಳು ತೊಟ್ಟು, ಕಣ್ಣಮುಂದೆ ಕಟ್ಟಿದೆ ಅಲ್ಲಿ**
**ಕುರುಕ್ಷೇತ್ರಗಳ ರುಂಡ ರಕ್ತವೇಣಿ'**

ಹಿಂಸೆ ಮತ್ತು ನೋವಿನ ಈ ವಾಸ್ತವಕ್ಕೆ ಪರ್ಯಾಯವಾಗಿ ಕವಿ ವಿದ್ಯಾರಣ್ಯ ಕ್ಷೇತ್ರ ಮತ್ತೆ ಚಿಗುರಿ ಮುಗಿಲೆತ್ತರಕ್ಕೆ ಬೆಳೆಯುವುದನ್ನು ಕಲ್ಪಿಸಿಕೊಳ್ಳುತ್ತಾರೆ. ಇದು ಧರ್ಮ, ಸಂಸ್ಕೃತಿಗಳ ಪುನರುತ್ಥಾನದ ಹಂಬಲವಲ್ಲ. ಕವಿಗೆ ತನ್ನ ಆಶಯ ಕನಸು ಮಾತ್ರವೆ? ಎಂಬ ಸಂದೇಹವಿದೆ. ಹಿಂದುತ್ವದ ಸಿದ್ಧಾಂತದಲ್ಲಿ ಇಂತಹ ಸಂದೇಹಗಳು ತಲೆದೋರುವುದಕ್ಕೆ ಅವಕಾಶವಿಲ್ಲ.

ಅಡಿಗರು ತನ್ನ ಕವಿತೆಯಲ್ಲಿ ಚಿತ್ರಿಸುವ ಗಂಗಾನದಿ ಪರಂಪರೆಯ ಪ್ರತಿಮೆಯೂ ಹೌದು; ವಾಸ್ತವದ ನದಿಯೂ ಹೌದು. ಕನ್ನಡದ ಇನ್ನೊಬ್ಬ ಶ್ರೇಷ್ಠ ಕವಿ ಕುವೆಂಪು ಗಂಗಾ ನದಿಯನ್ನು ಚಿತ್ರಿಸುವ ಬಗೆ ಅಡಿಗರಿಗಿಂತ ತುಸು ಬೇರೆಯಾದದ್ದು. ೧೯೫೫ರ ಆಕ್ಟೋಬರ್ ತಿಂಗಳಲ್ಲಿ ಕುವೆಂಪು ಕಲ್ಕತ್ತಕ್ಕೆ ಪ್ರಯಾಣ ಕೈಗೊಳ್ಳುತ್ತಾರೆ; ರಾಮಕೃಷ್ಣಾಶ್ರಮವನ್ನು ನೋಡುವುದು ಅವರ ಉದ್ದೇಶ. ತಮ್ಮ ಆತ್ಮ ಕಥನ 'ನೆನಪಿನ ದೋಣಿಯಲ್ಲಿ' – ಕೃತಿಯಲ್ಲಿ ಕುವೆಂಪು ಆ ಯಾತ್ರೆಯ ಬಗ್ಗೆ ವಿವರವಾಗಿ ಬರೆದಿದ್ದಾರೆ. ಕಲ್ಕತ್ತೆಯ ಕಾಳಿಘಾಟ್‌ನಲ್ಲಿ ತಾವು ಕಂಡ ಪ್ರಾಣಿಬಲಿಯ ಬೀಭತ್ಸಮಯ ದೃಶ್ಯಗಳು ಮತ್ತು ಗಂಗಾನದಿಯ ಗಲೀಜನ್ನು ಅವರು ವಿವರ ವಿವರವಾಗಿ ಬಣ್ಣಿಸುತ್ತಾರೆ. ಕಲ್ಕತ್ತೆಯ ಕಸವನ್ನೆಲ್ಲ ಹೊತ್ತು ಹರಿಯುವ ಗಂಗಾನದಿ, ಅದರಲ್ಲಿ ತೇಲುವ ಹೇಲು ರಾಶಿ, ಹಸುವಿನ ಹೆಣ, ಆ ಹೆಣದ ಮೇಲೆ ಕೂತ ಹದ್ದು, ಕಾಗೆ ಇತ್ಯಾದಿಗಳನ್ನಂತೂ, ಇರುವುದು ಅದೊಂದೇ ವಾಸ್ತವ ಎಂಬಷ್ಟು ತದೇಕ ಚಿತ್ತರಾಗಿ ಮತ್ತು ಅಷ್ಟೇ ಜಿಗುಪ್ಸೆಯಿಂದ ಕುವೆಂಪು ಚಿತ್ರಿಸುತ್ತಾರೆ. ಗಂಗಾನದಿಯಲ್ಲಿ ಶಾಸ್ತ್ರಕ್ಕಾದರೂ ಸ್ನಾನ ಮಾಡಲು ಸಹ ಅವರು ನಿರಾಕರಿಸುತ್ತಾರೆ. 'ಮುಳುಗಿದರೆ ತಲೆಯ ಮೇಲೆ ಹೇಲಿನ ಕುಳ್ಳೆ ಕುಳಿತರೇನು ಗತಿ?' ಎಂಬುದು ಅವರ ಆತಂಕ. ಆದರೆ ಅದೇ ದಿನ ಸಂಜೆ [೧೨-೧೦-೧೯೫೫] ತಮ್ಮ ಡೈರಿಯಲ್ಲಿ ಅವರು ಒಂದು ಕವಿತೆ ಬರೆಯುತ್ತಾರೆ; ಅದರ ಕೆಲ ಸಾಲುಗಳು ಹೀಗಿವೆ:

**ಶ್ರೀ ರಾಮಕೃಷ್ಣ ಗುರುದೇವನಂ ನೆರೆನೆನೆದು**
**ದೋಣಿಯಿಂದಿಳಿ ಕೆಳಗೆ ಯಾತ್ರಿಕನೆ ಭವರೋಗಿ**
**ದಿವಿಜ ಗಂಗೆಯ ನಿರ್ಮಲ ತೀರ್ಥದೊಳು ಮಿಂದು**
**ಪರಿಶುದ್ಧನಾಗಿ ಪಾವನನಾಗಿ ಮೇಲೇರು**

[ನೆನಪಿನ ದೋಣಿಯಲ್ಲಿ – ಪುಟ ೮೯೮]

ಕುವೆಂಪು ತನ್ನ ಆತ್ಮಕಥನದ ಗದ್ಯದ ಸಾಲುಗಳಲ್ಲಿ ಚಿತ್ರಿಸುವ ಗಂಗಾನದಿ ಮತ್ತು ಕವಿತೆಯ 'ದಿವಿಜ ಗಂಗೆ' ಒಂದೇ ನದಿಯೋ? ಬೇರೆ ಬೇರೆಯೋ? ಕವಿಗೆ ಇದು ಸಮಸ್ಯೆಯೇ ಅಲ್ಲ. ಗಲೀಜಾಗಿರುವ ಗಂಗಾನದಿ ಅವರು ಕಣ್ಣಾರೆ ಕಂಡದ್ದು. 'ದಿವಿಜ ಗಂಗೆ'ಯಾದರೋ, ಅವರ ಸ್ಮೃತಿಯಲ್ಲಿ ಹರಿಯುವ ನದಿ. ತನ್ನ 'ಬತ್ತಲಾರದ ಗಂಗೆ'ಯಲ್ಲಿ ಅಡಿಗರು

**'ದೇವಗಂಗೆಯೆ ನೀರ**
**ಹೃದಯದಂತರ್ಗಂಗೆ ತುಂಬಿ ಚೆಲ್ಲಿ'**

ಎಂದು ಬರೆಯುತ್ತಾರೆ. ಅಡಿಗರ ಇಲ್ಲಿನ ದೇವಗಂಗೆ ಭವಿಷ್ಯದ ಕುರಿತ ಅವರ ಆಶಯದ ಪ್ರತಿಮೆ; ಈಗ ಮಲಿನವಾಗಿರುವ ಗಂಗಾನದಿ ಮಾತ್ರ ಕವಿತೆಯಲ್ಲಿ ಅವರು ಎದುರಿಸುವ ವಾಸ್ತವ. ಅಡಿಗರು ನಿಷ್ಠುರ ವಾಸ್ತವವಾದಿ; ಆದರೂ ಕವಿ. ತನ್ನ 'ಸ್ವಾತಂತ್ರ್ಯ: ೧೯೫೦ರ ಪಾಠ' ಎಂಬ ಕವಿತೆಯಲ್ಲಿ ಅವರು ಹೇಳುತ್ತಾರೆ.

**.................................. ಕಲ್ಪನೆಯೊಳಗೆ**
**'ಬೀಜವೊಂದೇ ಹಬ್ಬಿತಬ್ಬಬಹುದಖಿಲಾಂಡ ಕೋಟಿಯನ್ನು**
**ಪ್ರಾಣವೋ ಅಸ್ಥಿಪಂಜರಬದ್ಧ'**

[ಸಮಗ್ರ ಕಾವ್ಯ – ಪುಟ-೨೯೬]

ನದಿಯ ಪ್ರಾಣ ನೀರು. ನೀರೇ ನದಿಯ ಅಸ್ತಿ ಪಂಜರ. 'ಹರಿವ ನದಿಗೆ ಮೈಯೆಲ್ಲ ಕಾಲು' ಎಂದು ಅಲ್ಲಮ ಹೇಳಲಿಲ್ಲವೆ? 'ದೇವಗಂಗೆ'ಯ ತನ್ನ ಆಶಯ ಏನೇ ಇರಲಿ, ವರ್ತಮಾನದ ಕೊಳಕು ನೀರಿನ ಗಂಗಾನದಿ ಮಾತ್ರ ಅಡಿಗರಿಗೆ ನಿಜ. ಕುವೆಂಪು ಮತ್ತು ಅಡಿಗ ಇಬ್ಬರೂ ಗಂಗಾನದಿಯ ಬಹುರೂಪಿ ಅಸ್ತಿತ್ವಗಳನ್ನು ಗುರುತಿಸುತ್ತಾರೆ. ಅವರಿಬ್ಬರೂ ತಮ್ಮ ಬರವಣಿಗೆಯಲ್ಲಿ ಕಾಣಿಸುವ ಗಂಗಾನದಿ ಒಂದು ದೇಶ, ಒಂದು ಧರ್ಮ, ಒಂದು ಜನಾಂಗ ಮತ್ತು ಪ್ರಜೆಗಳೆಲ್ಲರಿಗೂ ಒಂದೇ ಗುರುತು, ಚಹರೆಗಳ ಅಸ್ತಿತ್ವ ಎಂಬ ಹಿಂದುತ್ವದ ಪ್ರತಿಪಾದನೆಗೆ ವಿರುದ್ಧವಾದದ್ದು. ಅಡಿಗ ಮತ್ತು ಕುವೆಂಪು, ಇಬ್ಬರೂ ಗಂಗೆಯ ಬಹು ಅಸ್ತಿತ್ವಗಳ ಬಗ್ಗೆ ಬರೆಯುವುದರ ಮುಖಾಂತರ ಗಂಗಾನದಿಯನ್ನಷ್ಟೇ ಚಿತ್ರಿಸುತ್ತಿಲ್ಲ; ತಮ್ಮ ವ್ಯಕ್ತಿತ್ವದ, ಇಕ್ಕಟ್ಟು, ಇಬ್ಬಂದಿತನಗಳನ್ನೂ ವ್ಯಕ್ತಪಡಿಸುತ್ತಿದ್ದಾರೆ; ಹಿಂದುತ್ವದ ಹಠಕ್ಕೆ ಇಂತಹದ್ದೆಲ್ಲ ವರ್ಜ್ಯ.

ಹಿಂದುತ್ವದ ದೃಷ್ಟಿಯಲ್ಲಿ ಪೊಲಿಟಿಕಲಿ ಕರೆಕ್ಟ್ ಎಂದು ಭಾವಿಸಬಹುದಾದ ಒಂದೆರಡು ಕವಿತೆಗಳನ್ನಾದರೂ ಅಡಿಗರು ಬರೆದಿದ್ದಾರೆ. ಅವುಗಳ ಪೈಕಿ ತಕ್ಷಣ ನೆನಪಿಗೆ ಬರುವ ಕವಿತೆಗಳು 'ಮತ್ತೆ ಮೊಳಗಲಿ ಪಾಂಚಜನ್ಯ' ಹಾಗೂ 'ಅಂಬೇಡಕರ ಭೀಮರಾಯರಿಗೆ'. 'ಮತ್ತೆ ಮೊಳಗಲಿ ಪಾಂಚಜನ್ಯ'ವನ್ನು ವಿಮರ್ಶಿಸುವುದು ಹಾಗಿರಲಿ ಒಂದು ಕವಿತೆ ಎಂದು ಅದನ್ನು ಓದುವುದೂ ಕಷ್ಟ. ಸೂಕ್ತ ರಾಗ ಸಂಯೋಜಿಸಿ, ಆರ್.ಎಸ್.ಎಸ್. ಶಾಖೆಗಳಲ್ಲಿ ಸಾಮೂಹಿಕವಾಗಿ ಹಾಡುವುದಕ್ಕೆ

ಮಾತ್ರ ಯೋಗ್ಯವಾದ ರಚನೆ ಅದು. ಅಡಿಗರ 'ಅಂಬೇಡಕರ ಭೀಮರಾಯರಿಗೆ' ಕವಿತೆಯಲ್ಲಿ ಅಡಿಗರ ರಾಜಕೀಯ ನಿಷ್ಠೆ ವ್ಯಕ್ತವಾಗುವ ಪರಿ ಸ್ವಲ್ಪ ಬೇರೆ ತರಹದ್ದು. ಕವಿತೆಯಲ್ಲಿ ಹಿಂದುತ್ವದ ಎದುರಾಳಿಗಳನ್ನು ಕಟುಮಾತು, ನಿಂದೆ, ಅಬ್ಬರ, ಅರ್ಧಸತ್ಯ ಇತ್ಯಾದಿಗಳಿಂದ ಹತವೀರ್ಯರನ್ನಾಗಿಸುವ ತಂತ್ರಗಾರಿಕೆಯೊಂದು ಕೆಲಸ ಮಾಡಿದಂತೆ ಕಾಣುತ್ತದೆ. ಕವಿಯಾಗಿ ಅಡಿಗರಿಗೆ ಈ ಬಗೆಯ ಚಾಲಾಕಿ ಇಲ್ಲ; ಅವರಿಗೆ ಸರಿಯಾಗಿ ಸುಳ್ಳು ಹೇಳಲೂ ಬರುವುದಿಲ್ಲ. ಉದಾಹರಣೆಗೆ ತನ್ನ ಆಯುಷ್ಯವಿಡೀ ಹಿಂದು ಧರ್ಮದ ಜಾತಿ ಪದ್ಧತಿ, ಅಸ್ಪೃಶ್ಯತೆ, ಅಸಮಾನತೆ ಮತ್ತು ಲಿಂಗ ತಾರತಮ್ಯಗಳ ವಿರುದ್ಧ ಹೋರಾಡಿದ ಅಂಬೇಡ್ಕರ್ ಅವರನ್ನು ಅಡಿಗರು 'ಆಧುನಿಕ ಹಿಂದುತ್ವದ ಅಪ್ರತಿಮ ಮೂಲ ಮಾದರಿ' ಎಂದು ಸಂಬೋಧಿಸುತ್ತಾರೆ. ಕೇಳಿಸಿಕೊಂಡವನಿಗೆ ಅದು ಕೇವಲ ಮುಖಸ್ತುತಿ ಅನ್ನಿಸಬೇಕು. ಹಾಗಿದೆ ಆ ಮಾತು. 'ಸಂಘರ್ಷವಾದಿಯಾಗಿರಲಿಲ್ಲ ನೀವು' ಎಂದು ಕವಿ ಅಂಬೇಡ್ಕರ್ ಅವರಿಗೇನೆ ಹೇಳಿ ಹಿಂದುತ್ವದ ಪಾಳೆಯದೊಳಗೆ ಅವರನ್ನು ಸಲೀಸಾಗಿ ಸೇರಿಸಿಕೊಂಡು ಬಿಡುತ್ತಾರೆ. ಅಂಬೇಡ್ಕರ್ ಹೆಚ್ಚು ಕಡಿಮೆ ನಮಗೆಲ್ಲ ಸಮಕಾಲೀನರು. ಅಂತಹವರ ಬಗ್ಗೆ ನಾವು ಆಡುವ ಮಾತು, ಅವರ ಬದುಕು ಅಥವಾ ವಿಚಾರವನ್ನು ಆಧರಿಸಿರಬೇಕು. ನಮ್ಮ ಮಾತು ಬರೇ ಅಭಿಪ್ರಾಯವೇ ಆಗಿದ್ದರೂ ಅದು ಸಾಕ್ಷ್ಯಾಧಾರಗಳೊಡನೆ ತಾಳೆ ಹಾಕಿ ಪರಾಂಬರಿಸಿ ನೋಡುವಂತಿರಬೇಕು. ಅಡಿಗರ ಕವಿತೆಯಲ್ಲಿ ಸಾಕ್ಷ್ಯಾಧಾರಗಳೇ ಇಲ್ಲದ ಎಷ್ಟು ನಿರ್ಣಾಯಕ ಹೇಳಿಕೆಗಳು! ಕಠೋರ ತೀರ್ಮಾನಗಳು! ಮತ್ತು ಏಕಪಕ್ಷೀಯ ಘೋಷಣೆಗಳು! ಉದಾಹರಣೆಗೆ ಕವಿತೆಯಲ್ಲಿ ಒಂದೆಡೆ ಅಡಿಗರು ಅಂಬೇಡ್ಕರ್ ಬೌದ್ಧ ಧರ್ಮಕ್ಕೆ ತನ್ನ ನಿಷ್ಠೆ ಬದಲಾಯಿಸಿಕೊಂಡ ಬಗ್ಗೆ ಹೇಳುತ್ತ

**'ಹಿಂದುತ್ವ ದೊಳಗಿರುವ ಸಿಂಧುತ್ವ, ಬಂಧುತ್ವ, ಸಮತ್ವಗಳ ರಾಗ**
**ಮಾಲಿಕೆಯನೆಬ್ಬಿಸಲು ದುಡಿದು ದಣಿದು**
**ಬೌದ್ಧಕ್ಕೆ ಸೋತದ್ದು ಸೋಜಿಗವಲ್ಲ'**

ಎನ್ನುತ್ತಾರೆ. ಹಿಂದುತ್ವದ ಸಿದ್ಧಾಂತದಲ್ಲಿ ಅಡಿಗರಿಗೆ ಸಿಂಧುತ್ವ ಬಂಧುತ್ವ, ಸಮತ್ವಗಳೆಲ್ಲ ಎಲ್ಲಿ ಹೇಗೆ ಕಾಣಿಸಿಕೊಂಡವು ಎಂದು ತನ್ನ ಕವಿತೆಯಲ್ಲಿ ಅವರು ಹೇಳುವುದಿಲ್ಲ. ಹಿಂದುತ್ವಕ್ಕೆ ಬದ್ಧವಾಗಿರುವ ಸಂಘ ಪರಿವಾರದ ಸಂಘಟನೆಗಳು, ಹಿಂದುಗಳ ನಡುವೆ ಸಮಾನತೆ ತರಲು ಪ್ರಯತ್ನಿಸಿದ್ದು ಎಲ್ಲಿಯೂ ಕಾಣುವುದಿಲ್ಲ. ಆದರೆ ಹಿಂದುಗಳಿಗೆ 'ಅನ್ಯರೂ' 'ಅನ್ಯಮತೀಯರೂ ಆಗಿರುವ ಮುಸ್ಲಿಮರು, ಕ್ರೈಸ್ತರು, ಕಮ್ಯುನಿಸ್ಟರು ಮತ್ತಿತರರ ವಿರುದ್ಧ ಹಿಂದುಗಳನ್ನು ಎತ್ತಿಕಟ್ಟಲು ಆ ಸಂಘಟನೆಗಳು ಶ್ರಮಿಸುತ್ತಿರುವುದು ನಿಚ್ಚಳವಾಗಿ ಕಾಣುತ್ತಿದೆ. ಅನ್ಯರ ಮೇಲೆ ಹಲ್ಲೆ ನಡೆಸಲೋಸುಗ ಹಿಂದುಗಳು ಒಗ್ಗಟ್ಟಾಗುವುದನ್ನೇ ಅಡಿಗರು ಹಿಂದುಗಳ ನಡುವಿನ ಸಿಂಧುತ್ವ, ಬಂಧುತ್ವ ಮತ್ತು ಸಮತ್ವಗಳು ಎಂದು ತಿಳಿದರೋ ಹೇಗೆ? ಹೇಗೂ ಇರಲಿ, ಅದು ಅವರ ಅಭಿಪ್ರಾಯ. ಆದರೆ ಅಂಬೇಡ್ಕರ್ ಅವರ ಬದುಕು ಮತ್ತು ಹೋರಾಟಗಳಲ್ಲಿ ಅಡಿಗರ ಈ ತೀರ್ಮಾನಕ್ಕೆ ಆಧಾರವಿದೆಯೆ? ೧೯೫೬ ಅಕ್ಟೋಬರ್ ೧೪ರಂದು ಮಹಾರಾಷ್ಟ್ರದ ನಾಗಪುರದಲ್ಲಿ ಅಂಬೇಡ್ಕರ್ ಸುಮಾರು ಆರು ಲಕ್ಷ ದಲಿತರ ಸಮ್ಮುಖದಲ್ಲಿ ಬೌದ್ಧ ಧರ್ಮ ಸ್ವೀಕರಿಸಿದರು. ಅದರ ಮಾರನೆಯ ದಿನ, ಅಂದರೆ ೧೯೫೬ರ ಅಕ್ಟೋಬರ್ ೧೫ರಂದು ಅವರ ದಲಿತರ ಭಾರೀ ಸಮಾವೇಶವೊಂದನ್ನು ಉದ್ದೇಶಿಸಿ ಮಾತಾಡುತ್ತ, ತಾನು ಹಿಂದೂ ಧರ್ಮ ತ್ಯಜಿಸಿ ಬೌದ್ಧ ಧರ್ಮಕ್ಕೆ ಮತಾಂತರಗೊಂಡದ್ದರ ಕಾರಣಗಳನ್ನು ವಿವರಿಸಿದರು. ತನ್ನ ದೀರ್ಘ ಭಾಷಣದಲ್ಲಿ ಒಂದೆಡೆ ಅವರು ಹೇಳುತ್ತಾರೆ: "ಹಿಂದುವಾಗಿ ಹುಟ್ಟಿದರೂ ನಾನು ಖಂಡಿತ ಹಿಂದುವಾಗಿ ಸಾಯುವುದಿಲ್ಲ ಎಂದು ಬಹಳ ಹಿಂದೆಯೇ ಪ್ರತಿಜ್ಞೆ ಮಾಡಿದ್ದೆ. ಈಗ ಬೌದ್ಧ ಧರ್ಮಕ್ಕೆ ಪರಿವರ್ತನೆಗೊಳ್ಳುವುದರ ಮೂಲಕ ನಾನು ನನ್ನ ಮಾತು ಉಳಿಸಿಕೊಂಡಿದ್ದೇನೆ, ನರಕವೊಂದರಿಂದ ಹೊರಬಂದೆ ಎಂದು ನನಗೆ ಅನ್ನಿಸುತ್ತಿದೆ." ಹಿಂದು ಧರ್ಮದಲ್ಲಿ ಅಂಬೇಡ್ಕರ್ ಅವರಿಗೆ ಕಾಣಿಸದ ಸಿಂಧುತ್ವ, ಬಂಧುತ್ವ, ಸಮತ್ವಗಳನ್ನು ಅಡಿಗರು ಹಿಂದುತ್ವದಲ್ಲಿ ಕಂಡುಕೊಳ್ಳುವುದು ಸೋಜಿಗವೇ ಸರಿ. ಹಿಂದುತ್ವದ ರಾಜಕೀಯಕ್ಕೆ ಬಹುಪರಾಕ್ ಹೇಳಲೋಸುಗ ಎಂಬಂತೆ ಅಡಿಗರು ಬರೆದಿರುವ 'ಮತ್ತೆ ಮೊಳಗಲಿ ಪಾಂಚಜನ್ಯ' ಮತ್ತು ಅಂಬೇಡಕರ ಭೀಮರಾಯರಿಗೆ' – ಈ ಎರಡು ಕವಿತೆಗಳು ಹೇಗೆ ನೋಡಿದರೂ ಅಡಿಗರ ಕಾವ್ಯವನ್ನು ಪ್ರತಿನಿಧಿಸುವಂತಹ ರಚನೆಗಳಲ್ಲ.



**(ಉಡುಪಿಯ ಜಿ.ರಾಜಶೇಖರ್ ನಮ್ಮ ನಡುವಿನ ಹಿರಿಯ ಸಂಸ್ಕೃತಿ ಚಿಂತಕರಲ್ಲೊಬ್ಬರು)**

**೩ನೇ ಪುಟದಿಂದ)**

ಮುಚ್ಚಿದ್ದ ಜಲಮೂಲಗಳನ್ನು ಹುಡುಕಿ ಪುನಶ್ಚೇತನಗೊಳಿಸುವ ಕೆಲಸಗಳು ನಡೆಯುತ್ತಿವೆ. ಕೆಲವು ಗ್ರಾಮಸ್ಥರು ತಾವಾಗಿಯೇ, ನಮ್ಮೂರಿನ ಕಲ್ಯಾಣಿ ಪುನಶ್ಚೇತನಕೆ ಬನ್ನಿ ಎಂದು ಆಹ್ವಾನಿಸುತ್ತಿದ್ದಾರೆ. ಹಾಗಾಗಿಪ್ರತಿ ವಾರವೂ ಒಂದು ಕಲ್ಯಾಣಿಯನ್ನು ಮೊದಲೇ ಗುರುತಿಸಿ, ಊರಿನ ಜನರಿಗೆ ಜಾಗೃತಿ ಮೂಡಿಸಿ, ನಾಡಿನಾದ್ಯಂತವಿರುವ ನೀರಿನ ಸಂಕಷ್ಟ, ನೀರಿನ ಸಂರಕ್ಷಣೆಯ ಮಾದರಿಗಳು, ನಮ್ಮ ಪ್ರತಿಷ್ಠಾನದ ವತಿಯಿಂದ ನಾವು ಇದುವರೆಗೆ ಮಾಡಿದ ಕೆಲಸಗಳನ್ನೊಳಗೊಂಡ ಸಾಕ್ಷ್ಯಚಿತವನ್ನು ಪ್ರದರ್ಶಿಸುತ್ತೇವೆ. ನಂತರ ಗ್ರಾಮಸ್ಥರಲ್ಲಿ ತಮ್ಮ ಹಳ್ಳಿಯಲ್ಲಿ ಬೀಳುವ ಮಳೆ ನೀರನ್ನು ತಮ್ಮ ಊರಲ್ಲೇ ಹಿಡಿದಿಡುವ ಮಹತ್ವದ ಕುರಿತು ಕೆಲಸದ ಮೂಲಕವೇ ಜಾಗೃತಿ ಮೂಡಿಸುತ್ತಿದ್ದೇವೆ.

ಹಾಸನದ ಮೂರು ಮುಖ್ಯ ಕೆರೆಗಳಾದ ಚನ್ನಪಟ್ಟಣ ಕೆರೆ, ಹುಣಸಿನ ಕೆರೆ, ಸತ್ಯಮಂಗಲ ಕೆರೆಗಳನ್ನೂ ವಿವಿಧ ಕಟ್ಟಡ, ದಾರಿ, ಚರಂಡಿ, ಕಾಮಗಾರಿಗಳಿಗಾಗಿ ಒತ್ತುವರಿ ಮಾಡಿಕೊಳ್ಳಲಾಗಿತ್ತು. ನಾವು ಅವುಗಳ ಅಳತೆ, ಪುನಶ್ಚೇತನಕ್ಕೆ ಬೇಕಾದ ಅಂದಾಜು ವೆಚ್ಚ ಮಾಡಿಸಿ, ಮಾದರಿಯೆಂಬಂತೆ ಅಭಿವೃದ್ಧಿಪಡಿಸಲು, ಮುಖ್ಯಮಂತ್ರಿಗಳ ಮೇಲೆ ಒತ್ತಡವನ್ನೂ ಹೇರಿದ್ದೆವು. ಈ ಬಾರಿಯ ಬಜೆಟ್‌ನಲ್ಲಿ ಈ ಕೆಲಸಗಳಿಗೆ ೨೦ ಕೋಟಿಗಳನ್ನು ಮೀಸಲಿರಿಸಲಾಗಿದೆ. ಇದಲ್ಲದೇ ಖಾಸಗಿ ಸಂಘ–ಸಂಸ್ಥೆಯವರೂ, ಆಸ್ಪತ್ರೆಯ ಮುಖ್ಯಸ್ಥರೂ ತಾವೇ ವೈಯಕ್ತಿಕವಾಗಿ ಕೆರೆಗಳನ್ನು ಪುನಶ್ಚೇತನ ಮಾಡಿಸುವುದಾಗಿ ಮುಂದೆ ಬರುತ್ತಿದ್ದಾರೆ. ಅದರಲ್ಲಿ ಪ್ರಮುಖವಾಗಿ ಹೆಚ್‌ಪಿಸಿಎಲ್ ಕಂಪನಿಯವರು ಹಾಸನ ನಗರಕ್ಕೆ ಹೊಂದಿಕೊಂಡಂತಿರುವ ಗವೇನಹಳ್ಳಿ ಕೆರೆಯ ನಾಲ್ಕೆಕರೆಯನ್ನು ಪುನಶ್ಚೇತನಗೊಳಿಸಿದ್ದಾರೆ.

ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿಯವರು ೩–೪ ವರ್ಷದ ಹಿಂದೆ ಅಧ್ಯಯನ ಮಾಡಿ ಹಾಸನ ಜಿಲ್ಲಾದ್ಯಂತವಿರುವ ೨೫೩ ಕಲ್ಯಾಣಿಗಳನ್ನು ಗುರುತಿಸಿ ಜಿಲ್ಲಾಪಂಚಾಯಿತಿಗೆ ಕೊಟ್ಟಿದ್ದ ವರದಿ ನಮಗೆ ದಿಕ್ಸೂಚಿಯಾಗಿದೆ. ಜೊತೆಗೆ ಈ ಸಂಸ್ಥೆ ನಮ್ಮ ಕೆಲಸಗಳನ್ನು ಗುರುತಿಸಿ ತಾವು ಶಾಂತಿಗ್ರಾಮದ ಒಂದು ಕಲ್ಯಾಣಿಯ ಪುನಶ್ಚೇತನಕ್ಕೆ ಬೇಕಾದ ಧನಸಹಾಯ ನೀಡುವುದಾಗಿ ಮುಂದೆ ಬಂದಿದೆ. ಈ ನೀರಿನ ಕೆಲಸಗಳನ್ನು ಪ್ರತಿ ತಾಲ್ಲೂಕಿಗೂ ವಿಸ್ತರಿಸುವ ಪ್ರಯತ್ನಗಳು ಕಳೆದೊಂದು ತಿಂಗಳಿನಿಂದ ಸಾಗಿದ್ದು, ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿ ಇಂದಿರಾ ಪ್ರಿಯದರ್ಶಿನಿ ರಾಷ್ಟ್ರೀಯ ಪರಿಸರ ಪ್ರಶಸ್ತಿ ವಿಜೇತ ಹಾಗೂ ನಮ್ಮ ಟ್ರಸ್ಟಿಗಳಲ್ಲಿ ಒಬ್ಬರಾದ ಚ.ನಾ.ಅಶೋಕ್ ಅವರ ನೇತೃತ್ವದಲ್ಲಿ ಹಾಗೂ ಅರಕಲಗೂಡು ತಾಲ್ಲೂಕಿನಲ್ಲಿ ಖ್ಯಾತ ಸಂಗೀತ ವಿದ್ವಾನರಾದ ಆರ್.ಕೆ.ಪದ್ಮನಾಭ ಅವರ ನೇತೃತ್ವದಲ್ಲಿ ಕಲ್ಯಾಣಿಗಳ ಪುನಶ್ಚೇತನ ಕೆಲಸಗಳು ಅವಿರತ ನಡೆಯುತ್ತಿವೆ. ಹಾಸನ ತಾಲ್ಲೂಕಿನ ಕೆಲಸಗಳನ್ನು ಮಾಡಲು 'ಹಸಿರುಭೂಮಿ ಬಳಗ'ವೆಂಬ ಯುವ ತಂಡವನ್ನು, ಪ್ರತಿ ಭಾನುವಾರದಂದು ನಿಗದಿಯಾದ ಕಲ್ಯಾಣಿಯ ಪುನಶ್ಚೇತನಕ್ಕೆ ಬಸ್ ವ್ಯವಸ್ಥೆ ಮಾಡಿ ಕರೆದೊಯ್ಯಲಾಗುತ್ತಿದೆ. ತಿಂಡಿ ವ್ಯವಸ್ಥೆಯನ್ನು ಗ್ರಾಮಸ್ಥರು ಮಾಡಿರುತ್ತಾರೆ.

ದೊಡ್ಡ ಕಟ್ಟಡಗಳ ಮೇಲೆ ಬೀಳುವ ಮಳೆನೀರು ಕೊಯ್ಲು ಕುರಿತು ಜಾಗೃತಿ, ಐದು ಸಾವಿರ ಗಿಡ ನೆಡುವ, ನೆಡಿಸುವ ಆಂದೋಲನ, ಬೀಜದುಂಡೆ ತಯಾರಿ, ಆಯ್ದ ನೂರು ಮಕ್ಕಳಿಗೆ 'ಮಗು–ಪರಿಸರ ಕಾರ್ಯಾಗಾರ,' ರಾಜಾಸ್ಥಾನದ ಜಲತಜ್ಞ ರಾಜೇಂದ್ರಸಿಂಗ್ ಅವರಿಂದ ಅನುಭವ ಕಥನ ಕಾರ್ಯಕ್ರಮ, ದೊಡ್ಡಕೊಂಡಗೊಳವನ್ನು ಮಾದರಿ ಗ್ರಾಮವನ್ನಾಗಿ ರೂಪಿಸಲು ಅಲ್ಲಿ ರಚನಾತ್ಮಕ ಕೆಲಸ ಮಾಡಲು 'ಗ್ರಾಮಸ್ವರಾಜ್' ಗುಂಪು ಸ್ಥಾಪನೆ, ನಿರಂತರ ಸಾಂಸ್ಕೃತಿಕ ಕಾರ್ಯಕ್ರಮಗಳ, ಆಟೋಟಗಳ, ಇಲಾಖೆಗಳ ಯೋಜನೆ ಕುರಿತ ಮಾಹಿತಿ ಕಾರ್ಯಕ್ರಮ ಆಯೋಜನೆ, ಸಾಲುಮರದ ತಿಮ್ಮಕ್ಕನ ಕಾರ್ಯಕ್ರಮ, ಹೀಗೆ ಒಂದು ವರ್ಷವಿಡೀ ನೀರನ್ನು ಕೇಂದ್ರೀಕರಿಸಿ ಪರಿಸರದ ಅನೇಕ ಚಟುವಟಿಕೆಗಳು ಹಾಸನ ಜಿಲ್ಲಾದ್ಯಂತ ಎಡಬಿಡದೇ ನಡೆದಿವೆ. ಜನರು ನೀರಿನ ಸಂಗ್ರಹಣೆಗಾಗಿ ಸರ್ಕಾರವನ್ನು ಪಕ್ಕಕ್ಕಿಟ್ಟು ತಾವೇ ಕೆಲಸ ಮಾಡುವ ವಾತಾವರಣ ನಿರ್ಮಾಣವಾಗುತ್ತಿದೆ. ಇದೆಲ್ಲವೂ 'ಹಸಿರುಭೂಮಿ ಪ್ರತಿಷ್ಠಾನ'ದ ತಂಡಕ್ಕೆ ಸಂತಸ ತಂದಿದೆ. ಈ ಪ್ರಯತ್ನಗಳು ಜಿಲ್ಲಾದ್ಯಂತ ಇನ್ನಷ್ಟು ವ್ಯಾಪಕವಾಗಿ ಪಸರಿಸಿ, ಜನರು ಸ್ವಯಂ ನೀರ ನೆಮ್ಮದಿಯನ್ನು ಕಂಡುಕೊಳ್ಳುವ ಮೂಲಕ ಹಾಸನ ಜಿಲ್ಲೆಯನ್ನು ಸಂಪೂರ್ಣ ಬರ ಮುಕ್ತಗೊಳಿಸಬೇಕೆಂಬುದು ನಮ್ಮ ಆಶಯವಾಗಿದೆ.



**(ಕನ್ನಡದ ಖ್ಯಾತ ಲೇಖಕಿಯೂ ಆಗಿರುವ ರೂಪ ಹಾಸನ 'ಹಸಿರುಭೂಮಿ ಪ್ರತಿಷ್ಠಾನ'ದ ಸಂಘಟನಾ ಕಾರ್ಯದರ್ಶಿಯೂ ಆಗಿದ್ದಾರೆ)**

## ನವಿಲುಗರಿ

## ಎಚ್.ಎಸ್. ಶಿವಪ್ರಕಾಶ ಅವರ ಎರಡು ಕವಿತೆಗಳು :

### ಯಾಕೆ ಕವಿತೆ ಬರೆಯುವೆ?



ಹೋಗು ಕೇಳು ಗಾಳಿಯನ್ನು
ಯಾಕೆ ನೀನು ಬೀಸುವೆ
ಹೋಗಿ ಕೇಳು ಬೆಂಕಿಯನ್ನು
ಯಾಕೆ ಉರಿಯುವೆ
ಮೋಡ ಯಾಕೆ ತೇಲುವುದು
ಹೋಗು ಕೇಳಿ ಬಾ
ಕಾಡು ಹಸಿರ ತೊಡುವುದೇಕೆ
ಹೋಗು ಕೇಳಿ ಬಾ
ಮಂಜುಗಡ್ಡೆ ಕರಗುವುದು
ಬಂಡೆಗಲ್ಲು ಬಿರಿಯುವುದು
ಮೊಗ್ಗು ಹೂವಾಗುವುದು
ಸಿಗ್ಗು ಕೆಂಪಾಗುವುದು
ಇನ ಚಂದ್ರರ ಮೂಡುಮುಳುಗು
ಮಳೆಗಾಲದ ಸಿಡಿಲುಗುಡುಗು
ಯಾಕೆ ಯಾಕೆ ಯಾಕೆ ಯಾಕೆ
ಕೇಳಿಕೊಂಡು ಬಾ



ಕಡಲಲೆಗಳು ಸುಯ್ಯುಡುವವು
ಯಾಕೆ ನೆಲದ ಸೋಕಿಗೆ
ಮೈಯಿ ಬಯಸಿ ಬೀಳುವುದು
ಅನಂಗನ ಬೆಂಕಿಗೆ
ಜೀವಾತ್ಮ ತುಡಿಯುವುದು
ನೀಲಿನಾಡ ತವರಿಗೆ
ಅವನೆಲ್ಲ ಯಾಕೆ ಅಂತ ಕೇಳಿಕೊಂಡು
ಉತ್ತರಗಳ ತಿಳಿದುಕೊಂಡು
ನನಗೆ ತಿಳಿಸು ಬಾ

ಆ ಎಲ್ಲ ಉತ್ತರಗಳ ಕೇಳಿ
ಅರಿತುಕೊಂಡ ಮೇಲೂ
ನಾನು ನಿನಗೆ ಹೇಳಲಾರೆ
ನಾನ್ಯಾಕೆ ಕವಿತೆ ಬರೆಯುವೆ
ನಾ ನಿರುತ್ತರ
ನಾ ಅನುತ್ತರ

### ೨. ಆಸಿಫಾಗೆ



ಚಿತ್ರಗಳು : ಸಂಘಮಿತ್ರೆ

ದಂಡಿಗ್ಹೋದ ಸವಾರರೆಲ್ಲ ಮನೆಗೆ ತಿರುಗಿಬರುವರು
ತಮ್ಮ ತಮ್ಮ ಕುದುರೆ ಜೋಡಿ
ಒಂದಲ್ಲ ಒಂದು ದಿವಸ

ಕಡಲಿಗ್ಹೋದ ಬೆಸ್ತರೂ ತಿರುಗಿಬರುವರು
ತಮ್ಮತಮ್ಮ ಮನೆಗೆ
ತಮ್ಮ ತಮ್ಮ ದೋಣಿಯಲ್ಲಿ
ಒಂದಲ್ಲ ಒಂದು ದಿವಸ

ಕುದುರೆ, ದನ, ಕುರಿಯ ಹಿಂಡು ಮೇವಿಗಾಗಿ
ಹೊಲ_ ಕಾಡಿಗೆ ಹೋದವೆಲ್ಲ
ತಿರುಗಿ ಮನೆಗೆ ಬರುವವು
ಒಂದಲ್ಲ ಒಂದು ದಿವಸ

ತನ್ನ ಕುದುರೆ ಮೇಸಲೆಂದು
ಕಾಡಿಗ್ಹೋದ ಪುಟ್ಟಿ ತಿರುಗಿ ಬಾರಳೆ
ಒಂದಲ್ಲ ಒಂದು ದಿವಸ
ಕುದುರೆಗಳು ಮನೆಗೆ ತಿರುಗಿ ಬಂದಮೇಲೂ?

ಶಾಲೆಗೆಂದು ಹೋದ ಹುಡುಗಿ,
ಸಾಕುನಾಯ ಕೂಡಿಕೊಂಡು ವಾಕಿಂಗಿಗೆ ಹೋದ ಹುಡುಗಿ
ತಿರುಗಿ ಬಾರರೆ
ನಾಯಿ ಮನೆಗೆ ಬಂದ ಮೇಲೂ?

ಎಚ್ಚರಾಗು

ಎಚ್ಚರಾಗು ನಿದ್ದೆ ಹೋದ ನೆಲದ ತಾಯಿ
ನಿನ್ನ ಕಾಡು ನಾಡಿನಲ್ಲಿ
ಎಳೆಯದಾದ ಎಲ್ಲವನ್ನು ಚಲುವಾದ ಎಲ್ಲವನ್ನು
ಕಾಲಿನಿಂದ ಹೊಸಕಿಹಾಕಿ,
ಕೈಗಳಿಂದ ತರಿದು ತರಿದು
ಉಗುರಿನಿಂದ ಸಿಗಿಗದು ಬಗೆದು
ಹಲ್ಲಿನಿಂದ ಅಗಿದುಜಗಿದು ತಿನ್ನುವಂಥ
ಹೊಸರಾಕ್ಷಸನೊಬ್ಬ ನುಸುಳಿ
ಹೊಂಚು ಹಾಕುತಿರುವನು

ನಮ್ಮೆದೆಗಳ ಮಷಾಣದಲ್ಲಿ ಹೂತು ಹೋದ ನೆಲದ ತಾಯೆ
ಮರುಜನ್ಮದ ಗಳಿಗೆ ನಿನಗೆ ಬಂದಿರುವುದು.

(ಅಸೀಫಾ ಇತ್ತೀಚೆಗೆ ಜಮ್ಮುವಿನಲ್ಲಿ ಸಾಮೂಹಿಕ ಅತ್ಯಾಚಾರ, ಹತ್ಯೆಗೀಡಾದ ಬಾಲೆ)

### ದೇವರಾಣೆಗೂ ಹೇಳುವುದೆಲ್ಲ ಸತ್ಯ!



ಅವಸರದಲ್ಲೊಂದು ಗುಳಿಗೆ ನುಂಗಿ
ಐನೂರರ ನೋಟು ಪರ್ಸಿಗೆ ತುರುಕಿ
ಇನ್ನೇನೂ ನಿಕಾಲೆ ಆದೀತು ಬಿಡಿ
ಎಂಬ ಆಕಾರ ಧರಿಸಿದ ಕೋಟಿಗೆ
ಎಷ್ಟು ಒಳಕೊಸೆಗಳಿರಬಹುದು?

ಬಣ್ಣಗೆಟ್ಟ ಸಣ್ಣ ಹಾಲಲ್ಲಿ
ಸೆಕೆ ತಾಳದ ಒಬ್ಬಾಕೆ ಬುರಕಾ ಎತ್ತಿ
ನಿಟ್ಟಿಸಿರು ಬಿಟ್ಟಳು!
ಮೂರು ಬಾರಿ ಒದರಿದರೂ ಬಾರದ್ದರಿಂದ
ಅಧಿಪತಿ ರೇಗಿ ಒಳಗೆದ್ದು ಹೋಗಿ ಬಿಟ್ಟಿದ್ದೆಷ್ಟು ಸಲವೋ!
ಮಠಿಸ್ವಾಮಿಗಳಂತೆ ಕಿರಿಯರು 'ಮದ್ಯಾಣ
ಬರ್ರಿ' ಎಂದಾಗ ಬುರಕಾ ಧರಿಸಿದ ಹೆಣ್ಣು
'ದೂರಿಂದ ಬಂದೀನಿ. ಇಲ್ಲೇ ಕೂಡತೇನಿ'
ಎಂದು ಗಿಡದ ಬುಡದಲ್ಲಿ ಎಷ್ಟು ಸಾರಿ
ಬುತ್ತಿಗಂಟು ಬಿಚ್ಚಿ ಉಂಡಿದ್ದಳೋ?

ಸೋರುವ ಮಾಳಿಗೆ ಟಪಟಪ ಟೇಪಿಸುವ ಸದ್ದು
ಬರೇ ಮುದ್ದತ್ತು ಹಾಕಿಸಿ ಗದ್ದುಗೆಗೆ ಕೈಮುಗಿದು ಹೊರಟವರ
ನಂಬಿಕೆಟ್ಟು ಹಿಂಬಾಲು ಬಿದ್ದು ಚಾ ಮತ್ತು ಗಿರ್ಮಿಟ್ಟು
ಎದ್ದು ಹೋದವರು ತಿಂದದ್ದರ ಬಿಲ್ಲು ಕೊಟ್ಟು
ಮುಗಳ್ನಗೆಯನ್ನು ಉದ್ದರಿ ಪಡೆದು ನಡೆದು

ಹೀಗೆ ಪವಾಡದಂತೊಮ್ಮೆ ಗೆದ್ದುಬಿಟ್ಟಾಗ
ರಕ್ತದೊತ್ತಡವೇರಿ ಅಬ್ಬಾ! ಎಂದೆ ಕೊಂಚ ತಾಳಿ
'ಉಡಾಫೆ ಬೇಡ. ಮೆಲ್ಲನವಿ ಹಕ್ಕು ಇರ್ತದ
ಒಂದು ಹುಳಕ್ಕೂ!' ಕಲ್ಲೊಗಿಸಿಕೊಂಡ ಕೊಳ
ಗುಳುಗುಳು... ಮಾಡಿ ಮತ್ತೆ ಸ್ತಬ್ಧಗೊಂಡಿತು.

–ಕಮಲಾ ಹೆಮ್ಮಿಗೆ

# ಸಾಹಿತ್ಯ–ಸಂಸ್ಕೃತಿ–ರಾಜಕಾರಣ ಇತ್ಯಾದಿ : ಕೆಲವು ಟಿಪ್ಪಣಿಗಳು

–ಡಿಎಸ್ಸೆನ್

## ಮತ್ತೆ ‘ಸುದ್ದಿ’ಯಾಗಿರುವ ಸಿದ್ಧಲಿಂಗಯ್ಯ



**ಈ** ಹಿಂದೆ ಯಡಿಯೂರಪ್ಪನವರನ್ನು ‘ಆಧುನಿಕ ಬಸವಣ್ಣ’ ಎಂದು ಕರೆದರೆಂಬ ವರದಿಯ ಸಂಬಂಧವಾಗಿ ‘ಸುದ್ದಿ’ಯಾಗಿದ್ದ ಸಿದ್ಧಲಿಂಗಯ್ಯ ಈಗ ಮತ್ತೆ ಸುದ್ದಿಯಲ್ಲಿದ್ದಾರೆ. ಅವರು ಬಿಜೆಪಿಯ ರಾಷ್ಟ್ರೀಯ ಅಧ್ಯಕ್ಷ ಅಮಿತ್‌ಶಾರನ್ನು ಮನೆಯೊಳಕ್ಕೆ ಬಿಟ್ಟುಕೊಂಡದ್ದಕ್ಕಾಗಿ ಈಗವರ ಮೇಲೆ ಟೀಕೆಗಳ ಸುರಿಮಳೆಯೇ ಆಗುತ್ತಿದೆ. ಆದರೆ ನನ್ನ ಪ್ರಕಾರ ಈ ಸಂದರ್ಭಧ ನಿಜವಾದ ಸುದ್ದಿ ಎಂದರೆ, ಈ ಟೀಕೆಗಳಿಂದ ನೊಂದಿರುವ ಸಿದ್ಧಲಿಂಗಯ್ಯ ತಮ್ಮ ಸ್ವಭಾವಕ್ಕೆ ವಿರುದ್ಧವಾಗಿ ತಮ್ಮ ಈ ಟೀಕಾಕಾರರ ಮೇಲೆ ‘ನೀವು ಮನುಷ್ಯರಾ?’ ಎಂದು ಹರಿಹಾಯ್ದಿರುವುದು. ಅವರ ಪ್ರಕಾರ, ಮನೆಗೆ ಬರುತ್ತೇನೆ ಎಂದವರಿಗೆ ಬರಬೇಡಿ ಎಂದು ಹೇಳುವುದು ಅಸಭ್ಯತೆ ಆದೀತು.

ಒಂದು ವರ್ಷದ ಹಿಂದೆ ಪೇಜಾವರ ಶ್ರೀಗಳು ತುಮಕೂರಿಗೆ ಬಂದಾಗ ಕವಿಮಿತ್ರ ಕೆ,ಬಿ. ಸಿದ್ಧಯ್ಯನವರ ಮನೆಗೆ ಹೋಗಿ ‘ಆತಿಥ್ಯ’ ಸ್ವೀಕರಿಸಿ ಬಂದಿದ್ದರು. ನಾನೊಮ್ಮೆ ಸಿದ್ದಯ್ಯನವರನ್ನು ಈ ಬಗ್ಗೆ ಪ್ರಶ್ನಿಸಿದಾಗ ಅವರೂ ನೀಡಿದ್ದು ಈ ಸಭ್ಯತೆಯ ಕಾರಣವನ್ನೇ. ನಿಜ, ಮನೆಗೆ ಬರುತ್ತೇನೆಂದವರು ಶತ್ರುಗಳೇ ಆಗಿದ್ದರೂ ಬೇಡ ಎಂದು ಹೇಳುವುದು ಸಭ್ಯತೆ ಅಲ್ಲ. ಆದರೆ ಪ್ರಶ್ನೆ ಇವರೆಲ್ಲ ಇವರ ಮನೆಗಳನ್ನೇ ಆಯ್ಕೆ ಮಾಡಿಕೊಂಡು ಏಕೆ ಬರುತ್ತಾರೆ ಎಂಬುದು!

ಇದಕ್ಕಿಂತ ಮುಖ್ಯವಾಗಿ ಇಂತಹ ಸಂದರ್ಭಗಳಲ್ಲಿ ನಾವು ಕೇಳಿಕೊಳ್ಳಬೇಕಾದ ಬಹುಮುಖ್ಯ ಪ್ರಶ್ನೆ ಎಂದರೆ, ರಾಜ್ಯದ ದಲಿತ ಚಳುವಳಿಯ ಬಹುತೇಕ ನಾಯಕರು ಏಕೆ ಹೀಗೆ ವಿವಿಧ ಪಕ್ಷಗಳ ಬಾಲಬಡುಕರಾಗುವ ಪರಿಸ್ಥಿತಿ ಉಂಟಾಯಿತು? ಇದಕ್ಕೆ ನಮ್ಮ ದಲಿತ ಚಳುವಳಿ ತನ್ನ ಹುಟ್ಟು ಮತ್ತು ಬೆಳವಣಿಗೆಯ ತಾರ್ಕಿಕ ಅಂತ್ಯ ಕಂಡುಕೊಳ್ಳಲಾಗದ ದುರಂತವೇ ಕಾರಣವೇ? ಇದಕ್ಕೆ ಯಾರೆಲ್ಲ ಹೊಣೆ?

ಜೊತೆಗೆ ಸಿದ್ಧಲಿಂಗಯ್ಯನವರನ್ನು ಟೀಕಿಸುವ ಜನಕ್ಕೆ ಗೊತ್ತಿರಬೇಕಾದ ಒಂದು ಸಂಗತಿ ಎಂದರೆ ಬಹುಶಃ ಪ್ರಕಾಶ್ ಅಂಬೇಡ್ಕರ್ ಅವರ ಹೊರತಾಗಿ ರಾಷ್ಟ್ರದ ಬಹುತೇಕ ದಲಿತ ನಾಯಕರು ಇಂದು ಬಿಜೆಪಿ ಜೊತೆಗಿದ್ದಾರೆ! ಏಕೆ?

## ಶಿವಮೊಗ್ಗದಲ್ಲಿ ರಂಗೋತ್ಸವ-೨೦೧೮



**ಶಿ**ವಮೊಗ್ಗದ ರಂಗಾಯಣ ಏಪ್ರಿಲ್ ೧೪ರಿಂದ ಏಳು ದಿನಗಳ ಕಾಲ ‘ವಿಶ್ವಮಾನವ ಅಂತಾರಾಷ್ಟ್ರೀಯ ರಂಗೋತ್ಸವ–೨೦೧೮’ನ್ನು ಏರ್ಪಡಿಸಿತ್ತು. ಅಷ್ಟೂ ದಿನ ಮಹಿಳಾ ಏಕವ್ಯಕ್ತಿ ಪ್ರದರ್ಶನ, ಮಕ್ಕಳ ಚಲನಚಿತ್ರ ಮತ್ತು ಬಹುಭಾಷಾ ಮತ್ತು ಬಹು ಪ್ರಕಾರಗಳ ರಂಗ ಪ್ರದರ್ಶನ ಮತ್ತು ರಂಗಚರ್ಚೆಗಳನ್ನು ಏರ್ಪಡಿಸಿತ್ತು. ಈ ಉತ್ಸವದ ಸಂಜೆಯ ನಾಟಕಗಳ ಪೈಕಿ ನಾನು ನೋಡಿದ ಐದು ನಾಟಕಗಳ ಪೈಕಿ ಮೂರರ ಬಗ್ಗೆ ಮಾತ್ರ ನಾನಿಲ್ಲಿ ಬರೆಯುತ್ತಿದ್ದೇನೆ. ಅವುಗಳಲ್ಲಿ ಮೊದಲನೆಯದು ರಂಗಾಯಣದ ನಿರ್ದೇಶಕರೂ ಆಗಿರುವ ಡಾ. ಎಂ. ಗಣೇಶ್ ಅವರು ಸಂಸ್ಥೆಯ ಅಧಿಕೃತ ರಂಗತಂಡ (*ರೆಪರ್ಟರಿ*)ಕ್ಕಾಗಿ ನಿರ್ದೇಶಿಸಿದ ಮೋಹನ ರಾಕೇಶ್ ಅವರ ಬಹು ಜನಪ್ರಿಯ ನಾಟಕ (ಮತ್ತು ಸಿದ್ಧಲಿಂಗ ಪಟ್ಟಣಶೆಟ್ಟಿಯವರು ಬಹು ಸೊಗಸಾಗಿ ಕನ್ನಡಕ್ಕೆ ತಂದಿರುವ) ‘ಆಷಾಢದ ಒಂದು ದಿನ’. ಕಾಳಿದಾಸನ ಒಂದು ಪ್ರೇಮ ಕಥಾನಕದ ದುರಂತವನ್ನು ಹಲವು ಬಹು ಸೂಕ್ಷ್ಮ ನೆಲೆಗಳಿಂದ



ಅರ್ಥೈಸುವ ಪ್ರಯತ್ನ ಮಾಡುವ ಈ ನಾಟಕ ಆ ಸೂಕ್ಷ್ಮಗಳೆಲ್ಲ ಹಿನ್ನೆಲೆಗೆ ಸರಿಯುವಂತಹ ಅಬ್ಬರದ ನಿರೂಪಣೆಯಿಂದಾಗಿ ತನ್ನ ನವಿರನ್ನೆಲ್ಲ ಕಳೆದುಕೊಂಡು ಬಹುಸ್ಥೂಲವಾಗಿ ನಿರೂಪಿತವಾಯಿತು. ಇದಕ್ಕೆ ನಟನಾ ತಂಡದ ಸೀಮಿತ ಪ್ರತಿಭೆಯಷ್ಟೇ ಕಾರಣವಿರಲಾರದೆಂದು ನನಗೆ ಅನಿಸಿದ್ದು, ಸಾಮಾಜಿಕ ಕಾಳಜಿಗಳ ಬಗೆಗಿನ ವಿಶೇಷ ಆಸ್ಥೆಯಿಂದ ಅಂತಹ ನಾಟಕಗಳನ್ನು ಸಮರ್ಥವಾಗಿ ನಿರ್ದೇಶಿಸುವ ಗಣೇಶ್ ಅವರಿಗೆ ಅವರ ಈ ವಿಶೇಷ ಆಸ್ಥೆಯೇ ಇಂತಹ ನಾಟಕಗಳ ಸೂಕ್ಷ್ಮ ಆಳಗಳನ್ನು ಅರಿತು ರಂಗವ್ಯಾಖ್ಯಾನ ಮಾಡುವಾಗ ತೊಡಕನ್ನುಂಟು ಮಾಡಿರಬಹುದು ಎಂಬ ಸಂದೇಹದಿಂದಾಗಿ.

ಆದರೆ ಒಂದೆರಡು ದಿನಗಳ ನಂತರ ಅವರೇ ತಮ್ಮ ‘ಸತ್ಯಶೋಧನ’ ರಂಗ ಸಮುದಾಯಕ್ಕಾಗಿ ನಿರ್ದೇಶಿಸಿದ ‘ಕುರುಕ್ಷೇತ್ರ’ (ಮೂಲ: ಬಿ.ಪುಟ್ಟಸ್ವಾಮಯ್ಯ) ಕಂಪನಿ ನಾಟಕವನ್ನು ನೋಡಿದಾಗ ನನಗೆ ಗಣೇಶ್ ತಮ್ಮ ಈ ತೊಡಕನ್ನು ಪರಿಹರಿಸಿಕೊಳ್ಳಬಲ್ಲರೆಂಬ ಆಸೆ ಹುಟ್ಟಿದ್ದಂತೂ ನಿಜ! ನಮ್ಮ ರಂಗಭೂಮಿ ಚರಿತ್ರೆಯ ಕಳೆದೇ ಹೋಗಿರುವ ಒಂದು ಅಧ್ಯಾಯವನ್ನು ಅದರೆಲ್ಲ ವರ್ಣ–ವೈಭವಗಳೊಂದಿಗೆ ರಂಗದ ಮೇಲೆ ಯಶಸ್ವಿಯಾಗಿ ತಂದ ಈ ಪ್ರಯೋಗ ಹಿಂದೊಮ್ಮೆ ಪ್ರಯೋಗವನ್ನು ನೋಡಿದ್ದಾಗ ನನ್ನಲ್ಲಿ ಹುಟ್ಟಿದ್ದ ಅದೇ ಪ್ರಶ್ನೆಗಳು ಇನ್ನಷ್ಟು ಸ್ಫುಟವಾಗಿ ಮೂಡಿದವು. ಈ ರಂಗರೂಪವನ್ನು ಬಹುಸ್ಥೂಲವೆಂದು ಸಾರಾಸಗಟಾಗಿ ತಿರಸ್ಕರಿಸಿ ಅಲ್ಲಿಂದ ಕಡಿದುಕೊಂಡ ಬಂದಿರುವ ನಾವು ಆಧುನಿಕ ರಂಗಭೂಮಿಯ ಆರಾಧಕರು ಬಹು ದೊಡ್ಡ ತಪ್ಪು ಮಾಡಿದ್ದೇವಲ್ಲವೆ?ಇಂದು ಈ ಆಧುನಿಕ ರಂಗಭೂಮಿ ಎದುರಿಸುತ್ತಿರುವ ನಾಟಕ ರಚನೆ ಮತ್ತು ಜನದೂರತೆಯ ಬಿಕ್ಕಟ್ಟುಗಳ ಮೂಲ ಇಲ್ಲೇ ಇರಬಹುದೇ? ಈ ಪ್ರದರ್ಶನ ನೋಡಿ ನನಗಾದ ಖುಷಿಗೆ ಇನ್ನೊಂದು ಕಾರಣವೆಂದರೆ ಈ ತಂಡದ ನಟ–ನಟಿಯರ ರಂಗಕೌಶಲ್ಯಗಳು ಮತ್ತು ಅವರ ಅರ್ಪಣಾ ಮನೋಭಾವ. ಇಂತಹ ತಂಡಗಳಿರುವವರೆಗೆ ನಮ್ಮ ರಂಗಭೂಮಿ ತನ್ನ ಚರಿತ್ರೆಯ ನೆನಪುಗಳನ್ನು ಕಳೆದುಕೊಳ್ಳಲಾರದು.

ಇದೆಲ್ಲದಕ್ಕೆ ಸಾಕ್ಷಿ ಎಂಬಂತೆ ಪ್ರದರ್ಶಿತವಾದದ್ದು ಕೇರಳದ ‘ಲೋಕಧರ್ಮಿ’ ತಂಡ ಚಂದ್ರದಾಸನ್ ನಿರ್ದೇಶನದ ಭಾಸ ವಿರಚಿತ ಕರ್ಣಾಭಾರಂನ ಮಲೆಯಾಳಿ ರೂಪ. ಕೇರಳ ರಂಗಭೂಮಿ ತನ್ನ ಸಾಂಸ್ಕೃತಿಕ ಪರಂಪರೆಯಿಂದ ಎಷ್ಟನ್ನೆಲ್ಲ, ಹೇಗೆಲ್ಲ ಹೀರಿಕೊಂಡು ಸಮೃದ್ಧವಾಗಿ ಬೆಳೆದಿದೆ ಎಂಬುದರ ಪ್ರಾತ್ಯಕ್ಷಿಕೆಯಂತಿತ್ತು ಈ ಪ್ರದರ್ಶನ, ಕಥಕ್ಕಳಿ, ಕಲರಿಪಟ್ಟು, ಮೋಹಿನಿಯಾಟ್ಟಂ ಮುಂತಾದ ಪಾರಂಪರಿಕ ರಂಗ ಕಲೆಗಳನ್ನು ಈ ನಾಟಕದ ಅಭಿನಯ ಸಮೃದ್ಧಿಗೆ ಮಾತ್ರವಲ್ಲ, ದೊಂದಿ ಬೆಳಕಿನ ’ದೃಶ್ಯ ಸಂಯೋಜನೆ ಮತ್ತು ಸಂಗೀತಕ್ಕೂ ಬಳಸಿಕೊಂಡು ಕರ್ಣನ



(೧೮ನೇ ಪುಟಕ್ಕೆ

ಧರ್ಮ ವಿಚಾರ

# ಬುದ್ಧನ ಐದು ಕಥೆಗಳು

## ದಾರಿ ಕೇಳುವವರು

ಭಗವಾನ್ ಬುದ್ಧ ರಾಜಗೃಹದಲ್ಲಿ ಧರ್ಮೋಪದೇಶ ಮಾಡುತ್ತಿದ್ದಾಗ ವೇಸಾಲಿ ನಗರದ ವಣಿಜನೊಬ್ಬ ಕುತೂಹಲದಿಂದ ಆ ಉಪದೇಶ ಕೇಳಲು ಹೋದ. ಬುದ್ಧಗುರುವಿನ ಉಪದೇಶ ಅವನ ಮನತಟ್ಟಿತು. ಆದರೆ ಅವನ ಮನಸ್ಸಿನಲ್ಲಿ ಒಂದು ಸಂದೇಹವೂ ಹುಟ್ಟಿತು. ಅದನ್ನು ಪರಿಹರಿಸಿಕೊಳ್ಳಲು ಅವನು ಪ್ರವಚನದ ನಂತರ ಬುದ್ಧನಲ್ಲಿ ಹೋಗಿ ತನ್ನ ಸಂದೇಹವನ್ನು ಅರುಹಿದ : 'ತಮ್ಮ ಉಪದೇಶ ಕೇಳಿ ನನಗೂ ನಿರ್ವಾಣದ ಹಂಬಲ ಉಂಟಾಗಿದೆ, ಆದರೆ ನಿಮ್ಮ ಮಾತುಗಳನ್ನು ಕೇಳಲು ನೂರಾರು ಜನ ಬರುತ್ತಾರೆ. ಅವರೆಲ್ಲರೂ ನಿರ್ವಾಣಕ್ಕೆ ಹೋಗುತ್ತಾರೆಯೇ? ಹಾಗಿಲ್ಲದಿದ್ದರೆ ನಿಮ್ಮ ಪ್ರವಚನವೆಲ್ಲ ವ್ಯರ್ಥವಲ್ಲವೆ?' ಬುದ್ಧ ಮುಗುಳ್ನಕ್ಕು, 'ನೀವು ಎಲ್ಲಿಂದ ಬಂದಿದ್ದೀರಿ?' ಎಂದು ಕೇಳಿದ. ಅದಕ್ಕೆ ಆ ವಣಿಜ 'ಈ ಭೂಮಿಯ ಮೇಲಿನ ಅತಿ ಸುಂದರ ನಗರವೆನ್ನಿಸಿರುವ ವೇಸಾಲಿಯಿಂದ!' ಎಂದು ಉತ್ತರಿಸಿದ. ಆಗ ಬುದ್ಧನು 'ಆ ನಗರವನ್ನು ನೋಡುವ ಬಯಕೆಯಿಂದ ಬಹಳ ಜನ ಅದರ ದಾರಿಯನ್ನು ತಿಳಿಯಲು ನಿಮ್ಮಲ್ಲಿಗೆ ಬರುತ್ತಾರಲ್ಲವೇ?' ಎಂದು ಕೇಳಿದ. ವಣಿಜ ಹೌದೆಂದ. ಆಗ ಬುದ್ಧ ಪ್ರಶ್ನಿಸಿದ: 'ನಿಮ್ಮಲ್ಲಿಗೆ ದಾರಿ ಕೇಳಿಕೊಂಡು ಬಂದವರೆಲ್ಲರೂ ವೇಸಾಲಿಗೆ ಹೋಗಿ ಬರುತ್ತಾರೆಯೇ?' ಅದಕ್ಕೆ ವಣಿಜನೆಂದ: 'ಅಯ್ಯೋ ಅದೆಲ್ಲಿ ಸಾಧ್ಯ? ದಾರಿ ಬಹಳ ಕಠಿಣ. ನೂರರಲ್ಲಿ ಒಬ್ಬ ಹೋಗಿ ಬರಬಹುದು.' ಆಗ ಬುದ್ಧ ಕೇಳಿದ : 'ಆದರೆ ದಾರಿ ಕೇಳಿಕೊಂಡು ಬಂದವರಿಗೆಲ್ಲ ನೀವು ದಾರಿ ತಿಳಿಸುವುದಿಲ್ಲವೆ?' ಆಗ ವಣಿಜ ಹೇಳಿದ : 'ಅದು ನನ್ನ ಸುಂದರ ನಗರ. ಹೇಳಿಯೇ ಹೇಳುತ್ತೇನೆ.' ಆಗ ಬುದ್ಧನೆಂದ: 'ನಿರ್ವಾಣವೆಂಬುದು ನಾನು ಕಂಡುಕೊಂಡ ಸುಂದರ ನಗರ. ಅದರ ದಾರಿ ಬಯಸಿ ಬಂದವರಿಗೆ ಅದನ್ನು ನಾನು ಹೇಳುವೆ. ಹೋಗುವುದು ಬಿಡುವುದು ಅವರಿಗೆ ಬಿಟ್ಟದ್ದು.' ಸಂದೇಹ ಪರಿಹಾರವಾದ ಸಮಾಧಾನದಲ್ಲಿ ವಣಿಜ ಬುದ್ಧಗುರುವಿನ ಪಾದಕ್ಕೆರಗಿದ.

## ಮನಸ್ಸಿನ ಬೇಸಾಯ

ಭಗವಾನರು ಒಮ್ಮೆ ಸುಗ್ಗಿ ಕಾಲದಲ್ಲಿ ಭಾರದ್ವಾಜ ಎಂಬ ಶ್ರೀಮಂತ ಬ್ರಾಹ್ಮಣನೊಬ್ಬನ ಕಣಕ್ಕೆ ಬಂದು ಭಿಕ್ಷಾ ಪಾತ್ರೆಯನ್ನು ಮುಂದೊಡ್ಡಿದ. ಇದನ್ನು ಕಂಡು ಸಿಟ್ಟಾದ ಭಾರದ್ವಾಜನು, 'ಉತ್ತಿ ಬಿತ್ತಿ ಬೆಳೆದವನಿಗೆ ಮಾತ್ರ ಕಾಳು ಪಡೆಯುವ ಹಕ್ಕಿರುತ್ತದೆ. ಹೋಗು ನೀನೂ ದುಡಿದು ಕಾಳು ಪಡೆ' ಎಂದು ಶಪಿಸಿದ. ಆಗ ಬುದ್ಧನು ಭಾರದ್ವಾಜನತ್ತ ಕರುಣಾಪೂರಿತ ದೃಷ್ಟಿ ಬೀರಿ, 'ಬ್ರಾಹ್ಮಣ, ನಾನೂ ಉತ್ತಿ ಬಿತ್ತುವ ಕೆಲಸವನ್ನೇ ಮಾಡುತ್ತಿರುವುದು. ನಾನು ಜನರ ಮನಸ್ಸನ್ನು ವಿಚಾರದಿಂದ ಉತ್ತು ಜ್ಞಾನದ ಬೀಜ ಬಿತ್ತಿ ಧರ್ಮದ ಬೆಳೆ ತೆಗೆಯುತ್ತೇನೆ. ನನ್ನ ಈ ಬೇಸಾಯವಿಲ್ಲದೆ ನಿನ್ನ ಬೇಸಾಯದ ಫಲ ನಿನಗೆ ದಕ್ಕದು' ಎಂದ. ಬುದ್ಧ ಹೇಳಿದ ಸತ್ಯವನ್ನು ಅರಿತ ಭಾರದ್ವಾಜ ಬುದ್ಧನಿಗೆ ನಮಸ್ಕರಿಸಿ ಸೂಕ್ತ ಭಿಕ್ಷೆ ನೀಡಿ ಗೌರವದಿಂದ ಬೀಳ್ಕೊಟ್ಟ.

## ಎಷ್ಟು ಬಗೆಯ ಕಾಮನೆಗಳೋ ಅಷ್ಟು ಬಗೆಯ ಮೃತ್ಯುಗಳು!

ತಿಸ್ಸನೆಂಬ ಬುದ್ಧನ ಶಿಷ್ಯನಿಗೆ ಭಿಕ್ಷಾ ರೂಪದಲ್ಲಿ ದಪ್ಪ ಗಾತ್ರದ ಉಣ್ಣೆಯ ಹೊದಿಕೆ ದೊರೆಯಿತು. ಅದು ಒರಟಾದ ಹೊದಿಕೆಯಾಗಿದ್ದರಿಂದ ತಿಸ್ಸನಿಗೆ ಅದು ಇಷ್ಟವಾಗಲಿಲ್ಲ. ಅದೇ ಹಳ್ಳಿಯಲ್ಲಿ ಅವನ ತಂಗಿಯೊಬ್ಬಳು ವಾಸಿಸುತ್ತಿದ್ದಳು. ತಿಸ್ಸನು ಆ ಭಿಕ್ಷೆಯನ್ನು ತನ್ನ ಆ ತಂಗಿಗೆ ನೀಡಿದ. ಅವಳು ಅದನ್ನು ಬಿಚ್ಚಿ ಅದರ ನೂಲಿನಿಂದ ತನಗಾಗಿ ಒಳ್ಳೆಯ ಹೊದಿಕೆಯನ್ನು ಸಿದ್ಧಪಡಿಸಿ ಹಿಂದಕ್ಕೆ ತಂದುಕೊಡುವಳು ಎಂದು ಅವನು ಮನದಲ್ಲೇ ಕಲ್ಪಿಸಿಕೊಂಡು ಒಳಗೊಳಗೇ ಹಿಗ್ಗುತ್ತಿದ್ದ.

ಕೆಲವು ದಿವಸಗಳಾದ ಮೇಲೆ ಒಂದು ಸಂಜೆ ಆ ತಂಗಿಯು ಒಂದು ಒಳ್ಳೆಯ ಹೊದಿಕೆಯನ್ನು ನೇಯ್ದು ತಂದಳು. ಅದನ್ನು ಕಂಡ ತಿಸ್ಸನ ಮನಸ್ಸು ಹಿಗ್ಗಿ ಕುಣಿಯಲಾರಂಭಿಸಿತು. ಇದು ಭಿಕ್ಖುಗಳ ಬಳಿ ಇರಲಿ, ಬುದ್ಧನ ಬಳಿಯೂ ಇರಲಾರದೆಂದು ಹರ್ಷಿಸುತ್ತಾ ಅದನ್ನು ಗೋಡೆಗೆ ನೇತು ಹಾಕಿದ. ತನ್ನ ಸಹಭಿಕ್ಖುಗಳು ಅದನ್ನು ಕದ್ದಾರು ಎಂಬ ಸಂದೇಹದಿಂದ 'ರಾತ್ರಿಯಿಡೀ ಅವನಿಗೆ ನಿದ್ದೆ ಬರಲಿಲ್ಲ.' ನಡುರಾತ್ರಿಯಲ್ಲಿ ಎರಡು ಮೂರು ಸಲ ಹಾಸಿಗೆಯಿಂದೆದ್ದು ತನ್ನ ಹೊದಿಕೆಯ ಮೇಲೆ ಕೈಯಾಡಿಸಿ ಹೊದಿಕೆಯು ಇಟ್ಟ ಜಾಗದಲ್ಲೇ ಇರುವುದೇ ಎಂದು ಖಾತರಿ ಪಡಿಸಿಕೊಳ್ಳುತ್ತಿದ್ದ. ಅಂದು ರಾತ್ರಿ ಒಂದು ಆಕಸ್ಮಿಕ ಸಂಭವಿಸಿತು. ಅಂದು ರಾತ್ರಿಯೇ ತಿಸ್ಸನು ದೇಹತ್ಯಾಗ ಮಾಡಿದ. ಸಾಯುವ ಮುನ್ನ ಅವನಿಗೆ ತನ್ನ ಹೊದಿಕೆಯ ಬಗ್ಗೆ ವಿಪರೀತ ವ್ಯಾಮೋಹವಿದ್ದ ಕಾರಣ ಸತ್ತ ಕೂಡಲೆ ಒಂದು ತಿಗಣೆಯ ಜನ್ಮ ಪಡೆದು ತನ್ನ ಹೊದಿಕೆಯೊಳಗೇ ಸೇರಿಕೊಂಡ.

ಮರುದಿನ ಸಂಗಡಿಗರಾದ ಭಿಕ್ಖುಗಳು ಅವನ ಶವಸಂಸ್ಕಾರ ಮಾಡಿ ಅವನ ಹೊದಿಕೆಗಳನ್ನು ತಮ್ಮ ತಮ್ಮಲ್ಲೇ ಹಂಚಿಕೊಳ್ಳತೊಡಗಿದರು. ಯಾವುದೇ ಭಿಕ್ಖು ತೀರಿಕೊಂಡರೆ ಅವನ ಪದಾರ್ಥಗಳನ್ನು ಉಳಿದ ಭಿಕ್ಖುಗಳು ಹಂಚಿಕೊಳ್ಳಬೇಕು ಎಂಬುದು ಸಂಘದ ನಿಯಮವಾಗಿತ್ತು. ತನಗೆ ಸೇರಿದ ಹೊದಿಕೆಯನ್ನು ಇತರ ಭಿಕ್ಖುಗಳು ಹಂಚಿಕೊಳ್ಳುತ್ತಿದ್ದುದನ್ನು ಕಂಡ ತಿಗಣೆ ರೋದಿಸತೊಡಗಿತು. ತಿಗಣೆಯ ದುಃಖವನ್ನು ಅರಿತ ಭಗವಾನರಿಗೆ ನಗು ಬಂದಿತು. ಭಗವಾನರು ಕೂಡಲೇ, 'ಯಾವ ಭಿಕ್ಖುವೂ ತಿಸ್ಸನ ಪದಾರ್ಥಗಳನ್ನು ಮುಟ್ಟಬಾರದು' ಎಂದು ಸೂಚಿಸಿದರು. ತಿಗಣೆಗಾದರೂ ಆಯುಷ್ಯವಾದರೂ ಎಷ್ಟು? ಏಳು ದಿವಸಗಳಾದ ಮೇಲೆ ತಿಗಣೆ ಸತ್ತಿತು. ಭಗವಾನರು 'ಈಗ ಎಲ್ಲರೂ ತಿಸ್ಸನ ಪದಾರ್ಥಗಳನ್ನು ಹಂಚಿಕೊಳ್ಳಿ' ಎಂದು ಅಪ್ಪಣೆ ನೀಡಿದರು. ಆಶ್ಚರ್ಯಚಕಿತರಾದ ಭಿಕ್ಖುಗಳು, ವಾರದ ಹಿಂದೆ ಬೇಡವೆಂದು ಭಗವಾನರು ಈಗೇಕೆ ಹೀಗೆ ಹೇಳುತ್ತಿರುವರು? ಎಂಬುದನ್ನು ತಿಳಿಯಬಯಸಿದಾಗ ಭಗವಾನರು ತಿಸ್ಸನು ತಿಗಣೆಯಾಗಿ ಮರುಹುಟ್ಟು ಪಡೆದು ಮತ್ತೆ ಎರಡನೆಯ ಸಲ ಸತ್ತ ಕತೆಯನ್ನು ಅವರಿಗೆ ಹೇಳುತ್ತ, 'ಕಾಮವಿರುವವರೆಗೂ ಮೃತ್ಯುವಿನ ಬಾಧೆ ತಪ್ಪದು. ಪ್ರತಿಯೊಂದು ಕಾಮನೆಗೂ ಪ್ರತ್ಯೇಕ ಜನ್ಮವನ್ನು ಹೊಂದಬೇಕಾಗುತ್ತದೆ. ಪ್ರತಿಯೊಂದು ಕಾಮನೆಯೂ ಒಂದೊಂದು ಮೃತ್ಯುವಿನ ಅನುಭವವನ್ನು ನೀಡುತ್ತದೆ' ಎಂದು ವಿವರಿಸಿದರು.

## ಮರಣ ಹೊಂದುವುದು ಮರಣಧರ್ಮ

ಒಬ್ಬ ಶ್ರಾವಕ ತನ್ನ ಮಗನನ್ನು ಕಳೆದುಕೊಂಡು ದುಃಖಿಸುತ್ತಾ ಆ ದುಖದಲ್ಲೇ ಮುಳುಗಿ ಬುದ್ಧನ ಪ್ರವಚನಗಳಿಗೆ ಬರುವುದನ್ನೂ ನಿಲ್ಲಿಸಿಬಿಟ್ಟ. ಪುತ್ರ ಶೋಕವೆಂಬ ಕಾರ್ಮೋಡ ಅವನ ಬದುಕಿನ ನಾಲ್ಕೂ ದಿಕ್ಕುಗಳನ್ನು ಆವರಿಸಿಬಿಟ್ಟಿತ್ತು. ಅವನ ಕಣ್ಣಿಗೆ ಬುದ್ಧ ಕಾಣಿಸುತ್ತಿರಲಿಲ್ಲ, ಅವನು ದಿನೇ ದಿನೇ ತನ್ನ ಮಾನಸಿಕ ಸ್ಥಿಮಿತ ಕಳೆದುಕೊಳ್ಳುತ್ತಿದ್ದಾನೆ ಎಂಬ ಸುದ್ದಿ ಬುದ್ಧನಿಗೆ ತಲುಪಿತು. ಒಂದು ದಿನ ಬುದ್ಧ ಅವನ ಮನೆಗೇ ಬಂದು "ಏಕೆ ದುಃಖಿಸುತ್ತಿರುವೆ?" ಎಂದು ಕೇಳಿದ. ಆ ಶ್ರಾವಕನು "ಭಂತೇ, ನನ್ನ ಒಬ್ಬನೇ ಮಗನನ್ನು ಕಳೆದುಕೊಂಡೆ, ಈ ಇಳಿವಯಸ್ಸಿನಲ್ಲಿ ಅವನೇ ನನಗೆ ಆಸರೆಯಾಗಿದ್ದ" ಎಂಬ ಮಾತುಗಳನ್ನಾಡುತ್ತಿದ್ದಂತೆಯೇ ಮತ್ತೆ ದುಃಖ ಉಮ್ಮಳಿಸಿ ಎದೆ ಬಡಿದುಕೊಂಡು ರೋಧಿಸಲಾರಂಭಿಸಿದ. ಆಗ ಬುದ್ಧನು "ಮರಣ ಧರ್ಮವು ಮರಣ ಹೊಂದಿತಷ್ಟೆ, ಸಾವಿಲ್ಲದುದು ಸತ್ತಿಲ್ಲ. ಸಾಯಲೇ ಬೇಕಾದುದು ಸತ್ತಿದೆ. ಮರಣ ಧರ್ಮದೊಂದಿಗೆ ವ್ಯಾಮೋಹ ಬೆಳೆಸಿಕೊಂಡಿದ್ದ ನೀನು ಅದರೊಳಗಿನ ಸಾವಿಲ್ಲದ, ನೋವಿಲ್ಲದ ರೂಹಿಲ್ಲದ ವಸ್ತುವನ್ನು ಕಾಣದೆ ಹೋದುದರಿಂದ ಈಗ ದುಃಖಿಸುತ್ತಿರುವೆ. ನೀನು ಕೂಡ ಮರಣ ಹೊಂದುವೆ ಎಂಬುದನ್ನು ಮರೆಯದಿರು. ನಿನ್ನೊಳಗಿನ ಸಾವಿಲ್ಲದುದನ್ನು ನೀನು ಅರಿತಾಗ ನಿನ್ನ ಮಗನೊಳಗಿನ ಸಾವಿಲ್ಲದ ವಸ್ತುವೂ ನಿನಗೆ ಗೋಚರಿಸೀತು. ಇದುವೆ ನಿನ್ನ ದುಃಖವನ್ನು ನಿವಾರಿಸಿಕೊಳ್ಳುವ ಉಪಾಯವಾಗಿದೆ. ಯಾರೂ ನಿನಗೆ ಪ್ರಿಯರಾಗದಿರಲಿ ಮತ್ತು ಯಾರೂ ನಿನಗೆ ಅಪ್ರಿಯರಾಗದಿರಲಿ, ಆಗ ಮಾತ್ರ ನೀನು ದುಃಖವನ್ನು ಗೆಲ್ಲಬಲ್ಲೆ. ಬದುಕನ್ನು ಅರಿವಿಗೆ ಮೀಸಲಿರಿಸಬೇಕಲ್ಲದೆ ಪ್ರಿಯವಾದದ್ದಕ್ಕೆ ಮೀಸಲಿರಿಸಬಾರದು.'

## ಏನೂ ಇಲ್ಲ!

ಭಿಕ್ಖು ಸಮೂಹದ ಹಿರಿಯ ಭಿಕ್ಖುವೊಬ್ಬರಿಗೆ ಮರಣ ಸಮೀಪಿಸಿದಾಗ ಅವರನ್ನು ಸುತ್ತುವರೆದ ಸಹ ಭಿಕ್ಖುಗಳು ನಿಮ್ಮ ಜೀವನದ ಅನುಭವ ಪಾಠ ಏನು ಎಂದು ಕೇಳಿದರು. ಆ ಹಿರಿಯ ಭಿಕ್ಖು 'ಏನೂ ಇಲ್ಲ!' ಎಂದು ಹೇಳಿ ಕೊನೆಯುಸಿರೆಳೆದರು. ಇದನ್ನು ಕೇಳಿ ಚಿಂತಿತರಾದ ಭಿಕ್ಖುಗಳು ಬುದ್ಧಗುರುವಿನಲ್ಲಿಗೆ ಹೋಗಿ ಇದನ್ನು ಅರುಹಿದಾಗ ಅವರು 'ಆತನಿಗೆ ನಿರ್ವಾಣ ಪ್ರಾಪ್ತಿಯಾಗಿದೆ. ಸೂಕ್ತ ಶವಸಂಸ್ಕಾರಕ್ಕೆ ಏರ್ಪಾಡು ಮಾಡಿ ಎಂದು ಸೂಚಿಸಿದರು.

**(ಆಯ್ಕೆ ಮತ್ತು ನಿರೂಪಣೆ : ಡಿಎಸ್ಸೆನ್ ನೆರವು : ಟಿಎನ್‌ವಿ)**

## ಪುಸ್ತಕಾವಲೋಕನ

ಪು : **ಧರೆಗಿಳಿದ ನಾಟ್ಯತಾರೆ ಬಾಲಾ** (ಬಾಲಸರಸ್ವತಿ ನೃತ್ಯ ಕಥನ) ಲೇ : **ಶೈಲಜ ಮತ್ತು ಟಿ.ಎಸ್. ವೇಣುಗೋಪಾಲ್** ಪ್ರ: **ರಾಗಮಾಲಾ,** ಮೈಸೂರು ಪು : ೨೧೭ ಬೆಲೆ : ರೂ. ೨೦೦/-

# ಸಾಟಿ ಇಲ್ಲದ ಪ್ರತಿಭೆಗೊಂದು ಸಣ್ಣ ಕನ್ನಡಿ




**ಈ** ಕೃತಿ ಅಪರೂಪದ ಕಲಾವಿದೆ ತಂಜಾವೂರು ಬಾಲಸರಸ್ವತಿ (೧೯೧೮-೧೯೮೪) ಅವರನ್ನು ಚಿತ್ರಿಸುತ್ತದೆ; ಅವರ ಅಪ್ರತಿಮ ಪ್ರತಿಭೆಯನ್ನು ಅನಾವರಣಗೊಳಿಸುತ್ತದೆ. ದೇವದಾಸಿ ಪದ್ಧತಿಯ ಪ್ರತಿಭಾವಂತರು ನೂರಾರು ವರ್ಷಗಳಿಂದ ಕಾಯ್ದುಕೊಂಡು ಬಂದ ವಿಶಿಷ್ಟ ನೃತ್ಯ ಸಾದಿರ್, ಭರತನಾಟ್ಯವಾಗಿ ರೂಪಾಂತರ ಹೊಂದಿದ್ದನ್ನು ಹೇಳುತ್ತದೆ. ತನ್ನ ಮತ್ತು ತನ್ನ ಪರಂಪರೆಯ ಬಗ್ಗೆ ಎಂದೂ ಆತ್ಮವಿಶ್ವಾಸ ಕಳೆದುಕೊಳ್ಳದ ಬಾಲಾ, ಭರತನಾಟ್ಯವನ್ನು ಜಾಗತಿಕ ಮಟ್ಟಕ್ಕೆ ಎತ್ತರಿಸಿದ ಚರಿತ್ರೆಯ ಗೆರೆಗಳೂ ಇಲ್ಲಿವೆ. ಸಾಂಸ್ಕೃತಿಕ ರಾಯಭಾರಿಗಳು ತಾವೆಂದು ಬೀಗುತ್ತ, ಸಾದಿರ್ ಕಲೆಯನ್ನು ಅನಾಮತ್ತಾಗಿ ದೇವದಾಸಿಯರಿಂದ ಕಸಿದುಕೊಂಡು, ಅದನ್ನು 'ಶುದ್ಧೀಕರಿಸಿದ್ದಾಗಿ' ಬಡಾಯಿ ಕೊಚ್ಚಿಕೊಳ್ಳುವ ಮೇಲ್ಜಾತಿ ಮತ್ತು ಮೇಲ್ವರ್ಗ ತಮಿಳ್ನಾಡಿನಲ್ಲಿ ನಡೆಸಿದ ಹುನ್ನಾರವನ್ನೂ ಈ ಕೃತಿ ಸೂಕ್ಷ್ಮವಾಗಿ ದಾಖಲಿಸುತ್ತದೆ.

ಬಾಲಾ ಎಂದೂ ಜಂಭದಿಂದ ಬೀಗಲಿಲ್ಲ. ವಿಶಾಲ ಹೃದಯದ, ಅಪಾರ ಕರುಣೆಯ, ತಾಯಕರುಳಿನ ಬಾಲ ತನ್ನ ಶಿಷ್ಯರನ್ನು ಆಪ್ತಭಾವದಿಂದ ನೋಡಿದವರು. ಪರಂಪರೆಯ ಬೇರುಗಳಿಂದ ತಾನು ಹೀರಿಕೊಂಡ ವಿದ್ಯೆಯನ್ನು ಮುಚ್ಚುಮರೆ ಇಲ್ಲದೆ ಎಲ್ಲರಿಗೂ ಹಂಚಿದವರು. ಭಾರತದಲ್ಲಿ ಮಾತ್ರವಲ್ಲ, ವಿದೇಶೀ ನೆಲದಲ್ಲೂ ತನ್ನ ಕಲೆಯನ್ನು, ಅದರ ಹಿರಿಮೆಯನ್ನು ಮೆರೆಸಿದವರು. ದೇಶೀಯ-ವಿದೇಶೀಯ ಎಂದು ಪರಿಗಣಿಸದೆ ಕಲಿಯುವ ಉಮೇದು ಇದ್ದವರಿಗೆಲ್ಲ ಕಲಿಸಿ, ಕಲೆಯ ಬೇರುಗಳನ್ನು ಗಟ್ಟಿಗೊಳಿಸಿದವರು; ಶಿಷ್ಯರ ಗಾಢ ಪ್ರೀತಿ ಗೌರವಗಳನ್ನು ಪಡೆದವರು. ಸರಳತೆ ಬಾಲಾರ ಬಹುದೊಡ್ಡ ಗುಣವಾಗಿತ್ತು. ಸರಳತೆಯಿಂದಲೇ ಅವರು ಜಗತ್ತನ್ನು ಗೆದ್ದರು. ಭರತನಾಟ್ಯದಲ್ಲಿ ಈ ಅಪ್ಪಟ ಪ್ರತಿಭೆಗೆ ಎದುರಾಗಿ ನಿಲ್ಲುವವರೇ ಇರಲಿಲ್ಲ, ಮುಂದೆಯೂ ಬರಲಿಲ್ಲ.

ದೇವದಾಸಿ ಪದ್ಧತಿಯಲ್ಲಿ ಬಹುಪಾಲು ಕಲಾವಿದರು ಬಡತನ-ಸಿರಿತನಗಳ ತೂಗುಯ್ಯಾಲೆಯಲ್ಲಿ ಸದಾ ತೂಗುತ್ತಲೇ ಇದ್ದವರು. ಬಾಲಾ ಶ್ರೀಮಂತ ಕೈಗಾರಿಕೋದ್ಯಮಿಯೂ ದಿವಾನರೂ ಆಗಿದ್ದ ವ್ಯಕ್ತಿಯನ್ನು ಮದುವೆಯಾದರೂ ಬಡತನದಿಂದ ಮುಕ್ತರಾಗಲಿಲ್ಲ. ತೀವ್ರ ಬಡತನದಲ್ಲಿಯೇ ಅಜ್ಜಿ, ತಾಯಿ, ತಮ್ಮಂದಿರು, ಮಗಳು ಎಲ್ಲರಿದ್ದ ತುಂಬು ಕುಟುಂಬವನ್ನು ನಿಭಾಯಿಸಿ, ಆತ್ಮಗೌರವವನ್ನು ಉಳಿಸಿಕೊಂಡವರು. ಹಲವು ರೋಗಗಳು ಕಾಡುತ್ತಿದ್ದ ಹೊತ್ತಿನಲ್ಲಿಯೂ, ಏಳು ತಲೆಮಾರುಗಳಿಂದ ಬಹುದೊಡ್ಡ ಆಸ್ತಿಯಾಗಿ ಉಳಿದುಬಂದಿದ್ದ ಕಲೆಯನ್ನು, ಅದರ ಸಾಂಪ್ರದಾಯಿಕ ಸತ್ವ-ಮೌಲ್ಯಗಳನ್ನು ಪೊರೆದವರು; ತಮ್ಮ ಪ್ರತಿಭಾ ಸಾಮರ್ಥ್ಯದಿಂದ ಈ ಪರಂಪರಾಗತ ಕಲೆಯ ಗಡಿರೇಖೆಗಳನ್ನು ವಿಸ್ತರಿಸಿದವರು.

ಮೇಲ್ಜಾತಿ ಮತ್ತು ವರ್ಗಗಳ ಅಹಂಕಾರವನ್ನು ಬಾಲಾ ವಿನಯದಿಂದ ಗೆದ್ದರು; ತಮ್ಮ ಅಪ್ರತಿಮ ಕಲೆಯಿಂದ ಜಗತ್ತನ್ನು ಗೆದ್ದರು. ೧೯೪೦ರ ದಶಕದಲ್ಲಿ ಮದ್ರಾಸ್ ಪ್ರಾಂತ್ಯದಲ್ಲಿ ನಡೆದ ದೇವದಾಸಿ ಪದ್ಧತಿಯ ವಿರುದ್ಧದ ಹೋರಾಟದಲ್ಲಿ ಬಾಲ ವಿಚಲಿತರಾಗದೆ ನಿಂತು, ದೇವದಾಸಿ ಪದ್ಧತಿಗೆ ಬಲ ತುಂಬಿದರು. ಕಡುಬಡತನ ಮತ್ತು ಏಕಾಂಗಿತನಗಳಲ್ಲಿ ಈ ಪದ್ಧತಿಯ ಕಲಾವಿದರು ಎದೆಗುಂದದೆ, ಅಪಾರ ಪ್ರೀತಿಯಿಂದ ತಮ್ಮ ಕಲೆಯನ್ನು ಉಳಿಸಿಕೊಂಡು ಬಂದ ಬಗ್ಗೆ ಬಾಲಾರಿಗೆ ವಿಶೇಷ ಹೆಮ್ಮೆ ಇತ್ತು. ತನ್ನ ಗುರುಗಳಾದ ಕಂದಪ್ಪ ಪಿಳ್ಳೈ ಮತ್ತು ಗೌರಿ ಅಮ್ಮಾಳ್, ತಾಯಿ ಜಯಮ್ಮಾಳ್, ಅಜ್ಜಿ ವೀಣಾ ಧನಮ್ಮಾಳ್ (ಸಂಗೀತ ಕ್ಷೇತ್ರದಲ್ಲಿ ಬಹುದೊಡ್ಡ ಹೆಸರು) ಹೀಗೆ ಶ್ರೇಷ್ಠ ಪರಂಪರೆಯ ಪ್ರತಿನಿಧಿ ತಾನು ಎಂಬ ನಿಚ್ಚಳ ತಿಳುವಳಿಕೆ ಬಾಲಾರಲ್ಲಿ ಇತ್ತು. ಎಂಥ ಸನ್ನಿವೇಶದಲ್ಲಿಯೂ ಈ ಕಲೆ, ಇದರ ಮೌಲ್ಯ ಮುಕ್ಕಾಗದಂತೆ ನೋಡಿಕೊಂಡರು; ಎತ್ತರೆತ್ತರಕ್ಕೆ ಬೆಳಸಿದರು.

ಈ ಕೃತಿ ಬಾಲಾರ ಚಿತ್ರಣಕ್ಕೆ ಮಾತ್ರ ಸೀಮಿತವಾಗಿಲ್ಲ. ಬಾಲಾರ ಕರುಳುಬಳ್ಳಿಯೊಂದಿಗೆ ಬೆಸೆದುಕೊಂಡಿದ್ದ ತಲೆಮಾರುಗಳು, ಗುರುವೃಂದ, ತಾಯಿ, ಅಜ್ಜಿ, ಪ್ರತಿಭಾವಂತ ಸೋದರರು, ಪರಂಪರೆಯ ಕೊಂಡಿಯಾದ ಮಗಳು, ಅಳಿಯ, ಮೊಮ್ಮಗ ಹೀಗೆ ಹಬ್ಬುತ್ತ ಹೋಗಿ, ಸಮಗ್ರ ಚಿತ್ರಕ್ಕೆ ಕೈಚಾಚುತ್ತದೆ.

ಈ ಕೃತಿ ಬಹುಮಟ್ಟಿಗೆ ಆಧರಿಸಿರುವುದು ಸಂದರ್ಶನಗಳನ್ನು ಮತ್ತು ಲೇಖನಗಳನ್ನು. ಮಗಳು, ಅಳಿಯ, ಮೊಮ್ಮಗ, ಶಿಷ್ಯರ ಸಂದರ್ಶನಗಳು; ಬಾಲಾರ ಸಾಕ್ಷ್ಯಚಿತ್ರ ತಯಾರಿಸಿದ ಸತ್ಯಜಿತ್‌ರಾಯ್ ಲೇಖನ; ತಮಿಳು ಇಸೈ ಹಾಗೂ ಮದ್ರಾಸ್ ಮ್ಯೂಸಿಕ್ ಅಕಾಡಮಿಯಲ್ಲಿ ಬಾಲಾ ಮಾಡಿದ ವಿದ್ವತ್‌ಪೂರ್ಣ ಭಾಷಣಗಳು- ಹೀಗೆ ವಿವಿಧ ಆಕರಗಳಿಂದ ಎತ್ತಿ, ಅನುವಾದಿಸಿ, ಸಂಪಾದಿಸಿ, ಕೊಟ್ಟಿರುವಲ್ಲಿ ಶೈಲಜಾ ಮತ್ತು ವೇಣುಗೋಪಾಲರ ಪರಿಶ್ರಮ, ಪ್ರೀತಿ ಎದ್ದು ಕಾಣಿಸುತ್ತವೆ.

ಬಾಲಾರ ಕಲೆ ಪರಂಪರೆಯ ಬೇರುಗಳಲ್ಲಿ ಅರಳಿದ್ದು; ಸಂಗೀತವನ್ನು ಪ್ರಧಾನವಾಗಿ ಆಧರಿಸಿದ್ದು. ಎಷ್ಟೋ ಸಲ ಬಾಲಾ ತಮ್ಮ ಪ್ರಸ್ತುತಿಯಲ್ಲಿ ನೃತ್ಯ ನಿಲ್ಲಿಸಿ ಹಾಡುತ್ತಿದ್ದುದೂ ಉಂಟು. ಬಾಲಾರ ಹೆಜ್ಜೆಗಳು, ಅಭಿನಯ, ಹೃದಯದ ಭಾವವನ್ನು ಬಿಂಬಿಸುವ ಮುಖಭಾವ, ಕಣ್ಣುಗಳ ಮತ್ತು ಕೈಗಳ ಚಲನೆ, ಮುದ್ರೆಗಳು, ಮನೋಧರ್ಮ, ರಾಗ, ಲಯ, ನೃತ್ಯಸಂಗೀತ ಎಲ್ಲವೂ ಸಂಪ್ರದಾಯದ ಚೌಕಟ್ಟಿನಲ್ಲಿಯೇ ಇವೆ. ಅವರ ಸೃಜನಶೀಲತೆ ಸಮೃದ್ಧವಾಗಿ ಹೊಮ್ಮುವುದೂ ಈ ನೆಲೆಯಿಂದಲೇ. ಸಂಪ್ರದಾಯದ ಬಗ್ಗೆ ಅಚಲ ನಿಷ್ಠೆ ಇದ್ದರೂ ಕೆಲವು ಸಣ್ಣ ಪುಟ್ಟ ಬದಲಾವಣೆಗಳನ್ನು ಬಾಲಾ ಮತ್ತು ಅವರ ಗುರು ಕಂದಪ್ಪ ಪಿಳ್ಳೈ ಮಾಡಿಕೊಂಡರು. ಹಿಮ್ಮೇಳದವರು ಬಳಸುತ್ತಿದ್ದ ಉಡುಗೆಗಳಲ್ಲಿ ಕಂದಪ್ಪ ಮಾರ್ಪಾಟು ಮಾಡಿದರು. ಪ್ರವೇಶ ಮತ್ತು ನಿರ್ಗಮನಗಳಿಗೆ ಸಂಬಂಧಿಸಿದಂತೆ ಬಾಲಾ ಸಾಂಪ್ರದಾಯಿಕ ಕಟ್ಟುಪಾಡುಗಳನ್ನು ಮುರಿದರು. ಆದರೆ ಸಂಪ್ರದಾಯದಲ್ಲಿದ್ದ ಗುಣಾತ್ಮಕ ಅಂಶಗಳ ಬಗ್ಗೆ ಇಬ್ಬರೂ ಎಂದೂ ಉಪೇಕ್ಷೆ ತೋರಿಸಲಿಲ್ಲ. ಬಾಲಾ ಹೆಚ್ಚು ಓದದವರಲ್ಲ. ಆದರೆ ಕಲೆಯ ಬಗ್ಗೆ ಅವರಿಗೆ ಅಗಾಧವಾದ ಅರಿವು, ವಿದ್ವತ್ತು ಇತ್ತು. ಅವರಿಗೆ ಕಾಳಿದಾಸನ ಬಗ್ಗೆ, ಶಿಲಪ್ಪದಿಕಾರಂ, ಮಣಿಮೇಖಲೈ ಮಹಾಕಾವ್ಯಗಳ ಬಗ್ಗೆ ತಿಳಿದಿತ್ತು. ಶೃಂಗಾರವನ್ನು ಅಶ್ಲೀಲ ಎಂದು ಜರಿದು ಭರತನಾಟ್ಯದಿಂದ ತೆಗೆದುಹಾಕಲು ಕೆಲವರು ಪ್ರಯತ್ನಿಸಿದಾಗ ಬಾಲಾ ಶೃಂಗಾರವನ್ನು ಸಮರ್ಥಿಸಿಕೊಂಡ ರೀತಿ ಪ್ರಬುದ್ಧವಾಗಿದೆ; ಪಾಂಡಿತ್ಯಪೂರ್ಣವಾಗಿದೆ. 'ನೃತ್ಯವೆನ್ನುವುದು ಕೆಡುಕನ್ನು ನಾಶಮಾಡುವ, ಆತ್ಮವನ್ನು ಪರಿಶುದ್ಧಗೊಳಿಸುವ ದೈವಿಕ ಕಲೆ' ಎಂಬ ಗಾಢ ನಂಬಿಕೆ ಬಾಲಾರಿಗಿತ್ತು. 'ಶರೀರದ ಮೂಲಕ ಅಧ್ಯಾತ್ಮವನ್ನು ಪ್ರಕಟಿಸುವ ನೃತ್ಯ ಒಂದು ಕಲಾಯೋಗ' ಎನ್ನುತ್ತಿದ್ದರು ಬಾಲಾ. 'ಮಾನವ ಮತ್ತು ದೈವದ ನಡುವಿನ ಮಿಲನದ ಅನುಭಾವವನ್ನು ಶೃಂಗಾರದಷ್ಟು ಸೊಗಸಾಗಿ ಅಭಿವ್ಯಕ್ತಿಸಲು ಇನ್ನಾವುದೇ ರಸಕ್ಕೂ ಸಾಧ್ಯವಿಲ್ಲ' ಎಂದೂ ಸಮರ್ಥಿಸುತ್ತಿದ್ದರು. ಅವರ ಬದುಕು-ಕಲೆ-ನಂಬಿಕೆಯಲ್ಲಿ ಬಿರುಕೆಂಬುದು ಇರಲಿಲ್ಲ.

ಇಂಥ ಸೂಕ್ಷ್ಮ ವಿಚಾರಗಳನ್ನು ಈ ಕೃತಿ ಕಟ್ಟಿಕೊಡುತ್ತದೆ. ಬಾಲಾರ ಕಲೆ, ಅದರ ವಿಶೇಷತೆ, ಮಹತ್ವಗಳ ಬಗ್ಗೆ ಈ ಕೃತಿ ನಿಖರವಾಗಿ ಮಾತನಾಡುತ್ತದೆ. ಆದರೆ ಬಾಲಾರ ಬದುಕಿನ ವಿವರಗಳು ಸಾಕಷ್ಟು ಇಲ್ಲದಿರುವ ಕೊರತೆಯನ್ನು ಉಳಿಸುತ್ತದೆ.

ದಕ್ಷಿಣ ಭಾರತದಲ್ಲಿ ದೇವದಾಸಿ ಪದ್ಧತಿ ಸಂಗೀತ-ನೃತ್ಯ ಕಲೆಗಳನ್ನು ಪೋಷಿಸಿಕೊಂಡು ಬಂದಿದ್ದ ರೀತಿ-ನೀತಿ, ಅದರ ಕಲಾನಿಷ್ಠೆ, ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಪಲ್ಲಟಗಳಿಗೆ ಎದೆಕೊಟ್ಟು ನಿಂತ ಈ ಸಮುದಾಯದ ಉದಾತ್ತ ನಿಲುವು ಇತ್ಯಾದಿ ಸಂಗತಿಗಳ ಚರಿತ್ರೆ ಬಹಳ ಮುಖ್ಯವಾದದ್ದು. ಈ ಚರಿತ್ರೆಯನ್ನು ಇಲ್ಲಿ ಅಷ್ಟಾಗಿ ಪರಿಗಣಿಸಿಲ್ಲ. ಜಗದೀಶ್ ಕೊಪ್ಪ ಈ ದಿಕ್ಕಿನಲ್ಲಿ ನಡೆಸಿರುವ ಶೋಧ ಮತ್ತು ಎಂ.ಎಸ್.ಸುಬ್ಬುಲಕ್ಷ್ಮಿ, ಬೆಂಗಳೂರು ನಾಗರತ್ನಮ್ಮ ಮೊದಲಾದವರನ್ನು ಕುರಿತು ಅವರು ಪ್ರಕಟಿಸಿರುವ ಕೃತಿಗಳು ಈ ಕೊರತೆಯನ್ನು ತುಂಬುವಂತಿವೆ.

**-ಜಿ.ಪಿ.ಬಸವರಾಜು**

ಪು: **ಹೊಸ ಬ್ರಾಹಣ ಸನ್ಯಾಸಿ** (ನಾಟಕ) ಲೇ: **ಡಾ. ಅರವಿಂದ ಮಾಲಗತ್ತಿ**
ಪ್ರ: **ಲಡಾಯಿ ಪ್ರಕಾಶನ** ಗದಗ ಪು :೧೦೮ ಬೆಲೆ : **ರೂ. ೯೦/-**

## ಮಾನವತ್ವವನ್ನು ಪ್ರತಿಪಾದಿಸುವ ನಾಟಕ




ಇದೊಂದು ಐತಿಹಾಸಿಕ ನಾಟಕ. ಒಡೆಯರ ಕಾಲದ (೧೬೪೫–೧೬೮೫) ಸಂಗತಿಗಳನ್ನು ಒಳಗೊಂಡ ವಸ್ತುವಿನದು. ನಂತರದ ದಿನಮಾನಗಳಲ್ಲಿ ಚಿಕ್ಕದೇವರಾಜ ಒಡೆಯರು ಅಧಿಕಾರಕ್ಕೆ ಬಂದಕಾಲದಲ್ಲಿ (೧೬೭೩–೧೭೦೪) ರಲ್ಲಿ ನಡೆದ ರೈತ ದಂಗೆಯೊಂದರ ಘಟನೆಯೊಂದಿಗೆ ತಳುಕು ಹಾಕಿ, ಕೆಲ 'ಗೃಹೀತ' (ಕಲ್ಪಿಸಿದ) ಪಾತ್ರಗಳನ್ನು ಹೊಂದಿಸಿ ಬರೆದ ನಾಟಕ ಇದೆಂದು ಕೃತಿಕಾರ ಅರವಿಂದ ಮಾಲಗತ್ತಿಯವರು ಪ್ರಸ್ತಾವನೆಯಲ್ಲಿ ಹೇಳಿದ್ದಾರೆ.

ಅರಸರಿಂದ 'ಬಸವಪುರ'ವನ್ನು ದಾನವಾಗಿ ಪಡೆದು ಅಲ್ಲಿ ಸ್ವಾಮಿ ಲಿಯೊನಾರ್ಡೊ ಸಿನ್ನಮಿ ಚರ್ಚೊದನ್ನು ಕಟ್ಟಿಸುತ್ತಾನೆ – ನಂತರದ ಸ್ತಿತಿಗತಿಯನ್ನು ಕುರಿತು ನಾಟಕ ಚರ್ಚಿಸುತ್ತದೆ ಇದು 'ಚರ್ಚೆ'ಯಾಗದೆ ನಾಟಕವಾಗಿ ಕ್ರಿಯಾತ್ಮಕವಾಗಿರಬೇಕಿತ್ತೇನೋ ಎಂದೆನಿಸದಿರದು.

ರೈತ ದಂಗೆಯನ್ನು ಶಮನಗೊಳಿಸಲು ನಡೆದ ಸಂಧಾನದ ಸಂದರ್ಭದಲ್ಲಿ ಮಂತ್ರಿಗಳ ತಂತ್ರಗಾರಿಕೆಯಿಂದಾಗಿ ಸಂಧಾನಕ್ಕೆಂದು ಬಂದ ರೈತರ ಮಠಾಧೀಶರ ಸ್ವಾಮಿಗಳ ಶರಣರ ಕೊಲೆಯೂ ನಡೆದುಹೋಗುತ್ತದೆ. ರಾಜಕಾರಣ–ಧರ್ಮಕಾರಣದ ಸಂಘರ್ಷದಲ್ಲಿ ಆಯಾ ಮತಗಳ ಮಠಾಧೀಶರು, ಗುರುಗಳು ಆಚಾರ್ಯರು ತಮ್ಮ ಜಾತಿ ಮತಧರ್ಮಗಳ ಶ್ರೇಷ್ಠತೆಗಾಗಿ ಶ್ರಮಿಸುತ್ತಾರೆ. ಸಿನ್ನಮಿ ಎಂಬ ಭ್ರಾಹ್ಮಣ ಸನ್ಯಾಸಿ ವೇಷದ ಪಾದ್ರಿಯು ಆಗಮಿಸಿ ಕ್ರಿಸ್ತ ಧರ್ಮದ ಪ್ರಚಾರದಲ್ಲಿ ತೊಡಗಿರುತ್ತಾನೆ. ನನ್ನನ್ನು ಕ್ರಿಸ್ತನೇ ಕಳಿಸಿದ್ದಾನೆಂದು ಹೇಳಿಕೊಳ್ಳುತ್ತಾ ನಾನು 'ಹೊಸ ಬ್ರಾಹ್ಮಣ ಸನ್ಯಾಸಿ' ಕೊರಳಲ್ಲಿ ಕ್ರಿಸ್ತ ಇರೋ ಬ್ರಾಹ್ಮಣ ಸಿನ್ನಮಿ. ನಿಮ್ಮ ಸುಖ ದುಃಖಗಳೆಲ್ಲಾ ನನ್ನ ಸುಖ ದುಃಖಗಳೇ ಎಂಬ ನಯವಾದ ಮಾತುಗಳಿಂದ ಪವಾಡಗಳನ್ನು ಮಾಡಿದಂತೆ ನಟಿಸುತ್ತಾ, ಜನರನ್ನು ವಂಚಿಸುತ್ತಾನೆ. ಮರುಳಾದ ಜನ ಕುರಿಗಳಂತೆ ಹಿಂಬಾಲಿಸುತ್ತಾರೆ. ಕೆಲವರು ಇವನ ವಂಚನೆಯ ಜಾಲವನ್ನು ಬಯಲಿಗೆಳೆಯುತ್ತಾರೆ. ಹಲವು ಮಠಾಧೀಶರು ಇವನ ಕುತಂತ್ರದಿಂದ ಹಿಂದೂಧರ್ಮವನ್ನು ಸಂರಕ್ಷಿಸಲು ತಮ್ಮ ತಮ್ಮ ಮಠಗಳನ್ನು ಭದ್ರ ಪಡಿಸಿಕೊಳ್ಳಲು ಹೆಣಗುತ್ತಿರುತ್ತಾರೆ. ಆಶೆ ಆಮಿಶಕ್ಕೊಳಗಾದ ಜನರನ್ನು ಮತಾಂತರವಾಗುವುದನ್ನು ತಡಗಟ್ಟಿ ತಮ್ಮ ತಮ್ಮ ಮತಗಳಿಗೆ ಹಿಂದಿರುಗಿಸಲು ಶ್ರಮಿಸುತ್ತಾರೆ. ಇಂಥ ಸಂದರ್ಭದಲ್ಲಿ ವೈದಿಕ –ಶೈವ, ಬಸವ–ವೀರಶೈವ ಮತಗಳ ಮತೀಯ ಸಂಘರ್ಶವೂ ಏರ್ಪಡುತ್ತಾ ಹೋಗುತ್ತದೆ. ಗುರು ಪರಂಪರೆಯ ತಿಕ್ಕಾಟದಿಂದಾಗಿ ದೀನ ದಲಿತರು ಸಂದಿಗ್ಧದಲ್ಲಿರುತ್ತಾರೆ. ಹಿಂದೂ ಧರ್ಮದ ಮತೀಯ ಒಳಗುದಿಯ ನಡುವೆಯೇ ಜೈನ ಬೌದ್ಧ ಧರ್ಮಿಯ ಶ್ರಮಣರು ನುಸುಳಿ ಶಾಂತಿ ಸೌಹಾರ್ದದ ಮಂತ್ರವನ್ನು ಜಪಿಸುತ್ತಾರೆ. ಇಷ್ಟೆಲ್ಲಾ ರಾದ್ಧಾಂತ ನಡೆಯುತ್ತಿರುವಾಗ ಸಿನ್ನಮಿ ಹೊಸ ಬ್ರಾಹ್ಮಣ ಸನ್ಯಾಸಿ ಮಾಯವಾಗಿಬಿಡುತ್ತಾನೆ. ಚರ್ಚುಗಳು ಹುಟ್ಟಿಕೊಳ್ಳುತ್ತವೆ. ಪಾದ್ರಿಗಳ ಪ್ರವೇಶವಾಗುತ್ತದೆ. ಮತ ಧರ್ಮಗಳ ನಡುವಿನ ಸಂಘರ್ಷ ಇಂದು ನಮ್ಮ ದೇಶದಲ್ಲಿ ನಡೆಯುತ್ತಿರುವ ಸಂಘರ್ಷದಂತೆ ತೋರುತ್ತದೆ. ಮತ ಧರ್ಮಗಳಿಗಿಂತ 'ಮಾನವಧರ್ಮ'ವೇ, ಮುಖ್ಯ ಎಂಬ ಮಾತುಗಳು ಕೇಳಿಬರುತ್ತವೆ.

ಈ ನಡುವೆ ಬರದಿಂದ ಸೊರಗಿದ ರೈತ ದಂಗೆಕೋರರು ಪರಿಹಾರಕ್ಕಾಗಿ ಅರಮನೆ ನ್ಯಾಯಾಲಯಗಳಿಗು ಮುತ್ತಿಗೆ ಹಾಕುತ್ತಾರೆ. ಮಠಾಧೀಶರು ಇನ್ನಿತರ ಮತೀಯ ಪ್ರಮುಖರು ಸಂಧಾನಕಾರರಾಗಿ ಪ್ರವೇಶಮಾಡುತ್ತಾರೆ. ಕಂದಾಯ ಲೆವಿ ಎಲ್ಲವನ್ನು ರದ್ದುಗೊಳಿಸಬೇಕೆಂಬ ಕೋರಿಕೆಯನ್ನು ಮುಂದಿಡುತ್ತಾರೆ. ಜೊತೆಯಲ್ಲೇ ಧರ್ಮಕಾರಣ, ಮತಾಂತರದ ಪಿಡುಗಿಗೂ ಪರಿಹಾರ ಬೇಡುತ್ತಾರೆ.

ಸಂಧಾನಕ್ಕಾಗಿ ಬರುವ ಶರಣರಿಗು ದಂಗೆಯ ಮುಖಂಡರಿಗೂ ಮೇಲ್ಜಾತಿಯ ಪ್ರಮುಖರಿಗೂ ಪ್ರತ್ಯೇಕವಾಗಿ 'ಪ್ರಸಾದ' ವ್ಯವಸ್ಥೆಯನ್ನು ಮಾಡಿಸಿ ಸಣ್ಣ ಗುಂಪುಗಳಾಗಿ ಸರದಿಯಲ್ಲಿ ಒಳಗೆ ಬರುವಂತೆ ವ್ಯವಸ್ಥೆಮಾಡಿರುತ್ತಾರೆ. ಹಾಗೆ ಬಂದ ಪ್ರತಿಯೊಬ್ಬರಿಂದಲೂ ಒತ್ತಾಯದಿಂದ ಖಾಸಗಿ ಮತ್ತು ಮಠದ ಆಸ್ತಿಗಳನ್ನು ರಾಜ್ಯ ಸುಪರ್ದಿಗೆ ಬರೆಸಿಕೊಳ್ಳುತ್ತಾರೆ. ಪ್ರಸಾದ ಹಾಕುವ ನೆಪದಲ್ಲಿ ಮಂತ್ರಿಗಳ ಕುತಂತ್ರದಿಂದಾಗಿಸಂಧಾನಕ್ಕಾಗಿ ಬಂದಿದ್ದ ಶರಣರ ಮತ್ತು ಸಂಧಾನಕಾರ ಕಗ್ಗೊಲೆಯೂ ನಡೆದು ಹೋಗುತ್ತದೆ. 'ಇದು ಪ್ರಸಾದದ ಮನೆಯಲ್ಲ, ಸವಿನಯದಿಂದ ನಮ್ಮನ್ನು ಸಾವಿನ ಕೂಪಕ್ಕೆ ಹಾಕುತ್ತಿದ್ದಾರೆ' ಎಂದು ಚೀರುತ್ತಾ ಹೊರಬಂದ ಸಂಧಾನಕಾರನೊಬ್ಬನನ್ನು ದ್ವಾರಪಾಲಕ ಬಾಯಿ ಮುಚ್ಚಿ ಮತ್ತೆ ಸಾವಿನ ಮನೆಗೆ ತಳ್ಳುತ್ತಾನೆ.

ಇಷ್ಟೆಲ್ಲಾ ನಡೆದು ಹೋದಮೇಲೆ, ನಡೆದುಹೋದ ಘಟನೆಗಳ ಸಮೀಕ್ಷೆಮಾಡಲು ಸ್ವತಃ ಚಿಕ್ಕದೇವರಾಜ ಒಡೆಯರೇ ಬರುತ್ತಾರೆ. ಭಗ್ನವಾದ ಗುಡಿ-ಚರ್ಚು–ಬಸದಿಗಳು– ಮಠಗಳು ನಾಮಾವಶೇಷವಾಗಿರುವುದನ್ನು ನೋಡುತ್ತಲೇ ತಮ್ಮ ರಾಜ್ಯದ ಹಿತಕ್ಕಾಗಿ ಮಂತ್ರಿಗಳು ನಡೆಸಿದ ಸಂಚಿನ ಕೊಲೆಗೆ ಒಪ್ಪಿಗೆ ಕೊಟ್ಟದ್ದಕ್ಕಾಗಿ ಪಶ್ಚಾತ್ತಾಪ ಪಡುತ್ತಾರೆ. ಜಾತಿ–ಧರ್ಮ –ಮತ ಇವುಗಳಿಂದ ಬಿಡುಗಡೆಯ ಸಾಧ್ಯತೆಯ ಬಗ್ಗೆ ಆಲೋಚಿಸುತ್ತಾರೆ. ನಾನು ಸೋತರೂ ಪ್ರಜೆಗಳ ಹಿತವನ್ನು ರಾಜ್ಯ ಹಿತವನ್ನು ಕಾಪಾಡಬೇಕೆಂಬ ಅರಿವುಂಟಾಗುತ್ತದೆ. ಅದಕ್ಕಾಗಿ ಜಾತಿ ಮತ ಧರ್ಮಗಳನ್ನು ಮೀರಿದ 'ಸೆಕ್ಯುಲರ್' ಮನೋಧರ್ಮವನ್ನು ತರಲು ಘೋಷಿಸುತ್ತಾರೆ. 'ಜಾತಿ– ಮತ ಧರ್ಮಗಳು ಆಹಾರ ಆಚಾರಗಳು ಎಲ್ಲವೂ ನಿಮ್ಮ ನಿಮ್ಮ ಮನೆಯಲ್ಲಿರಲಿ, ಹೊಸ್ತಿಲ ದಾಟದಿರಲಿ. ಈ ರಾಕ್ಷಸೀ ಕೃತ್ಯಗಳನ್ನು ತೊಲಗಿಸಿ ನಾವೆಲ್ಲಾ ಮನುಷ್ಯರಾಗೋಣ – ಹೊಸಬೀಜ ಬಿತ್ತಿ, ಹೊಸಬೆಳೆಯನ್ನು ಬೆಳೆಯಿರಿ, ಹೊಸಗಾಳಿ ಬೆಳಕು ತೇಲಿಬರಲಿ' ಎಂಬ ಮಾತು(ಇಂದಿನ ರಾಜಕಾರಣಿಗಳ ಭಾಷಣದಂತೆ)ಗಳೊಂದಿಗೆ ನಾಟಕ ಮುಕ್ತಾಯವಾಗುತ್ತದೆ.

ಆಶಯವೆಷ್ಟೇ ಗಹನವಾಗಿದ್ದರೂ, ಪುಸ್ತುಕ ಭಾಷೆಯ ಸಂಭಾಷಣೆ ಚರ್ಚೆ, ಪ್ರವಚನಗಳಿಂದ ನಾಟಕ ಪರಿಣಾಮಕಾರಿಯಾಗಲಾರದು. ಓದಬಹುದಷ್ಟೆ. ರಂಗ ಪ್ರಯೋಗದಿಂದ ಪ್ರೇಕ್ಷಕರನ್ನು ಪರಿಣಾಮಕಾರಿಯಾಗಿ ಮುಟ್ಟಬೇಕಾದರೆ ಹಾಡು ಕುಣಿತ, ನಾಟಕೀಯವಾದ ಭಾಷೆ ಕ್ರಿಯೆ ಸಂಘರ್ಗಗಳಿಂದ ದೃಶ್ಯ ಕಟ್ಟುವ ಸಾಧ್ಯತೆಗಳನ್ನು ಒಳಗೊಂಡಿರಬೇಕು. ಆದರೂ ನಾಟಕಕಾರರ ಸದಾಶಯ ಇಂದಿನ ಭಾರತದ ಸ್ಥಿತಿಯಲ್ಲಿ ತುಂಬ ಪ್ರಸ್ತುತವಾದುದೇ ಆಗಿದೆ. ಇದನ್ನು ರಂಗರೂಪವಾಗಿಸಲು ಪರಿಶ್ರಮಿಸಿರುವ ಡಾ. ಅರವಿಂದ ಮಾಲಗತ್ತಿಯವರನ್ನು ಅಭಿನಂದಿಸೋಣ.

**–ಸತ್ಯನಾರಾಯಣರಾವ್ ಅಣತಿ**

---

**೧೫ನೇ ಪುಟದಿಂದ)**

ದುರಂತ ಪ್ರಸಂಗವನ್ನು ಇಡೀ ಮಹಾಭಾರತದ ಕಥಾ ಭಿತ್ತಿಯ ಹಿನ್ನೆಲೆಯಲ್ಲಿ ಕೇವಲ ಏಳೆಂಟು ಜನರ ನಟನಾ ತಂಡದ ಮೂಲಕ ತನ್ನದೇ ವ್ಯಾಖ್ಯಾನದೊಂದಿಗೆ ಕಟ್ಟಿಕೊಟ್ಟ ನಿರ್ದೇಶಕರ ರಂಗಕೌಶಲ ಅದ್ಭುತವೆನಿಸುವಂತಿತ್ತು. ಈ ಪ್ರದರ್ಶನವನ್ನು ಅಷ್ಟಾಗಿ ಮೆಚ್ಚದ –ಬಹುಶಃ ಅದರ ವ್ಯಾಖ್ಯಾನದ ಕಾರಣದಿಂದಾಗಿ–ಗಣೇಶ್, 'ನಿಮಗೆ ನಾಟಕವೊಂದರ ದರ್ಶನೀಯತೆ ಬಹುಮುಖ್ಯ ಎಂದು ಕಾಣುತ್ತದೆ' ಎಂದರು. ಹೌದು ನಾಟಕ ನಮಗೆ ಅಂತಿಮವಾಗಿ ಮನಸ್ಸಿಗೆ ತಟ್ಟುವುದು ಮೊದಲು ಕಣ್ಣು ಅದರ ಜೊತೆಯಲ್ಲೇ ಕಿವಿಗಳನ್ನು ಅರಳಿಸುವ ಮೂಲಕ. ನಮ್ಮ ಪಾರಂಪರಿಕ ನಾಟಕ ಕಲೆಯ ಈ ಮೂಲ ಪಾಠ ಮತ್ತು ಉಪಾಯವನ್ನೇ ನಾವು ಮರೆತಂತಿದೆ. ನಮ್ಮ ಗಮನವೆಲ್ಲ ನಾಟಕವಾಗಿ ನೇರವಾಗಿ ಕಣ್ಣು ಕಿವಿಗಳಿಲ್ಲದ ಮನಸ್ಸಿಗೆ– ಅಂದರೆ ಮಿದುಳಿಗೇ ನಾಟಿಸುವ ಪ್ರಯತ್ನವಾದಂತಿದೆ' ಎಂದೆ ನಾನು.

ನಾನು ನೋಡಿದ ಇನ್ನೆರಡು ಪ್ರಯೋಗಗಳ ಪೈಕಿ ರಂಗಾಯಣದ ರೆಪರ್ಟರಿಗಾಗಿ ಸವಿತಾರಾಣಿಯವರು ನಿರ್ದೇಶಿಸಿದ 'ಟ್ರಾನ್ಸ್‌ನೇಷನ್'', ರೆಪರ್ಟರಿಯ ನಟ–ನಟಿಯರನ್ನು ನವನವೀನ ಪ್ರಯೋಗಗಳಿಗೆ ಒಳಪಡಿಸುವ ಮೂಲಕ ಒಳ್ಳೆಯ ರಂಗ ತಂಡವನ್ನಾಗಿ ಬೆಳೆಸಬಹುದು ಎಂಬ ಆಸೆ ಹುಟ್ಟಿಸಿದ್ದರ ಹೊರತಾಗಿ ಮತ್ತಾವ ಸಂದೇಶವನ್ನೂ ನೀಡಲಾಗದಷ್ಟು ಮಹತ್ವಾಕಾಂಕ್ಷೆಯನ್ನು ತನ್ನ ತಲೆಯ ಮೇಲೆ ಹೊತ್ತು ಬಳಲಿದರೆ, ಈ ರಂಗೋತ್ಸವಕ್ಕೆ ಅಂತಾರಾಷ್ಟ್ರೀಯವೆಂಬ ಅಭಿದಾನ ನೀಡಿದ ಸಿಂಗಪುರದ ತಂಡವೊಂದರ 'ವೆನ್ ವಿ ಡೆಡ್ ಅವೇಕನ್' ಎಂಬ ಪ್ರಯೋಗವು ನಾನೂ ಸೇರಿದಂತೆ ಬಹಳ ಜನರಿಗೆ ಸಾಂಕೇತಿಕತೆಯ ಹೆಸರಿನ ಹುಚ್ಚಾಟವಾಗಿದ್ದಂತೆ ಕಂಡರೂ ಕೆಲವರಿಗೆ ಅದರ ಸಾಂಕೇತಿಕ ರಂಗಕೌಶಲ್ಯಗಳಿಗಾಗಿ ಇಷ್ಟವಾಯಿತಂತೆ. ನಾನು ಅಷ್ಟು ಸೂಕ್ಷ್ಮನಲ್ಲವೇನೋ, ತಿಳಿಯದು!

**ವಿದ್ಯಾರ್ಥಿಗಳ ಮೆಚ್ಚಿನ ಅಧ್ಯಾಪಕರೂ ಮತ್ತು ಹಿರಿಯ ಲೇಖಕರೂ ಆಗಿದ್ದ ಡಾ. ಎಸ್. ಪ್ರಭುಶಂಕರ ಅವರ ನಿಧನಕ್ಕೆ 'ಹೊಸ ಮನುಷ್ಯ' ತನ್ನ ತೀವ್ರ ಸಂತಾಪವನ್ನು ವ್ಯಕ್ತಪಡಿಸುತ್ತದೆ–ಸಂ.**

'ಹೊಸ ಮನುಷ್ಯ' ಓದುಗರೆಲ್ಲರಿಗೂ
ಶುಭಾಶಯಗಳು!



ಪ್ರೊ. ಎಂ. ಚಂದ್ರಶೇಖರಯ್ಯ
ಮತ್ತು ಕುಟುಂಬ
**ಭದ್ರಾವತಿ**

'ಹೊಸ ಮನುಷ್ಯ' ಓದುಗರೆಲ್ಲರಿಗೂ
ಶುಭಾಶಯಗಳು!



**ತಾರಿಣಿ ಶುಭದಾಯಿನಿ**
**ಮತ್ತು ಕುಟುಂಬ**
ಚಿತ್ರದುರ್ಗ

'ಹೊಸ ಮನುಷ್ಯ' ಓದುಗರೆಲ್ಲರಿಗೂ
ಶುಭಾಶಯಗಳು!



**ಮೆ. ಎಂ. ಮೂನಿಸ್ವಾಮಿ ಅಂಡ್ ಸನ್ಸ್**
ಪುಸ್ತಕ ಪ್ರಕಾಶಕರು ಮತ್ತು ವಿತರಕರು
ಸರ್ವೋದಯ', ನಂ.೭೨, ಪ್ರೊ. ಎ.ಆರ್.ಕೃಷ್ಣಶಾಸ್ತ್ರಿ ರಸ್ತೆ
ಬಸವನಗುಡಿ, ಬೆಂಗಳೂರು-೫೬೦೦೦೪

## ತಿಂಗಳ ಸಾಲುಗಳು...



ನೀರಿಗಿಂತ ನಿರ್ಬಲವಾದದ್ದು ಮತ್ತೊಂದಿಲ್ಲ.
ಕಲ್ಲಾದುದನ್ನು ಗೆಲ್ಲುವುದರಲ್ಲಿ ನೀರಿನ ಸಮಾನ ಮತ್ತೊಂದಿಲ್ಲ.
ನಿರ್ಬಲತೆಯ ಬಲವೇ ಬಲವು!
ನಯದ ಗಡಸೇ ಗಡಸು!
ಇದ ತಿಳಿಯದವರು ಯಾರು?
ಇದರಂತೆ ನಡೆದವರು ಯಾರು?

–ತಾವೋ ಗುರು ಲಾವೋತ್ಸೆ

*ಶುಭಾಶಯಗಳೊಂದಿಗೆ,*

**ಆರ್. ಉಮೇಶ್ ಅಂಡ್ ಅಸೋಸಿಯೇಟ್ಸ್**
ಲೆಕ್ಕ ಪರಿಶೋಧಕರು, ಮೈಸೂರು
ಮೊಬೈಲ್ : ೯೪೪೮೦೮೪೭೯೩

HOSA MANUSHYA, a kannada Socialist monthly solely owned, edited, published and printed by D.S. Nagabhushana, at HIG-5,Kallahally Extn.,Vinoba Nagara, SHIVAMOGGA-577204. Printed at Replica Offset Printers, No.14/1, 1st Main, Industrial Town, Rajaji Nagara, Bengaluru-560 044 Ph: 08023357963

**Regd. News Paper** RNI No. KARKAN/2012/47568
Rgd No. KA/SK/SMG-1209/2016-18

ಇವರಿಗೆ \ To

If undelivered, please return to D.S. Nagabhushana, Editor,
'Hosa Manushya', 'HIG-5, 'Nudi', Kallahalli Extension,
Vinoba Nagara, Shivamogga -577204( Karnataka)